
ಸಂಪುಟ 23 ಸಂಚಿಕೆ 19-20
ಮೇ 20, 2001 ಬೆಲೆ ರೂ. 3.00

ಪ್ರಕ್ಷೋರಂಗ


ದುಡಿವ ಜನರ ಪ್ರಾಣಮಿತ್ರ


ಮುನ್ಸಿಪಲ್ ಚುನಾವಣೆ: ಮುಖಭಂಗಕ್ಕೀಡಾದ ಬಿಜೆಪಿ





ಮಾಹಿತಿ ತಂತ್ರಜ್ಞಾನ ಕನಸಿನ ಯುಗ ಮುಗಿಯಿತೇ?





ಅಮೆರಿಕಾದ ಯುದ್ಧಕೋರತನವೂ ಮತ್ತು ಬಿಜೆಪಿಯ ಗುಲಾಮತನವೂ

ಪ್ರಗತಿಯ ಬೆನ್ನೇರಿದ ಪ.ಬಂಗಾಳ

'ಶಾಸ್ತ್ರಿ' ಚಿತ್ರ ವಿಮರ್ಶೆ

ಪ್ರಥಮ ಎಡರಂಗ ಸರಕಾರ

ಇದು ನಮಗೆ ಅವಮಾನ ಎಂದು ಇಂಥ ಪರಿಸ್ಥಿತಿಯಲ್ಲಿ ಮಾತುಕತೆ ಅಸಾಧ್ಯ ಎಂದೂ ನಾನು ಸ್ಪಷ್ಟಪಡಿಸಿದೆ.

ಆಯಾಯ ಪಕ್ಷಗಳ ಬಲಾಬಲದ ಆದಾರದಲ್ಲಿ ಸ್ಥಾನಗಳ ಹಂಚಿಕೆ ಆಗಬೇಕು. ಪಕ್ಷಗಳ ಅಭ್ಯರ್ಥಿಯ ವೈಯಕ್ತಿಕ ಅಂಗೀಕಾರಾರ್ಹತೆ ಹಾಗೂ ಅವರ ಗೆಲುವಿನ ಅವಕಾಶಗಳನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ರಾಜ್ಯ ಘಟಕದ ಸೂತ್ರ ಮಾತುಕತೆಗೆ ಆಧಾರವಲ್ಲ ಎಂದು ಹೇಳಿದ ಜನತಾಪಕ್ಷದ ನಾಯಕರು, ಸ್ಥಾನ ಹೊಂದಾಣಿಕೆ ವಿಷಯದಲ್ಲಿ ಇನ್ನಷ್ಟು ಚರ್ಚೆ ಅಗತ್ಯ ಎಂದರು. ಜನತಾ ಪಕ್ಷ ತನ್ನ ಒಂದು ಸಭೆಯನ್ನು ನಡೆಸಿತು. ಉಭಯ ಕಡೆಗಳವರೂ ತಮ್ಮ ತಮ್ಮ ಪಟ್ಟಿಯನ್ನು ಸಿದ್ಧಪಡಿಸಬೇಕು. ಅವುಗಳಿಂದ ಒಂದು ಸರ್ವಸಮ್ಮತ ಪಟ್ಟಿ ರೂಪುಗೊಳ್ಳಬೇಕು ಎಂದು ಆ ಸಭೆ ತೀರ್ಮಾನಿಸಿತು.

ಜನತಾಪಕ್ಷದ ತಿಕ್ಕಲುತನ

ನಾನು ನಮ್ಮ ಪಟ್ಟಿಯನ್ನು ತಯಾರಿಸಿದೆವು. ಜನತಾ ಪಕ್ಷ ಮಾಡಲಿಲ್ಲ. ಕಾಂಗ್ರೆಸ್ ಪಕ್ಷ ಧೂಳೀಪಟ ಆಗಿರುವುದರಿಂದ ಹಿಂದೆ ಕಾಂಗ್ರೆಸ್ ಹೊಂದಿದ್ದ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಅವಕಾಶವನ್ನು ತನಗೆ ಕೊಡಬೇಕು ಎಂಬ ವಿಚಿತ್ರ ವಾದವನ್ನು ಜನತಾಪಕ್ಷ ಮುಂದಿಟ್ಟಿತು. ನಾವು ಅದನ್ನು ಒಪ್ಪುವುದು ಸಾಧ್ಯವೇ ಇರಲಿಲ್ಲ.

ಮಾತುಕತೆ ಮುಂದುವರಿಸುವುದರಲ್ಲಿ ಅರ್ಥವಿಲ್ಲ ಎಂಬುದು ನಮ್ಮ ಪಕ್ಷದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸ್ಪಷ್ಟವಾಯಿತು. ಜನತಾಪಕ್ಷ ನಮಗೆ 90ಕ್ಕಿಂತ ಹೆಚ್ಚು ಸ್ಥಾನ ಕೊಡಲು ಸಿದ್ಧವಿರಲಿಲ್ಲ. ಆದರೆ ನಾವು ಅವರಿಗೆ ಶೇಕಡಾ 52 ಸ್ಥಾನಗಳ ಆಹ್ವಾನ ನೀಡಿದ್ದೆವು. ನಮ್ಮ ಸೂತ್ರದ ಪ್ರಕಾರ ಅವರು 153 ಸ್ಥಾನಗಳಲ್ಲಿ ಹಾಗೂ ನಾವು 141 ಕ್ಷೇತ್ರಗಳಲ್ಲಿ ಸ್ಪರ್ಧಿಸಬಹುದಿತ್ತು. ಅವರು ಇದನ್ನೂ



ತಿರಸ್ಕರಿಸಿದರು. ಕಳೆದ ನಾಲ್ಕು ಚುನಾವಣೆಗಳ ಅನುಭವದ ಆಧಾರದಲ್ಲಿ ತಮ್ಮ ಸೂತ್ರ ರೂಪಿತವಾಗಿದೆ ಎಂಬುದು ಜನತಾಪಕ್ಷ ಮುಖಂಡರ ಅಭಿಪ್ರಾಯವಾಗಿತ್ತು. ಈ ಹಂತದಲ್ಲಿ ಪ್ರಮೋದ ಬಾಬು ಫಲಿತಾಂಶಗಳ ವಿವರಗಳನ್ನು ಮುಂದಿಟ್ಟರು. ಅದರ ಪ್ರಕಾರ ಕಾಂಗ್ರೆಸ್ ಸರಾಸರಿ ಹೊಂದಿದ್ದ 132 ಸ್ಥಾನಗಳಿಗಿಂತ ಹೆಚ್ಚು ಸ್ಥಾನಗಳನ್ನು ಜನತಾಪಕ್ಷಕ್ಕೆ ಬಿಟ್ಟುಕೊಡುವಂತಿಲ್ಲ ಎಂದು ಕಾ. ಪ್ರಮೋದ್ ದಾಸ್‌ಗುಪ್ತ ಜನತಾ ಪಕ್ಷದ ಮುಖಂಡರಿಗೆ ತೋರಿಸಿದರು. ಮಧ್ಯರಾತ್ರಿ 01.30ರವರೆಗೆ ಸಭೆ ನಡೆಯಿತು. ಆಗ ಜೋರಾಗಿ ಮಳೆ ಬರುತ್ತಿದ್ದುದು ನನಗೆ ಚೆನ್ನಾಗಿ ನೆನಪಿದೆ. ಜನತಾಪಕ್ಷದ ಮುಖಂಡರು ಸಿಡುಕುತ್ತ ಸಭೆಯಿಂದ ಹೊರಗೆ ಹೋದರು.

ಕಳೆದ ಸಂಚಿಕೆಯಲ್ಲಿ ಕಮ್ಯುನಿಸ್ಟರನ್ನು ಮುಗಿಸುವುದಕ್ಕಾಗಿ ಕ್ರಿಮಿನಲ್‌ಗಳಿಗೆ ಉದ್ಯೋಗ ನೀಡಿ ಅವರನ್ನು ಛೂ ಬಿಟ್ಟಿದ್ದು, ಮಹಿಳೆಯರನ್ನು ಗುಂಡಿಟ್ಟು ಕೊಂದಿದ್ದು ಮತ್ತು ಶಿಕ್ಷಣ ಕ್ಷೇತ್ರದ ಮೇಲೆ ಕಾಂಗ್ರೆಸ್ಸಿನ ದುರಾಕ್ರಮಣದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ 1977 ರ ಚುನಾವಣೆಯಲ್ಲಿ ಜನತಾಪಕ್ಷದ ಹಠಮಾರಿತನದಿಂದ ಮುರಿದುಬಿದ್ದ ಹೊಂದಾಣಿಕೆ ನಂತರ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್ ಜೊತೆಗೂಡಿ ಯಶಸ್ವಿ ಎಡರಂಗ ಸ್ಥಾಪನೆ ಮತ್ತು ಅದರ ಐತಿಹಾಸಿಕ ವಿಜಯದ ಬಗ್ಗೆ ಓದಿ

ಮಹತ್ವದ ನಿರ್ಧಾರ......

ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಮರುದಿನ ನಾವು ನಿರ್ಧರಿಸಿದೆವು. ನಾವು ಅಂದರೆ ಸಿಪಿಐ(ಎಂ), ಫಾರ್ವರ್ಡ್ ಬ್ಲಾಕ್ ಆರ್.ಎಸ್.ಪಿ., .ಸಿಪಿಐ, ಫಾರ್ವರ್ಡ್ ಬ್ಲಾಕ್ ಮಾರ್ಕ್ಸಿಸ್ಟ್ ಮತ್ತು ವಿಪ್ಲವಿ ಬಾಂಗ್ಲಾ ಕಾಂಗ್ರೆಸ್. ಆ ನಿರ್ಧಾರ ಎಷ್ಟೊಂದು ಸರಿಯಾಗಿತ್ತು ಎನ್ನುವುದು ಈಗ ಹಿಂದಿರುಗಿ ನೋಡಿದಾಗ ಗೊತ್ತಾಗುತ್ತದೆ. .ಆ ನಿರ್ಧಾರವೇ ನಾವು ಈಗ ಕಾಣುತ್ತಿರುವ ಎಡರಂಗ ಅಧಿಕಾರಕ್ಕೆ ಬರಲು ಹಾದಿಮಾಡಿಕೊಟ್ಟಿತು. ಸತತ ಐದು ಚುನಾವಣೆಗಳಲ್ಲಿ ಈ ಎಡರಂಗ ಗೆಲುವು ಸಾಧಿಸಿತು. ನಾವು ಅಪಾಯಕಾರಿ ಹೆಜ್ಜೆ ಇಟ್ಟಿದ್ದೆವು. ಆದರೆ ಅದುವೇ ನಂತರದ ವರ್ಷಗಳಲ್ಲಿ ಸರಿಯಾದ ಫಲನೀಡಿತು.

ನಾವು ಜನರ ಮನೋಭಾವವನ್ನು ಸರಿಯಾಗಿಯೇ ಅಂದಾಜು ಮಾಡಿದ್ದೆವು. 36 ಅಂಶಗಳ ಕಾರ್ಯಕ್ರಮವನ್ನು ನಾವು ಪ್ರಕಟಿಸಿದೆವು. ಇವಲ್ಲದೆ ನಾವು 10 ಶಿಫಾರಸುಗಳ ಒಂದು ಪಟ್ಟಿಯನ್ನು ತಯಾರಿಸಿದೆವು.' ಅದನ್ನು ಆ ನಂತರ ಅನುಷ್ಠಾನಕ್ಕಾಗಿ ಕೇಂದ್ರ ಸರಕಾರಕ್ಕೆ ಕಳಿಸಬೇಕಿತ್ತು.

1952ರಿಂದ ನಂತರ ಅದೇ ಮೊದಲ ಬಾರಿಗೆ 1977ರ ಚುನಾವಣೆಯಲ್ಲಿ ತಾನು ಹೊಸ ಕ್ಷೇತ್ರದಿಂದ ಸ್ಪರ್ಧಿಸಿದೆ. ಚುನಾವಣೆ ಕ್ಷೇತ್ರಗಳ ಪುನರ್ ಸಂಘಟನೆಗಾಗಿ 24 ಪರಗಣ ಜಿಲ್ಲೆಯ ಸತ್ಗಾಚಿಯಾ ಕ್ಷೇತ್ರದಿಂದ ನನ್ನನ್ನು ಕಣಕ್ಕಿಳಿಸಲು ಪಕ್ಷ ನಿರ್ಧರಿಸಿತು.

ಏಳು ಜಿಲ್ಲೆಗಳ 155 ಕ್ಷೇತ್ರಗಳಲ್ಲಿ ಜೂನ್ 11 ರಂದು ಮತದಾನ ನಡೆಯಿತು. ಬಹುತೇಕ ಶಾಂತವಾಗಿಯೇ ಇತ್ತು. ಆದರೆ ವಿದ್ಯಾರ್ಥಿ ನಾಯಕ ರಂಜನ್ ಗೋಸ್ವಾಮಿ ಕಾಂಗ್ರೆಸಿಗರು ನಡೆಸಿದ ಗುಂಡು ಹಾರಾಟದಲ್ಲಿ ಮೃತಪಟ್ಟರು. ಕಮರಹಟಿಯಲ್ಲಿ ಈ ದುರ್ಘಟನೆ ನಡೆಯಿತು. ನಮ್ಮ ಪಕ್ಷದ ಅಭ್ಯರ್ಥಿ ರಾಧಿಕಾಬ್ಯಾನರ್ಜಿ ಜತೆ ಮರಳುತ್ತಿದ್ದಾಗ ಗೋಸ್ವಾಮಿ ಗುಂಡೇಟಿಗೆ ಬಲಿಯಾದರು. ಬ್ಯಾನರ್ಜಿ ಸ್ವಲ್ಪದರಲ್ಲೇ ಪಾರಾದರು.

ಜೂನ್ 14 ರಂದು ಎರಡನೇ ಹಂತದ ಮತದಾನ ನಡೆಯಿತು. ಮತ ಎಣಿಕೆಯಾಗಿ ಫಲಿತಾಂಶ ಹೊರಬೀಳತೊಡಗಿತ್ತು. ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಧೂಳೀಪಟವಾಯಿತು. ಅಷ್ಟೇ ಅಲ್ಲದೆ ಜನತಾ ಪಕ್ಷದ ಆಶಾಗೋಪುರ ಕುಸಿದು ಬಿತ್ತು. ಎಡರಂಗ ಮೂರನೇ ಎರಡು ಬಹುಮತದತ್ತ ಮುನ್ನಡೆಯಿತು. 230 ಸ್ಥಾನಗಳಲ್ಲಿ ಅದು ಜಯಭೇರಿ ಬಾರಿಸಿತು. ಸ್ವತಃ ಸಿಪಿಐ(ಎಂ) ಏಕಾಂಗಿಯಾಗಿ ಸರಕಾರ ರಚಿಸುವಷ್ಟು ಸ್ಥಾನಗಳಲ್ಲಿ ಜಯಗಳಿಸಿತು.

ಜೂನ್ 18 ರಂದು ಸಿಪಿಐ(ಎಂ) ರಾಜ್ಯ ಕೇಂದ್ರ ಕಛೇರಿಯಲ್ಲಿ ಎಡರಂಗದ ಮುಖಂಡರು ಸಭೆ ಸೇರಿದರು. ಫಾರ್ವರ್ಡ್ ಬ್ಲಾಕ್ ನಾಯಕ ಅಶೋಕ ಘೋಷ್ ನನ್ನನ್ನು ಮಿತ್ರಕೂಟ ಶಾಸಕ ಪಕ್ಷದ ಮುಖಂಡನಾಗಿ ಸೂಚಿಸಿದರು. ಆರ್.ಎಸ್.ಪಿಯ ಮಖಿನ್‌ಪಾಲ್ ಅನುಮೋದಿಸಿದರು. ಈ ವಿಚಾರದಲ್ಲಿ ಸರ್ವಸಮ್ಮತಿಯಿತ್ತು. ಇದಾದ ಮೇಲೆ, ಸರಕಾರ ರಚಿಸಲು ನಮಗೆ ಅವಕಾಶ ನೀಡುವಂತೆ ಕೋರಿ ರಾಜ್ಯಪಾಲರಿಗೆ ನಾವು ಪತ್ರಗಳನ್ನು ಕಳಿಸಿದೆವು.


ಆ ಸ್ಮರಣೀಯ ಕ್ಷಣ......

1977 ಜೂನ್ 21ರ ಬೆಳಿಗ್ಗೆ 10.30 ಪಶ್ಚಿಮ ಬಂಗಾಳದಲ್ಲಿ ಪ್ರಪ್ರಥಮ ಎಡರಂಗ ಸರಕಾರ ಅಧಿಕಾರದ ಪ್ರಮಾಣವಚನ ಸ್ವೀಕರಿಸಿತು. ನಾನಲ್ಲದೆ ಸಿಪಿಐ(ಎಂ)ನ ಕೃಷ್ಣಪಾದ್ ಘೋಷ್ ಹಾಗೂ ಡಾ. ಅಶೋಕ ಮಿತ್ರ, ಆರ್.ಎಸ್.ಪಿಯ ಜತಿನ್ ಚಕ್ರವರ್ತಿ ಮತ್ತು ಫಾರ್ವರ್ಡ್ ಬ್ಲಾಕ್‌ನ ಕನಯ್ ಭಟ್ಟಾಚಾರ್ಯ ಪ್ರಮಾಣವಚನ ಸ್ವೀಕರಿಸಿದರು. ಜೂನ್ 23ರಂದು ಇನ್ನೂ 16 ಮಂದಿ ಸಂಪುಟ ಸೇರಿದರು. ಇನ್ನೂ ಕೆಲಮಂದಿ ಶೀಘ್ರವೇ ಸೇರುತ್ತಿದ್ದರು.

ಎಲ್ಲ ರಾಜಕೀಯ ಕೈದಿಗಳ ಬಿಡುಗಡೆ ಹೊಸ ಸರಕಾರ ತೆಗೆದುಕೊಂಡ ಮೊದಲ ನಿರ್ಧಾರವಾಗಿತ್ತು. ಸ್ನೇಹಾಂಗ್ಶು ಆಚಾರ್ಯರನ್ನು ಅಡ್ವಕೇಟ್ ಜನರಲ್ ಆಗಿ ನೇಮಿಸಲಾಯಿತು.

ಖಾತೆಗಳನ್ನು ಹಂಚುವಾಗ ಅನುಭವಕ್ಕೆ ಪ್ರಮುಖ ಆದ್ಯತೆ ನೀಡಲಾಯಿತು. ಕೃಷ್ಣಪಾದ ಘೋಷರಿಗೆ ಕಾರ್ಮಿಕ, ಡಾ. ಮಿತ್ರರಿಗೆ ಹಣಕಾಸು ಮತ್ತು

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 65

ಯೋಜನೆ, ಬಿನಯ್ ಚೌಧರಿಯವರಿಗೆ ಭೂ ಹಾಗೂ ಭೂಕಂದಾಯ, ಕನಯ್ಯಲಾಲ ಭಟ್ಟಾಚಾರ್ಯರಿಗೆ ಕೈಗಾರಿಕೆ ಖಾತೆ ನೀಡಲಾಯಿತು. ಮಹತ್ವದ ಪಂಚಾಯತ್ ಖಾತೆ ಜತೆ ಜೈಲುಗಳ ಖಾತೆಯನ್ನು ಆರ್.ಎಸ್.ಪಿಯ ದೇವ ವ್ರತ ಬ್ಯಾನರ್ಜಿಗೆ ವಹಿಸಲಾಯಿತು.

ಸುದೀನ್ ಕುಮಾರ್ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಬುದ್ಧದೇವ ಭಟ್ಟಾಚಾರ್ಯ ಹೊಸ ವಾರ್ತೆ ಮತ್ತು ಸಂಸ್ಕೃತಿ ಖಾತೆ ಮಂತ್ರಿಯಾದರು.

ಜೂನ್ 24 ರಂದು ಹೊಸ ವಿಧಾನಸಭೆಯ ಅಧಿವೇಶನ ಆರಂಭವಾಯಿತು. ಐದು ವರ್ಷಗಳ ನಂತರ ನಾವು ವಿಧಾನಸಭೆಯನ್ನು ಪ್ರವೇಶಿಸಿದೆವು. ಸಿಪಿಐ(ಎಂ) ಸದಸ್ಯ ಸೈಯದ್ ಮನ್ಸೂರ್ ಹಬಿಬುಲ್ಲಾ ಸ್ಪೀಕರ್ ಆದರು. ವಿದ್ಯಾರ್ಥಿ ನಾಯಕ ದಿನೇಶ ಮಜುಂದಾರ್ ಎಡರಂಗದ ಮುಖ್ಯ ಸಚೇತಕ ಆದರು. 1980 ಅಕ್ಟೋಬರ್ 25 ರಂದು ಅವರು ಹಠಾತ್ತನೆ ನಿಧನರಾದರು. ಅದು ನಮಗೆ ದೊಡ್ಡ ನಷ್ಟ.

ಸರಕಾರಕ್ಕೆ ಸಲಹೆ ನೀಡಲು ಒಂದು ಸಮಿತಿಯನ್ನು ರಚಿಸಲು ನಿರ್ಧರಿಸಿದೆವು. ಪಶ್ಚಿಮ ಬಂಗಾಳ ಎಡರಂಗ ಸಮಿತಿಯನ್ನು ರಚಿಸಲಾಯಿತು. ರಂಗಕ್ಕೆ ಸಂಚಾಲಕರ ಬದಲು ಅಧ್ಯಕ್ಷರು ಇರಬೇಕು ಎಂದು ಕಾಮ್ರೇಡ್ ಸರೋಜ್ ಮುಖರ್ಜಿ ಸಲಹೆ ಮಾಡಿದರು.

(ಮುಂದುವರಿಯುವುದು)

ಹೊಸ ಹೆಸರು ಸೂಚಿಸಿ

ಆತ್ಮೀಯರೇ,

ಪತ್ರಿಕೆಗೆ ಹೊಸ ಹೆಸರು, ಹೊಸ ರೂಪ ಕೊಡುವ ಸೂಚನೆಗಳನ್ನು ಕಳಿಸಬೇಕೆಂದು ತಮಗೆಲ್ಲಾ ವಿನಂತಿಸಿದ್ದೆವು. ಈಗಾಗಲೇ ಹಲವಾರು ಪತ್ರಗಳು ತಲುಪಿವೆ. ಪ್ರೀತಿಯ, ಕಳಕಳಿಯ ಅನೇಕ ಸಲಹೆಗಳ ಅಂಶಗಳೂ ಇದರಲ್ಲಿವೆ. ನಿಜ ಇವು ಮೊದಲ ಪ್ರತಿಕ್ರಿಯೆಗಳು... ಇನ್ನೂ ಸೂಚನೆ ಕಳಿಸಲು ಸಮಯವಿದೆ. ತಪ್ಪದೇ ತಾವೆಲ್ಲಾ ಬರೆಯಬೇಕೆಂಬುದು ನಮ್ಮ ಅಪೇಕ್ಷೆ. ದಯವಿಟ್ಟು ಕಳಿಸಿ. ಮರೆಯಬೇಡಿ ಸೂಚನೆಗಳು ಮೇ 15 ರೊಳಗೆ ನಮ್ಮ ಕೈ ಸೇರಲಿ

ಬಾಲ್ಕೊ ಮುಷ್ಕರಕ್ಕೆ ತೆರೆ

ಕೇಂದ್ರ ಸರ್ಕಾರದ ಖಾಸಗೀಕರಣ ನೀತಿಯ ವಿರುದ್ಧ ನಡೆದ ಅತಿದೀರ್ಘ ಹೋರಾಟದ ಬಾಲ್ಕೊ ಮುಷ್ಕರಕ್ಕೆ ಅಂತಿಮ ತೆರೆ ಬಿದ್ದಿದೆ.

7000 ನೌಕರರ 67 ದಿನಗಳ ಮುಷ್ಕರ ಇತಿಹಾಸದ ಪುಟಗಳಿಗೆ ಸೇರುತ್ತದೆ. ದೇಶದ ಇತಿಹಾಸದಲ್ಲಿ ಖಾಸಗೀಕರಣದ ವಿರುದ್ಧ ಇಷ್ಟೊಂದು ದೀರ್ಘ ಮುಷ್ಕರ ನಡೆದೇ ಇಲ್ಲ. ಬಾಲ್ಕೊ ಮುಷ್ಕರ ಹಲವಾರು ಪಾಠಗಳನ್ನು ಕಲಿಸಿದೆ. 37.5 ಲಕ್ಷ ಮಾನವ ಗಂಟೆಗಳು ನಷ್ಟವಾದರೂ ಮುಷ್ಕರದಲ್ಲಿ ಕೊನೆಯದಿನದವರೆಗೂ ನೌಕರರು ಐಕ್ಯತೆಯ ಬಾವುಟವನ್ನು ಎತ್ತಿ ಹಿಡಿದರು. ಅಲ್ಲಿನವೆಲ್ಲಾ ನೌಕರ ಸಂಘಟನೆಗಳು ಒಂದಾಗಿ ಹೋರಾಡಿದುದು ಮಾತ್ರ ವಲ್ಲದೆ, ದೇಶದಾದ್ಯಂತ ನೌಕರರು, ಜನಸಾಮಾನ್ಯರು ಮುಷ್ಕರಕ್ಕೆ ಬೆಂಬಲ ನೀಡಿದರು ಧನ ಸಹಾಯ ಮಾಡಿದರು. ಬೆಂಗಳೂರಿನ ಬಿಇಎ, ಬಿಹೆಚ್‌ಇಎಲ್ ನೌಕರರು ತಮ್ಮ ವೇತನದ ಒಂದು ಭಾಗವನ್ನು ನೀಡಿದರು. ಮುಷ್ಕರದ ತೀವ್ರತೆ ಯಿಂದಾಗಿ, ಬಿಜೆಪಿ ಕೃಪಾಪೋಷಿತ ಬಿ.ಎಂ.ಎಸ್. ಸಂಘಟನೆ ಕೂಡಾ ಹೋರಾಟಕ್ಕೆ ಬರುವಂತಾಗಿತ್ತು.

ದೇಶದಾದ್ಯಂತ ವಿವಿಧ ರೀತಿಯ ಬೆಂಬಲ, ಪ್ರೋತ್ಸಾಹದಿಂದ ನೌಕರರು ಮತ್ತು ಕಾರ್ಮಿಕರು ಏಪ್ರಿಲ್ 12 ರಂದು 2 ಗಂಟೆಗಳ ಕಾಲ ಮುಷ್ಕರ ನಡೆಸಿ ಬೆಂಬಲ ಸೂಚಿಸಿದರು. ಹಾಗೂ ಮೇ 18 ರಂದು ಒಂದು ದಿನದ ಮುಷ್ಕರ ನಡೆಸುವವರಿದ್ದರು.

ಕಾರ್ಮಿಕ ವರ್ಗದಿಂದ, ಜನಸಾಮಾನ್ಯರಿಂದ ಭಾರಿ ಪ್ರತಿಭಟನೆ ಎದುರಾದರೂ ನಾಚಿಕೆಗೆಟ್ಟ ವಾಜಪೇಯಿ ಸರ್ಕಾರ ತನ್ನ ನೀತಿಯಿಂದ ಹಿಂದೆ ಸರಿಯುತ್ತಿಲ್ಲ. 5000 ಕೋಟಿ ರೂ. ಗಳಿಗೂ ಹೆಚ್ಚು ಬೆಲೆ ಬಾಳುವ ಭಾರತ್ ಅಲ್ಯೂಮಿನಿಯಂ ಕಾರ್ಪೊರೇಷನ್(ಬಾಲ್ಕೊ) ಯನ್ನು ಬರೀ 551.5 ಕೋಟಿ ರೂ.ಗಳಿಗೆ (ಶೇ 51 ಶೇರು ಬಂಡವಾಳದ ಆಧಾರದಲ್ಲಿ)'ಸ್ಟರ್ ಲೈಟ್' ಎನ್ನುವ ಕಂಪನಿಗೆ ಮಾರಾಟ ಮಾಡಿತು.

ಈ ಕಂಪನಿಯ ಶೇರುಗಳ ವಹಿವಾಟವನ್ನು 'ಸೆಬಿ'(ಸ್ಟಾಕ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ) ತಡೆ ಹಿಡಿದಿದೆ - ಅಷ್ಟೊಂದು ಕುಖ್ಯಾತ ಕಂಪನಿ ಇದು.

ವಿಶ್ವಬ್ಯಾಂಕ್, ಐಎಂಎಫ್ ಆದೇಶಗಳನ್ನು ಗುಲಾಮನಂತೆ ಜಾರಿ ಮಾಡುವ ಬಿಜೆಪಿ ನೇತೃತ್ವದ ಸರಕಾರ ರಕ್ಷಣಾ ವಲಯವನ್ನು ಖಾಸಗೀಕರಣ ಗೊಳಿಸುವ ನಿರ್ಧಾರ ಕೈಗೊಂಡಿದೆ. ಬಾಲ್ಕೊ ಹೋರಾಟದಲ್ಲಿ ಸಾಧಿಸಿದ ಐಕ್ಯತೆಯನ್ನು ಮುಂದುವರಿಸಬೇಕಾಗಿದೆ. ಮುಂಬರುವ ಇನ್ನಷ್ಟು ತೀವ್ರವಾದ ಸಮರಶೀಲ ಹೋರಾಟಗಳನ್ನು ರೂಪಿಸಬೇಕಾಗಿದೆ.

ಕರ್ನಾಟಕದ ಪುರಸಭಾ ಚುನಾವಣೆಗಳು

ಒಂದು ವಿಶ್ಲೇಷಣೆ

ಜಿ.ಎನ್. ನಾಗರಾಜ್

ದ.ಕ ಜಿಲ್ಲೆಯ ಪುರಸಭೆ ಹಾಗೂ ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕೆಲವು ನಗರಸಭೆಗಳ ಚುನಾವಣೆಗಳ ಹೊರತು ಇಡೀ ರಾಜ್ಯದ ಪುರಸಭೆ, ನಗರಸಭೆ, ಮಹಾನಗರಪಾಲಿಕೆಗಳ ಚುನಾವಣೆಯ ಫಲಿತಾಂಶಗಳು ಹೊರಬಿದ್ದಿವೆ. ಕಾಂಗ್ರೆಸ್ ತನ್ನ ನೀತಿಗಳಿಗೆ ದೊರೆತ ವಿಜಯವೆಂದು ಹೆಮ್ಮೆಯಿಂದ ಬೀಗುತ್ತಿದೆ. ತಮಗೆ ಬಹುಮತ ದೊರೆಯದ ಪುರಸಭೆ, ನಗರಪಾಲಿಕೆಗಳನ್ನು ಹಿಡಿಯಲು ತುರುಸಿನಿಂದ ಕುದುರೆ ವ್ಯಾಪಾರ ಆರಂಭಿಸಿದೆ. ಆದರೆ ಆ ಮತದಾನದ ಮೂಲಕ ಕರ್ನಾಟಕದ ನಗರಗಳ ಜನತೆ ಹೇಳಬಯಸುವುದೇನು ಮತ್ತು ಈ ಜನಾದೇಶವನ್ನು ಪಾಲಿಸುವುದು ಹೇಗೆ ಎಂಬುದು ಚುನಾವಣೆಯ ಫಲಿತಾಂಶ ಬಂದ ಕೆಲವೇ ದಿನಗಳಲ್ಲಿಯೇ ಮರವೆಯಾಗಿದೆ. **ಆಳುವ ಪಕ್ಷ ಜನಾದೇಶ ಪಡೆದ ಕೂಡಲೇ ಅದನ್ನು ಮರೆಯುವುದು ಬಂಡವಾಳಶಾಹಿ ರಾಜಕೀಯದ ಸಹಜ ಗುಣ. ಅವರು ಮರೆಯದಂತೆ ನಿರಂತರವಾಗಿ ಜನತೆ ಎಚ್ಚರಿಸುತ್ತಿರಬೇಕು.**

ನಮ್ಮ ದೇಶದಲ್ಲಿ ನಡೆದ ಕಾಂಗ್ರೆಸ್ ದುರಾಡಳಿತದ ವಿರುದ್ಧ ನಡೆದ ಪ್ರಜಾಸತ್ತಾತ್ಮಕ ಚಳುವಳಿ ನಗರಗಳ ಜನತೆಯ ಬಹುಭಾಗವನ್ನು ಕಟ್ಟಾ ಕಾಂಗ್ರೆಸ್ ವಿರೋಧಿಗಳನ್ನಾಗಿ ಮಾಡಿತ್ತು ಹಾಗೂ ದೇಶದ ರಾಜಕೀಯದ ಮೇಲೆ ಕಾಂಗ್ರೆಸ್‌ಗಿದ್ದ ಬಲವಾದ ಹಿಡಿತವನ್ನು ಅಲುಗಾಡಿಸುವುದರಲ್ಲಿ ಈ ರಾಜಕೀಯ ಎಚ್ಚರ ಬಹಳ ಮುಖ್ಯವಾದ ಪಾತ್ರವನ್ನು ವಹಿಸಿತು.


ಗುಲ್ಬರ್ಗಾ: ಚುನಾವಣಾ ಹಿಂಸಾಚಾರದಲ್ಲಿ ಗಾಯಗೊಂಡ ಅಭ್ಯರ್ಥಿ

ದೇಶದ ಕೆಲವೇ ಭಾಗಗಳಲ್ಲಿ ಈ ಎಚ್ಚರ **ಕೇವಲ ಕಾಂಗ್ರೆಸ್ ವಿರೋಧಿಯಾಗಿ ಮಾತ್ರ ಉಳಿಯದೆ ದೇಶವನ್ನಾಳುವುದರಲ್ಲಿ ಕಾಂಗ್ರೆಸ್ ಅನುಸರಿಸಿದ ನೀತಿಗಳ ವಿರುದ್ಧದ ಭಾವನೆಯಾಗಿ ಹಾಗೂ ಪರ್ಯಾಯ ನೀತಿಗಳ ಹುಡುಕಾಟಕ್ಕೆ ಆಧಾರವಾಗಿ ಬೆಳೆಯಿತು. ಆದರೆ ದೇಶದ ಉದ್ದಗಲಕ್ಕೂ ಇಂತಹ ಬೆಳವಣಿಗೆ ಸಾಧ್ಯವಾಗಲಿಲ್ಲ.**

ಇದಕ್ಕೆ ಮುಖ್ಯಕಾರಣಗಳು ಎರಡು. ಕಾಂಗ್ರೆಸ್ ವಿರೋಧಿ ಧೋರಣೆ. ಕಾಂಗ್ರೆಸ್ ಧೋರಣೆಗಳ ವಿರೋಧಿಯಾಗಿ ಪರಿವರ್ತಿತವಾದರೆ ತಮಗಾಗುವ ದೊಡ್ಡ ಅಪಾಯವನ್ನು ಮನಗಂಡು ಬಂಡವಾಳಶಾಹಿ ತನ್ನ ಒಡೆತನದಡಿ ಪತ್ರಿಕೆಗಳು-ನಂತರ ಟಿ.ವಿ.ಗಳಿಗೆ ನಗರಗಳ ಜನತೆಯ ಮೇಲಿದ್ದ ಹಿಡಿತವನ್ನು ಬಳಸಿಕೊಂಡು ಅವರನ್ನು ಕೇವಲ ಕಾಂಗ್ರೆಸ್ ವಿರೋಧಿಯಾಗಿ ಮಾತ್ರವೇ ಉಳಿಸಿಕೊಳ್ಳಲು ಮತ್ತು ಬಂಡವಾಳಶಾಹಿ ರಾಜಕೀಯದ ಬುನಾದಿಯಾಗಿಸಲು ಬಂಡವಾಳಶಾಹಿ ರಾಜಕೀಯ ಪಕ್ಷಗಳು - ನೆಹರೂ ಆಳ್ವಿಕೆ, ವಂಶಪಾರಂಪರ್ಯ ಆಡಳಿತದ ವಿರೋಧಕ್ಕೆ, ಭ್ರಷ್ಟಾಚಾರದ ವಿರೋಧಕ್ಕೆ ಮಾತ್ರ ತಮ್ಮ ವಿರೋಧವನ್ನು ಸೀಮಿತಗೊಳಿಸಿದವು.

- **ನಗರಗಳಲ್ಲಿ ಕುಗ್ಗುತ್ತಿರುವ ಬಿಜೆಪಿ.**
- **ಬಿಜೆಪಿ ಮತ್ತು ಕಾಂಗ್ರೆಸ್‌ನ ವಿರುದ್ಧ ರಾಜಕೀಯ ಧಾಳಿ ಯೆಸಗಲು ನಿರಾಕರಿಸಿದ ಜನತಾದಳ.**
- **ರಾಜ್ಯ ಸರ್ಕಾರದ ಅಧಿಕಾರ ಬಲದಿಂದ ಬಹುಮತ ಗಳಿಸಿದ ಕಾಂಗ್ರೆಸ್ ಪಕ್ಷ.**

ಇನ್ನು **ಎರಡನೆಯ ಕಾರಣವೆಂದರೆ** ನಗರಗಳಲ್ಲಿರುವ ಅಪಾರ ಸಂಖ್ಯೆಯ ದುಡಿಯುವ ಜನ - ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ನಡುವೆ ಕ್ರಿಯಾಶೀಲವಾಗಿದ್ದ ದುಡಿಯುವ ಜನರ ಪಕ್ಷಗಳು ಬಂಡವಾಳಶಾಹಿಗಳ ಈ ಸೈದ್ಧಾಂತಿಕ ರಾಜಕೀಯ ಧಾಳಿಯನ್ನು ಎದುರಿಸುವಲ್ಲಿ ಪರಿಣಾಮಕಾರಿ ಪಾತ್ರ ವಹಿಸಲಾಗದ್ದು. ಬಂಡವಾಳಶಾಹಿ ಮಾಧ್ಯಮಗಳ ಪ್ರಬಲ ಹೊಡೆತಕ್ಕೆ ಪ್ರತಿಯಾಗಿ ತಮ್ಮ ಬಾಯಿಮಾತಿನ ಮೂಲಕವಾದರೂ ಪ್ರಚಾರವನ್ನು ತಮ್ಮದೇ ಮಿತಿಯಲ್ಲಾದರೂ ನಿರ್ವಹಿಸುವುದನ್ನು ನಿರ್ಲಕ್ಷಿಸಿದ್ದು ವರ್ಗ ಸಂಘರ್ಷದ ರಾಜಕೀಯ ಮುಖಕ್ಕೆ ಸರಿಯಾದ ಒತ್ತು ನೀಡದೇ ಹೋದದ್ದು.

ರಾಜಕೀಯದ ಈ ಪರಿಸ್ಥಿತಿ - ಬೆಳೆಯುತ್ತಿರುವ ನಿರುದ್ಯೋಗ, ಗ್ರಾಮೀಣ ಬಡತನದಿಂದಾಗಿ ನಗರಗಳಿಗೆ ವಲಸೆ, ಸ್ಲಂಗಳ ಬೆಳವಣಿಗೆ, ನಾಗರೀಕ ಸೌಲಭ್ಯಗಳಲ್ಲಿ ಕುಡಿಯುವ ನೀರು, ಒಳ ಚರಂಡಿ ವ್ಯವಸ್ಥೆ, ರಸ್ತೆಗಳು, ಸಂಚಾರ ಸೌಲಭ್ಯ, ಬೀದಿ ದೀಪಗಳು ಇಂತಹುಗಳಲ್ಲಿ ದೊಡ್ಡ ಕೊರತೆಯಿಂದಾಗಿ ನಗರದ ಮಧ್ಯಮವರ್ಗದ ಜನಗಳಲ್ಲಿ ಬೆಳೆದ ಅತೃಪ್ತಿಯ ಜೊತೆಗೆ ನಗರಗಳಲ್ಲಿ ಬಿಜೆಪಿಯ ಪ್ರಭಾವದ ಬೆಳವಣಿಗೆಗೆ ಫಲವತ್ತಾದ ವಾತಾವರಣವನ್ನು ಸೃಷ್ಟಿಸಿತು. ಕೋಮುವಾದಿ ಪ್ರಚಾರದ ಮೂಲಕ ಹಾಗೂ ಯೋಜಿತವಾದ ಕೋಮು ದಂಗೆಗಳ ಮೂಲಕ ನಗರಗಳ ಜನತೆಯನ್ನು ತನ್ನ ರಾಜಕೀಯದ ಭದ್ರ ನೆಲೆಯನ್ನಾಗಿ ಮಾಡಿಕೊಳ್ಳಲು, ವಿಧಾನಸಭೆ, ಲೋಕಸಭೆಗಳ ಸ್ಥಾನಗಳನ್ನು ಗೆಲ್ಲಲು ಬಿಜೆಪಿ ಪ್ರಯತ್ನಿಸಿದೆ.

ಈ ಚುನಾವಣೆಗಳಲ್ಲಿ ನಗರಗಳ ಜನತೆ ನೀಡಿದ ಸಂದೇಶವನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಹಿನ್ನೆಲೆಯು ಸಹಾಯಕವಾಗುತ್ತದೆ. ಹಾಗೆಯೇ 5 ವರ್ಷಗಳ ಹಿಂದೆ 1996 ರಲ್ಲಿ ನಡೆದ ನಗರಸಭಾ ಚುನಾವಣೆಗಳ ಫಲಿತಾಂಶದೊಡನೆ ಈ ಫಲಿತಾಂಶವನ್ನು ತುಲನೆ ಮಾಡುವುದೂ ಅವಶ್ಯಕ. ರಾಜ್ಯದ ಪತ್ರಿಕೆಗಳು ಹಾಗೂ ಟಿ.ವಿ.ಗಳು ಅಂದಂದಿನ ಘಟನೆಗಳನ್ನು ಅಷ್ಟಕ್ಕೇ ಸೀಮಿತಗೊಳಿಸಿ ಜನತೆಯ ರಾಜಕೀಯ ಪ್ರಜ್ಞೆಯ ಬೆಳವಣಿಗೆಯನ್ನು ಉದ್ದೇಶಪೂರ್ವಕವಾಗಿ ತಡೆ ಹಿಡಿಯುತ್ತವೆ.

ಬಿಜೆಪಿ ಸೋಗು: ತಿಪ್ಪೆಗೆಸೆದ ಮತದಾರ

ಕರ್ನಾಟಕದ ಈ ಬಾರಿಯ ಚುನಾವಣಾ ಫಲಿತಾಂಶಗಳಲ್ಲಿ ಬಹಳ ಪ್ರಮುಖವಾದ ಅಂಶವೆಂದರೆ ರಾಜ್ಯ ಒಟ್ಟು 3720 ಸ್ಥಾನಗಳಲ್ಲಿ ಬಿಜೆಪಿ ಗಳಿಸಿದ್ದು ಕೇವಲ 357. ಇದೇನು ದೊಡ್ಡ ಹಿನ್ನಡೆಯೇನಲ್ಲ. 96 ರ ಚುನಾವಣೆಗಳಲ್ಲಿ ನಾವು 404 ಸ್ಥಾನಗಳನ್ನು ಗಳಿಸಿದ್ದೆವು. ಈಗ ಒಂದೈವತ್ತು ಸ್ಥಾನ ಕಡಿಮೆ ಅಷ್ಟೆ ಎಂದು ಬಿಜೆಪಿ ವಾದ ಮಾಡಿದೆ. ಆದರೆ ಮರೆಯಲಾಗದ ವಿಷಯವೆಂದರೆ 96 ಮತ್ತು 2001 ರ ನಡುವೆ ಬಿಜೆಪಿ ಎರಡು ಬಾರಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಈಗಲೂ ಸದ್ಯಕ್ಕೆ ಅಧಿಕಾರ ನಡೆಸುತ್ತಿದೆ. ಹಾಗೂ ಕರ್ನಾಟಕದಲ್ಲಿ ತನ್ನಗಿದ್ದ ಲೋಕಸಭಾ ಸ್ಥಾನಗಳನ್ನು ಬಹಳಷ್ಟು ಹೆಚ್ಚಿಸಿಕೊಂಡಿದೆ. ಕೇಂದ್ರದಲ್ಲಿ ನಮಗೆ ಅಧಿಕಾರ ದೊರೆತರೆ ದೇಶದ ಮುಖವನ್ನೇ ಬದಲು ಮಾಡುತ್ತೇವೆಂಬ ದೊಡ್ಡ ಪ್ರಚಾರ ನಡೆಸಿತು. ಈಗಲೂ ತನ್ನ ವಿಶ್ವಬ್ಯಾಂಕ್ ಆದೇಶಿತ ಆರ್ಥಿಕ ನೀತಿಯಿಂದ ದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಇತರ ಕೈಗಾರಿಕೆ, ಕೃಷಿಯಲ್ಲಿ ದೊಡ್ಡ ಬೆಳವಣಿಗೆಯನ್ನು ತರುತ್ತೇವೆಂದು ಭ್ರಮೆ ಹುಟ್ಟಿಸಲು ಪ್ರಯತ್ನಿಸಿದೆ. ಇವೇ ಸೋತಾಗ ಆರೆಸ್ಸೆಸ್‌ನ ಮಹಾ ಅಭಿಯಾನ ಹಾಗೂ ವಿಶ್ವಹಿಂದು ಪರಿಷತ್ ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟಿಯೇ ತೀರುತ್ತೇವೆ ಎಂಬ ಘೋಷಣೆಗಳೂ ನಡೆದಿವೆ.

ಇವೆಲ್ಲವನ್ನು ಕರ್ನಾಟಕದ ನಗರಗಳ ಮತದಾರ ತಿಪ್ಪೆಗೆಸೆದಿದ್ದಾನೆ ಎಂದರ್ಥ. ದೇಶದಲ್ಲಿ ಅಧಿಕಾರದಲ್ಲಿರುವ ಈ ಪಕ್ಷ ತನಗೆ ಯಾವ ಲೆಕ್ಕಕ್ಕೂ ಇಲ್ಲ ಎಂದು ಪರಿಗಣಿಸಿದ್ದಾನೆ. ಇತ್ತೀಚಿಗೆ ನಡೆದ ಲೋಕಸಭಾ-ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ ಒಲಿದ ಪ್ರದೇಶಗಳಲ್ಲಿಯೂ ಮುಖ್ಯವಾಗಿ ಬೀದರ್ ಜಿಲ್ಲೆಯಲ್ಲಿ (ಇರುವ 6 ವಿಧಾನಸಭಾ ಸ್ಥಾನಗಳಲ್ಲಿ 5 ಬಿಜೆಪಿಯ ಪಾಲು) ಎಲ್ಲಾ ಪುರಸಭೆ ಹಾಗೂ ನಗರ ಸಭೆಗಳಲ್ಲಿ ಬಿಜೆಪಿಯ ತೀವ್ರ ಸೋಲು ತನ್ನ ಭದ್ರ ನೆಲೆಯೆಂದುಕೊಂಡಿದ್ದ ಕರಾವಳಿಯ ಉತ್ತರ ಕನ್ನಡ ಜಿಲ್ಲೆಯ, ಕರ್ನಾಟಕದ ನಗರಗಳೂ ಇದೇ ಹೊಡೆತವನ್ನು ಬಿಜೆಪಿಗೆ ನೀಡಿದೆ.

ಮತದಾರರ ಸಂದೇಶದ ಸಾರಾಂಶವೆಂದರೆ

ಕಾಂಗ್ರೆಸ್‌ನ ದುರಾಡಳಿತದಿಂದ ಬೇಸತ್ತ ನಾವು ಬೇರೆ ಯಾವ ಪರ್ಯಾಯ ಪಕ್ಷವೂ ನಮ್ಮ ಜೀವನದ ಸಮಸ್ಯೆಗಳನ್ನು ಪರಿಹರಿಸಬಹುದೆಂಬ ಭರವಸೆ ಮೂಡದಿದ್ದಾಗ ಬಿಜೆಪಿಗೆ ಮತ ನೀಡಿದ್ದೇವೆ. ನಮ್ಮ ಸಮಸ್ಯೆಗಳನ್ನ ಪರಿಹರಿಸುವ, ದೇಶವನ್ನು ಆಳುವ ಸಾಮರ್ಥ್ಯದ ವಿಷಯದಲ್ಲಿ ಬಿಜೆಪಿಯೂ ಸೋತಿದೆ. ಅದರ ಬಗ್ಗೆ ನಮಗೆ ಯಾವ ಭರವಸೆಯೂ ಮೂಡಿಲ್ಲ ಎಂದು.

ಪುಟ 10 ಕ್ಕೆ

ನಾಲ್ಕು ಮಹಾನಗರ ಪಾಲಿಕೆಗಳ ಫಲಿತಾಂಶ

	ಒಟ್ಟು	ಪ್ರಕಟಿತ	ಕಾಂಗ್ರೆಸ್	ಬಿಜೆಪಿ	ಸಂ.ದಳ	ಜಾ.ದಳ	ಪಕ್ಷೇತರರು
ಹುಬ್ಬಳ್ಳಿ-ಧಾರವಾಡ	67	66	24	22	2	12	6
ಗುಲ್ಬರ್ಗಾ	55	52	23	13	8	1	7
ಮೈಸೂರು	65	63	22	16	-	18	7
ಬೆಳಗಾವಿ	58	58ಬಿಜೆಪಿ-ಎಂಇಎಸ್ 40, ನಾಗರಿಕ ವಿಕಾಸ ವೇದಿಕೆ 18					

ಪಕ್ಷಗಳ ಬಲಾಬಲ(ಸ್ಥಳೀಯ ಸಂಸ್ಥೆವಾರು)

ಒಟ್ಟು	ಪ್ರಕಟಿತ	ಕಾಂಗ್ರೆಸ್	ಬಿಜೆಪಿ	ಸಂ.ದಳ	ಜಾ.ದಳ	ಪಕ್ಷೇತರರು
148	141	82	4	11	8	27

(ಗುಂಡ್ಲುಪೇಟೆ, ಮುಳಬಾಗಿಲು, ಭಾಲ್ಕಿ ಹಾಗೂ ಶ್ರೀರಂಗಪಟ್ಟಣದಲ್ಲಿ ಸಮಬಲ ಹಾಗೂ 5 ಕಡೆ ಅತಂತ್ರ ಸ್ಥಿತಿ ಇದೆ)

ಪಕ್ಷಗಳ ಬಲಾಬಲ (ವಾರ್ಡ್‌ವಾರು)

ಒಟ್ಟು - 3,720 ಪ್ರಕಟಿತ - 3,404

ಕಾಂಗ್ರೆಸ್	1,605	ಬಿಜೆಪಿ	285
ಸಂ.ದಳ	380	ಜಾ.ದಳ	273
ಬಿಎಸ್‌ಪಿ	06	ಸಿಪಿಐ	03
ಸಿಪಿಐ(ಎಂ)	01	ಪಕ್ಷೇತರರು	851

140 ಸ್ಥಾನಗಳಿಗೆ ಅವಿರೋಧವಾಗಿ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಪೌರಸಂಸ್ಥೆ ಚುನಾವಣಾ ಫಲಿತಾಂಶ - ವಿವಿಧ ಪಕ್ಷಗಳ ಬಲಾಬಲ

ಪಕ್ಷ	ಗೆದ್ದ ವಾರ್ಡ್	ಕೈವಶವಾದ ಪೌರಸಂಸ್ಥೆ ಸಂಸ್ಥೆ
ಕಾಂಗ್ರೆಸ್	1710	82
ದಳ(ಯು)	378	10
ದಳ(ಎಸ್)	307	7
ಬಿಜೆಪಿ	351	4
ಸಿಪಿಐ(ಎಂ)*	1+2	-
ಸಿಪಿಐ	4	-
ಬಿಎಸ್‌ಪಿ	8	-
ಪಕ್ಷೇತರರು	943	29
ಇತರರು	4	-

* ಸಿಪಿಐ(ಎಂ)ನಿಂದ **ಸವರಿದಾಸ್** (ಕೆ.ಜಿ.ಎಫ್ - ರಾಬರ್ಟ್‌ಸನ್ ಪೇಟೆ) ಸಿಪಿಐ(ಎಂ) ಬೆಂಬಲಿತ **ಎಸ್.ಹೆಚ್.ಸೋಂಪುರ್**-(ಗಜೇಂದ್ರಗಢ) ಮತ್ತು **ಬೈರೆಡ್ಡಿ ತಿರುಪಾಲ್**(ಕಂಪ್ಲಿ-ಬಳ್ಳಾರಿ) ಜಯ ಗಳಿಸಿದ್ದಾರೆ.

1996 ರ ಚುನಾವಣೆಗಳಲ್ಲಿ

ಒಟ್ಟು ಪೌರ ಸಂಸ್ಥೆಗಳು	156
ಚುನಾವಣೆ ನಡೆದದ್ದು	147
ಒಟ್ಟು ವಾರ್ಡುಗಳು	4060
ಚುನಾವಣೆ ನಡೆದದ್ದು	3697
ಜನತಾದಳ	1299
ಪಕ್ಷೇತರರು	1127
ಕಾಂಗ್ರೆಸ್(ಐ)	783
ಬಿಜೆಪಿ	404
ಕೆ.ಸಿ.ಪಿ.	65
ಸಿಪಿಐ(ಎಂ)	8
ಸಿಪಿಐ	7
ರೈತ ಸಂಘ	4

ನೊಂದವರ ಮನ ಮುಟ್ಟಲು ಬೆಂದವರ ಕಣ್ಣೀರು ತೊಡೆಯಲು ಸಾಗಬೇಕಾದ ಮಹಿಳಾ ಆಂದೋಲನ

ಈ ಸಂಘ ಮಹಿಳೆಯರಿಗೆ 'ಆತ್ಮೀಯ ಗೆಳತಿ'ಯಾದದ್ದು ಹೇಗೆ? ಎಂದು ವಿವರಿಸುತ್ತಾರೆ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ನೀಲಾ

ಈ ಬಾರಿ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಜೈಲಿನೊಳಗೆ ಆಚರಿಸಲು ನಿರ್ಧರಿಸಿದ್ದೆವು. ಪ್ರತಿ ವರ್ಷ ಒಂದು ಸೆಮಿನಾರು, ಒಂದು ರ್‍ಯಾಲಿ ಏನನ್ನಾದರೂ ಮಾಡಲಾಗುತ್ತಿತ್ತು. ಆದರೆ ಈ ವರ್ಷ ಹಾಗಾಗಲಿಲ್ಲ. ನಾನು ಜೈಲಿನಲ್ಲಿದ್ದಾಗ ಕನಿಷ್ಟ 17 ಜನ ಮಹಿಳಾ ಕೈದಿಗಳಿದ್ದರು. ಹೆಚ್ಚು ಕಡಿಮೆ ಅವರೆಲ್ಲರ ಬದುಕಿನ ಎಳೆ ಎಳೆಯೂ ಬಿಡಿಸಿ ನೋಡಲು ಪ್ರಯತ್ನಿಸಿದ್ದೆ. ಸೊಸೆಯನ್ನು ಕೊಂದ ಆರೋಪ ಸಾಬೀತಾಗಿ ಜೀವಾವಧಿ ಶಿಕ್ಷೆಗೆ ಒಳಗಾದ ಮಲ್ಲಮ್ಮನನ್ನು ನೋಡಲು ಆಕೆಯ ಸಂಬಂಧಿ ಯಾರೊಬ್ಬರು ಬರುತ್ತಿರಲಿಲ್ಲಾ. ನಾವು ಜೈಲಿನಿಂದ ಹೊರಗೆ ಬರುವಾಗ ಅವಳು ಕಣ್ಣು ನೀರು ಒರೆಸಿಕೊಳ್ಳುತ್ತಾ ಬೀಳ್ಕೊಟ್ಟಿದ್ದಳು. ನನಗೆ ಅವಳು ಹೇಳಿದ ಮಾತುಗಳು ಇನ್ನೂ ನೆನಪಾಗುತ್ತದೆ. "ಅಮ್ಮಾ ಏನೋ ತಪ್ಪು ಮಾಡ್ದೆ. ಅದಕ್ಕಾಗಿ ಶಿಕ್ಷೆ ಅನುಭವಿಸುತ್ತಿದ್ದೇನೆ. ಶಿಕ್ಷೆ ಮುಗಿಸಿ ಹೊರಗೆ ಹೋದ ಮೇಲೆ ನಾನು ನಿಮ್ಮ ಸಂಘಕ್ಕೆ ಸೇರ್‍ತೀನಿ. ನೀವು ಸೇರಿಸ್ಕೋತಿರಲ್ಲ?" ನನಗೆ ಅವಳೊಳಗಾದ ಅಗಾಧ ಬದಲಾವಣೆ ಕಂಡು ಮನಸ್ಸು ಸಂಭ್ರಮಗೊಂಡಿತ್ತು.

ನೋಡಿ ಎಲ್ಲವೂ ಬದಲಾಗುತ್ತದೆ. ಎಲ್ಲವೂ ಬದಲಾಗಲೇಬೇಕು. ನಾವು ಜೈಲಿನೊಳಗೆ ಹೋದೆವು, ನಮ್ಮ ಮಹಿಳೆಯರ ಕೈಯಲ್ಲಿ ಹೊಸ ಸೀರೆ, ರವಿಕೆ, ಹಣ್ಣು ಹಂಪಲುಗಳಿದ್ದವು. ಒಟ್ಟು 19 ಮಹಿಳಾ ಕೈದಿಗಳು ಸಾಲಾಗಿ ನಿಂತುಕೊಂಡರು. ಅವರಲ್ಲಿ ಇಬ್ಬರನ್ನು ಹೊರತು ಪಡಿಸಿದರೆ ಉಳಿದವರೊಂದಿಗೆ 9 ದಿನಗಳನ್ನು ಕಳೆದಿದ್ದೆ. ಎಲ್ಲರಿಗೂ ಹೆಸರಿನಿಂದ ಕೂಗಿ ಕರೆವಂತಹ ಸಲಿಗೆ ಬಂದಿತ್ತು.

ಜೇಲರ್ ನಮಗೆ ಹೊಸ ಕೈದಿಯ ಪರಿಚಯ ಮಾಡಿಕೊಟ್ಟರು. ಅವಳ ಹೆಸರು ಪಾರಮ್ಮ. ನಾನು ಅವಳಿಗೆ ಹೊಸ ಸೀರೆ ಕೊಟ್ಟೆ. ಅವಳ ಕಣ್ಣಿಂದ ದಳ ದಳ ಹರಿದ ಕಣ್ಣೀರು ಹೊಸ ಸೀರೆಯ ಮೇಲೆ ಟಪಗುಟ್ಟುತ್ತಿತ್ತು. ನಾನು ಅವಳ ಮುಖವೆತ್ತಿ 'ಯಾಕಮ್ಮ ಅಳ್ತೀಯಾ?' ಕೇಳ್ದೆ. ಅವಳು ಉತ್ತರಿಸಲಿಲ್ಲಾ. ಜೇಲರ್ ಹೇಳಿದರು. ಮೇಡಂ, ಇವಳು ನಿನ್ನೆ ರಾತ್ರಿ ಬಂದಿದ್ದಾಳೆ. ನಾಲ್ಕು ಮಕ್ಕಳಿಗೆ ವಿಷ ಕೊಟ್ಟು ಸಾಯಿಸಿ ತಾನೂ ವಿಷ ತಗೊಂಡಿದ್ದಳು. ಅಷ್ಟರಲ್ಲಿ ಬೇರೆಯವರ ಕಣ್ಣಿಗೆ ಬಿದ್ದು ದವಾಖಾನೆ(ಆಸ್ಪತ್ರೆಗೆ) ಸೇರಿಸಿದರು. ಮಕ್ಕಳನ್ನು ಕೊಂದು ತಾನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ ಆರೋಪದಿಂದ ಇಲ್ಲಿಗೆ ಬಂದಿದ್ದಾಳೆ" ಎಂದು.

ಯಾರಿಗಾದರೂ ಕರಳು ಕಿತ್ತು ಬರುವ ಘಟನೆಯಿದು. ತನ್ನ ಕರುಳ ಕುಡಿಗೆ ವಿಷವುಣ್ಣಿಸಿದ್ದೇಕೆಂದು ವಿಚಾರಿಸಿದೆವು. ತನ್ನೊಡಲಿನ ಎಲ್ಲ ಕುಡಿಗಳನ್ನು ಕಳೆದುಕೊಂಡು ಆ ಹೆಂಗಸು ಆಕಾಶ-ಭೂಮಿಗೂ ಮೀರಿದ ತೂಕದಷ್ಟು ದುಃಖ ಹೊತ್ತು ನಿಂತಿದ್ದಳು. ಅವಳು ಹೇಳಿದ ಕತೆ ನಮಗೆ ಹೌಹಾರಿತು.

ಪಾರಮ್ಮ ಕೂಲಿಕಾರರ ಮಗಳು, ನಾಗಪ್ಪ ಎಂಬ ಹೈದರಾಬಾದಿನ ಹುಡುಗನಿಗೆ ಕೊಟ್ಟು ಮದುವೆ ಮಾಡಿದ್ದರು. ಅವನೂ ಕೂಲಿ ಮಾಡಿ ಬದುಕುವವನೇ. ಮದುವೆಯಾದ ಕೆಲವು ತಿಂಗಳು ಎಲ್ಲವೂ ಸರಿಯಾಗಿತ್ತು. ಆದರೆ ಅವನಿಗೆ ಬರುವ ಅಲ್ಪ ಕೂಲಿಯಲ್ಲಿ ಮನೆ ಸಾಗಿಸಿಕೊಂಡು ಹೋಗುವುದು ಕಷ್ಟವಾಗುತ್ತಿತ್ತು. ದಿನ ಕಳೆದಂತೆ ಕುಡಿತದ ಚಟ ಅಂಟಿಕೊಂಡಿತು. ಗೀತಾಂಜಲಿ, ಮಾಲಿನಿ ಗುಟ್ಕಾಗಳು ಬೆನ್ನು ಹತ್ತಿದವು. ಹೊಟ್ಟೆಗೆ ಉಣ್ಣುವ ಅನ್ನದ ಬೆಲೆಯೂ ಕೈಗೆಟುಕದಷ್ಟು ಮೇಲೇರಿತ್ತು. ವರ್ಷಕ್ಕೊಂದರಂತೆ ಮಕ್ಕಳು ಹುಟ್ಟತೊಡಗಿದವು. ಕುಡಿದು ಬಂದ ನಾಗಪ್ಪನಿಗೆ ಹೆಂಡತಿ ಅದು ಇಲ್ಲ ಇದು ಇಲ್ಲ ಅಂತ ಕೇಳಿದರಾಯಿತು.. ಹೊಡೆಯುವುದು, ಬೈಯುವುದು ನಡೆಯುತ್ತಿತ್ತು. ದುಡಿದ ಹಣಪೂರ್ತಿ ಸಾರಾಯಿಗೆ ಹೋಗುತ್ತಿತ್ತು. ಪ್ರತಿ ದಿನ ಮನೆಯಲ್ಲಿ ಜಗಳ, ಹೊಡೆದಾಟ. ನೆಮ್ಮದಿಯಿಂದ ಬದುಕಲಾಗದೆ ಸಾಯಲೂ ಆಗದ ಸ್ಥಿತಿಯಲ್ಲಿ ಪಾರಮ್ಮ ದಿನವೂ ಕಣ್ಣೀರುಡುತ್ತಿದ್ದಳು. ದೂರದಲ್ಲಿರುವ ಹೆತ್ತವರೂ ಕೂಡ ಕಡು ಬಡವರೇ, ಮಾಡುವುದೇನು? ಎರಡೆರಡು ದಿನಗಳು ಉಪವಾಸದಿಂದ ಕಳೆಯುತ್ತಿದ್ದಳು. ಚಿಕ್ಕ ಚಿಕ್ಕ ಹಸುಗೂಸುಗಳನ್ನು ಬಿಟ್ಟು ಹೋಗುವುದಾದರೂ ಎಲ್ಲಿಗೆ? ಹೋಗಬೇಕೆಂದರೂ ನಾಗಪ್ಪ ಅಡ್ಡಿ ಮಾಡುತ್ತಿದ್ದ. ಸಂಕಟ ತಾಳದ ಪಾರಮ್ಮ ಒಂದು ದಿನ ಕಲ್ಲು ಮನಸ್ಸು ಮಾಡಿದಳು. ತಾನು ತನ್ನ ಮಕ್ಕಳು ಸಾಯಬೇಕೆಂದು ನಿರ್ಣಯಿಸಿದಳು. ನಾಲ್ಕೂ ಮಕ್ಕಳಿಗೆ ತಲೆ ಸವರಿ ಮುದ್ದು ಮಾಡಿ ವಿಷ ಕೊಟ್ಟಳು. ಕಣ್ಣೆದುರೇ ಚಡಪಡಿಸುತ್ತಿರುವ ಮಕ್ಕಳನ್ನು ನೋಡಲಾಗದೆ ಗೋಡೆಯ ಕಡೆ ಮುಖ ಮಾಡಿದಳು. ಅವಳ ಕಣ್ಣಲ್ಲಿ ನೀರು ಬತ್ತಿ ಹೋಗಿದ್ದವು. ಎದೆಯೊಳಗೆ ಮಮತೆ ಸತ್ತು ಹೋಗಿತ್ತು. ಎಳೆಗೂಸುಗಳ ಚಡಪಟಿಗೆ ನಿಂತ ಕೂಡಲೇ ತಾನೂ ವಿಷ ಕುಡಿದಳು.

ಈಗ ಪಾರಮ್ಮ ಜೈಲಿನಲ್ಲಿದ್ದಾಳೆ. ಅವಳ ಕಣ್ಣೀರ ಕೋಡಿಗೆ ನಾವು ಹೇಗೆ ಸಾಂತ್ವನ ಹೇಳುವುದು. ಮತ್ತೂ ಸಾಂತ್ವನ ಹೇಳಿದೆವು "ಪಾರಮ್ಮ ನೀನು ಸಾಯಲಿಕ್ಕೆ ಪ್ರಯತ್ನಿಸಿದ್ದು ದೊಡ್ಡ ತಪ್ಪು. ಮಕ್ಕಳನ್ನು ಸಾಯಿಸಿ ಅಗಾಧ ತಪ್ಪು ಮಾಡಿರುವಿ. ಇರಲಿ ಆಗಿದ್ದು ಮರೆಯಲಿಕ್ಕೆ ಪ್ರಯತ್ನಿಸು. ಇಲ್ಲಿಂದ ಹೊರ ಬಂದ ಮೇಲೆ ನಿನ್ನ ಕಾಲ ಮೇಲೆ ನೀನು ಬದುಕುವಂತಹ ಛಲವತಿಯಾಗಬೇಕು. ಸಾಯುವುದು ಭೂಷಣವಲ್ಲ. ನೀನು ಹೊರಗೆ ಬಂದ ಮೇಲೆ ನಮ್ಮ ಸಂಘಕ್ಕೆ ಸಂಪರ್ಕಿಸು" ಎಂದು ನಮ್ಮ ಸಂಘದ ವಿಳಾಸ ಅವಳ ಕೈಗಿತ್ತಾಗ ಅವಳ ಕಣ್ಣಲ್ಲಿ ಸಣ್ಣದಾದ ಬದುಕುವ ಆಶಾಕಿರಣ ಮಿಂಚಿತು.

ನೊಂದವರೆಲ್ಲಾ ಒಂದಾಗಬೇಕಾದದ್ದು ಹೀಗೆ ಅಲ್ಲವೇನು? ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ನಮಗೆಲ್ಲಾ ಕಲಿಸಿದ್ದು ಇದನ್ನೇ, ರಾಜ್ಯ ಮಟ್ಟದ ನಾಲ್ಕನೆಯ ಸಮ್ಮೇಳನ ನಡೆಸುತ್ತಿರುವ ಈ ದಿನಗಳವರೆಗೆ ಜನವಾದಿ ಹೀಗೆ ನಡೆದುಕೊಂಡು ಬಂದಿದೆ. ನೊಂದವರಿಗೆ ಆಸರೆಯಾಗುತ್ತಾ, ಒಂದು ಹನಿ ಕಣ್ಣೀರಾದರೂ ಒರೆಸುತ್ತಾ ಬದುಕಬೇಕು ಎಂಬ ಛಲದ ಬೀಜಗಳನ್ನು ಬಿತ್ತುತ್ತ, ನಿರಾಶೆ, ನೀರವತೆಯ ಬದಲಿಗೆ ಉತ್ಸಾಹ-ಸ್ನೇಹವನ್ನು ಹಂಚುತ್ತಾ ಜನವಾದಿ ಹೆಜ್ಜೆ ಹಾಕುತ್ತಿದೆ.

ನಿರ್ಮಲ ಎಂಬ ಒಂದು ಮಗುವಿನ ತಾಯಿಗೆ ಅತ್ತೆ ಗಂಡ ನಾದಿನಿ ಸೇರಿ ಸೀಮೆ ಎಣ್ಣೆ ಹಾಕಿ ಬೆಂಕಿ ಹಚ್ಚಿದರು. ಮೈಯೆಲ್ಲಾ ಸುಟ್ಟ ಗಾಯಗಳನ್ನು ಹೊತ್ತು ನರಳುತ್ತಿರುವ ನಿರ್ಮಲಾಗೆ ಸುಳ್ಳು ಹೇಳಿಕೆ ಕೊಡುವಂತೆ ಅತ್ತೆ ಗಂಡ ಹೆದರಿಸಿದರು. ಆದರೆ ವಿಷಯ ತಿಳಿದ ಜೆ.ಎಂ.ಎಸ್. ಮಹಿಳೆಯರು ಅಲ್ಲಿಗೆ ಧಾವಿಸಿ ಸತ್ಯ ಹೇಳಲು ಪ್ರೋತ್ಸಾಹ ಕೊಟ್ಟರು. ಸಾಯುವಾಗಲು ಹೆಣ್ಣಾದವರು ಹೆದರಿ ಸಾಯಬೇಕೆಂದು ಬಯಸಿದ ಅತ್ತೆ - ಗಂಡನ ಆಸೆಗೆ ತಣ್ಣೀರು ಬಿದ್ದಿತು. ತೀವ್ರ ಸುಟ್ಟ ಗಾಯದ ನಿರ್ಮಲ ಅಸು ನೀಗಿದಳು. ಆದರೆ ಅವಳನ್ನು ಸಾಯಿಸಿದ ಅತ್ತೆ-ಗಂಡ ನಾದಿನಿಯನ್ನು ಜೈಲಿಗೆ ಕಳಿಸುವಲ್ಲಿ ಜೆ.ಎಂ.ಎಸ್. ಯಶಸ್ವಿಯಾಯಿತು.

ಹೀಗೆ ಎಷ್ಟೊಂದು ಘಟನೆಗಳಲ್ಲಿ ಜನವಾದಿ ಮಹಿಳಾ ಸಂಘಟನೆಯು ಧೈರ್ಯದಿಂದ ಮುನ್ನುಗ್ಗಿ ನ್ಯಾಯದ ತಕ್ಕಡಿ ಎತ್ತಿ ಹಿಡಿದಿದೆ. ಹಣದ ಎಂಜಲು ಇದ್ದ ಕಡೆ ಪೋಲೀಸ್ ಇಲಾಖೆ ವಾಲಿದಾಗಲೂ ಜನವಾದಿ ಮಧ್ಯಪ್ರವೇಶಿಸಿದೆ. ಮಹಿಳೆಯರ ದೂರುಗಳನ್ನು ಸ್ವೀಕರಿಸಿ ಪ್ರಕರಣ ನೊಂದಾಯಿಸಲು ಒತ್ತಾಯಿಸಿ ಯಶಸ್ವಿಯಾಗಿದೆ.

ಮನೆಗಳ ಪಾತ್ರೆ ತಿಕ್ಕಿ ಬದುಕು ನಡೆಸುವ ರಜಿಯಾ ತನ್ನ ಮಗಳನ್ನು ಶಾಲೆಯಿಂದ ಬಿಡಿಸಿ ಮನೆಯ ಕೆಲಸಕ್ಕೆ ಹಚ್ಚಿದ್ದಳು. ಆದರೆ ಜನವಾದಿ ಮಹಿಳೆಯರ ಸಲಹೆಯಂತೆ ಮಗಳನ್ನು ಮತ್ತೆ ಶಾಲೆಗೆ ಕಳಿಸಿದ್ದು ಸಾದನೆಯ ಒಂದು ಅಂಶವು ಹೌದಾಗಿತ್ತು.

ಒಂದು ದಿನ 22 ರ ಹರೆಯದ ಜಯಶ್ರೀ ಮಹಿಳಾ ಸಂಘವನ್ನು ಹುಡುಕಿಕೊಂಡು ಬಂದಳು. ಅವಳ ಕತೆಯಲ್ಲಿ ಮುಗ್ಧತೆಯಿತ್ತು, ನೋವಿತ್ತು. ಹೇಗಾದರೂ ಸಫಲಳಾಗಬೇಕೆಂಬ ಬಯಕೆಯಿತ್ತು.



ಅವಳಿಗೊಂದು ನೆರವು ಬೇಕಿತ್ತು. ಮದುವೆಯಾಗುತ್ತೇನೆಂದು ನಂಬಿಸಿ ಮೂರು ಗರ್ಭಪಾತ ಮಾಡಿಸಿದ ಮಲತಾಯಿಯ ತಮ್ಮ (ಸೋದರಮಾವ) ಶಾಲೆಯೊಂದರಲ್ಲಿ ಶಿಕ್ಷಕನಾಗಿದ್ದ. ವರದಕ್ಷಿಣೆ ಆಸೆಯಿಂದ ಬೇರೆ ಕಡೆ ನೆಂಟಸ್ತನ ಮಾಡಿಕೊಂಡು ಇವಳನ್ನು ಕೈಬಿಟ್ಟಿದ್ದ. ಜಯಶ್ರೀಯ ದುಡುಕುತನ ಮತ್ತು ಬೇಜವಾಬ್ದಾರಿತನದ ನಡವಳಿಕೆಗಾಗಿ ಬೈಯ್ಯಬೇಕಾಯ್ತು. ಅವನು ಕೆಲಸ ಮಾಡುವಲ್ಲಿ ದೂರು ಕೊಟ್ಟು, ಅವನಿಗೆ ಹೆಣ್ಣು ಕೊಟ್ಟವರಿಗೆ ಅವನ ನಿಜ ಬಣ್ಣ ತೋರಿಸಿ ಕೊಡಲಾಯಿತು. ಕಡೆಗೂ ಆತ ಜಯಶ್ರೀಯನ್ನು ಅಧಿಕೃತವಾಗಿ ಮದುವೆಯಾಗಿ ಮಹಿಳಾ ಸಂಘಟನೆಯ ಕಚೇರಿಗೆ ಸ್ವೀಟ್ ಕೊಡಲು ಬಂದನು. ಆಗ ಜಯಶ್ರೀ ಮುಖದಲ್ಲಿ ಗೆಲುವಿನ ನಗೆಯಿತ್ತು, ಆತ್ಮವಿಶ್ವಾಸದ ಕಳೆಯಿತ್ತು.

ಪಾರಮ್ಮ ನಿರ್ಮಲ, ಮಲ್ಲಮ್ಮ ರಜಿಯಾ, ಜಯಶ್ರೀ ಇವರೆಲ್ಲರ ಬದುಕಿನ ಘಟನೆಗಳ ಹಿಂದೆ ಈ ಕ್ರೂರ ಪಾಳೆಗಾರಿ ಜಮೀನ್ದಾರಿ ವ್ಯವಸ್ಥೆಯ ಮೌಲ್ಯಗಳೇ ಅಡಗಿವೆ. ಈ ಮೌಲ್ಯಗಳು ಎಲ್ಲ ಸ್ವರೂಪದ ಮುಖವಾಡಗಳನ್ನು ಹೊತ್ತು ಸಾಮಾನ್ಯ ಜನರ ಕುಟುಂಬಗಳನ್ನು ದಿಕ್ಕೆಡಿಸುತ್ತಿವೆ. ಆದ್ದರಿಂದಲೇ ಜನವಾದಿ ಮಹಿಳಾ ಸಂಘಟನೆಯು **ಕೌಟುಂಬಿಕ ನೆಲೆಯೊಳಗಿನ ಎಲ್ಲಾ ಸೂಕ್ಷ್ಮತೆಗಳನ್ನು ಅರಿತುಕೊಳ್ಳುತ್ತಲೇ ಪಾಳೇಗಾರಿ ಮೌಲ್ಯಗಳ ವಿರುದ್ಧ ಸಂಘರ್ಷಕ್ಕಿಳಿಯಬೇಕಿದೆ. ನೊಂದವರ ಮನ ಮುಟ್ಟಲು , ಬೆಂದವರ ಕಣ್ಣೀರು ತೊಡೆಯಲು 'ಆತ್ಮೀಯ ಗೆಳತಿ'ಯಂತೆ ಜನವಾದಿ ಸಮರ ಧೀರತೆಯಿಂದ ಹೆಜ್ಜೆಯಿಡಬೇಕಿದೆ.**

○

ಬಜೆಟ್ ಅಂಗೀಕಾರ :

ತೆರೆಮರೆಯಲ್ಲಿ ವಾಜಪೇಯಿ ಸೋನಿಯ ಶಾಮೀಲು?

ಯಾವುದೇ ವಿವರವಾದ ಚರ್ಚೆಗಳಿಲ್ಲದೆ ಜನವಿರೋಧಿ ಬಜೆಟ್ಟನ್ನು ಅಂಗೀಕಾರ ಮಾಡಿದ ಕೇಂದ್ರದ ಎನ್‌ಡಿಎ ಸರಕಾರದ ಕ್ರಮ ಖಂಡನಾರ್ಹ. ದೇಶದ ಜನತೆ ಈ ಸರಕಾರದ ರಾಜಿನಾಮೆಗೆ ಒಕ್ಕೊರಲಿನ ಒತ್ತಾಯವನ್ನು ಮುಂದುವರಿಸಬೇಕಾಗಿದೆ. ಈ ಹಿಂದೆ ರೈಲ್ವೆ ಬಜೆಟ್ಟನ್ನು ಯಾವುದೇ ಚರ್ಚೆ ಇಲ್ಲದೆ ಅಂಗೀಕಾರ ಮಾಡಿದ ಹೇಯ ಕೃತ್ಯವನ್ನು ನೆನಪಿಸಿಕೊಳ್ಳಬಹುದು.

ಬಜೆಟ್ ಅಂಗೀಕಾರದಿಂದ ಈ ದೇಶದ ಶ್ರೀಮಂತರು ವಿದೇಶಿ ಕಂಪನಿಗಳು ಸಂತೋಷ ಪಟ್ಟಿದ್ದಾರೆ. ಸಂಕಟಕ್ಕೆ ಸಿಲುಕಿದ ಕಾರ್ಮಿಕರು, ರೈತಾಪಿ ಜನತೆ, ಬಡವರು ಇದರ ವಿರುದ್ಧ ಹೋರಾಡದೆ ಅನ್ಯ ಮಾರ್ಗವೇ ಇಲ್ಲ. ಕಾರ್ಮಿಕ ವಿರೋಧಿ ಕಾನೂನುಗಳು, ಬೆಲೆಗಳನ್ನು ಏರಿಸುವ ತೆರಿಗೆ, ರೈತರ ಬೆಳೆಗೆ ಬೆಲೆ ಕುಸಿಯುವ ಆಮದು ನೀತಿ, ಎಲ್ಲವೂ ಅಡಕವಾಗಿವೆ ಈ ಬಜೆಟ್ಟಿನಲ್ಲಿ. ಅದರ ಜತೆಯಲ್ಲಿ ತೆಹಲ್ಕಾ ಡಾಟ್ ಕಾಮ್ ಬಹಿರಂಗ ಪಡಿಸಿದ ಹಗರಣಗಳು ಬೇರೆ. ಲಂಚ ಸ್ವೀಕರಿಸುತ್ತಿದ್ದ ವ್ಯಕ್ತಿಗಳು ಸಾಧಾರಣ ಕುಳಗಳಲ್ಲ. ಆಳುವ ಸರಕಾರದ ಎರಡು ಪ್ರಮುಖ ಪಕ್ಷಗಳ ಅಧ್ಯಕ್ಷರು. ಅವರು ಲಂಚ ಸ್ವೀಕರಿಸಿದ್ದು, ದೇಶದ ರಕ್ಷಣೆಯ ವಿಚಾರದಲ್ಲಿ. ಇಂತಹ ಸನ್ನಿವೇಶದಲ್ಲಿ ದೇಶದಲ್ಲೆಲ್ಲಾ ಜನರು ತೀವ್ರ ಪ್ರತಿಭಟನೆಯನ್ನು ಸೂಚಿಸಿದರು. ಅದರ ಪ್ರತಿಫಲವಾಗಿ, ಸಂಸತ್ತಿನಲ್ಲೂ ತೀವ್ರ ಪ್ರತಿರೋಧವನ್ನು ಒಡ್ಡಲಾಯ್ತು. ಸರಕಾರ ರಾಜೀನಾಮೆ ನೀಡುವವರೆಗೂ ಕಲಾಪಗಳನ್ನು ನಡೆಸಲು ಬಿಡುವುದಿಲ್ಲವೆಂದು ಎಲ್ಲಾ ಪ್ರತಿಪಕ್ಷಗಳು ಒಂದಾಗಿ ಹೋರಾಟ ನಡೆಸಿದೆವು.

ಆದರೆ ತೆರೆಯ ಮರೆಯಲ್ಲಿ ಏನು ನಡೆಯಿತೆಂದು ಗೊತ್ತಾಗಲಿಲ್ಲ. **ಪ್ರಧಾನಮಂತ್ರಿ ವಾಜಪೇಯಿ, ಲೋಕಸಭಾಧ್ಯಕ್ಷ ಬಾಲಯೋಗಿ ಕಾಂಗ್ರೆಸ್** ಅಧ್ಯಕ್ಷೆ ಹಾಗೂ ವಿರೋಧ ಪಕ್ಷದ ನಾಯಕಿ **ಸೋನಿಯಾಗಾಂಧಿ ಮಾತುಕತೆ ನಡೆಸಿದರು. ತೆಹಲ್ಕಾ ಹಗರಣದ ಬಗ್ಗೆ ಜಂಟಿ ಸಂಸತ್ ಸಮಿತಿಯನ್ನು ರಚಿಸುವ ಬಗ್ಗೆ ಮುಕ್ತಮನಸ್ಸು ಇರುವುದಾಗಿ ಪ್ರಧಾನಿ ಹೇಳಿದ ಕೂಡಲೇ ಬಜೆಟ್ಟನ್ನು ಅಂಗೀಕರಿಸುವ ಚರ್ಚೆಯಲ್ಲಿ ಭಾಗವಹಿಸುವುದಾಗಿ ಕಾಂಗ್ರೆಸ್ ಒಪ್ಪಿತು.** ಹೆಚ್ಚಿನ ಯಾವುದೇ ಚರ್ಚೆ ಇಲ್ಲದೆ, ಬಜೆಟ್ ಅಂಗೀಕಾರವಾಯ್ತು. ಆದರೆ ಜಂಟಿ ಸಂಸತ್ ಸಮಿತಿ (ಜೆಪಿಸಿ) ರಚನೆ ಆಗಲಿಲ್ಲ. ಭ್ರಷ್ಟಾಚಾರಿಗಳ ವಿರುದ್ಧ ಯಾವುದೇ ಕೇಸು ಸಹ ದಾಖಲಾಗಲಿಲ್ಲ!

ಬಿಜೆಪಿ ನೇತೃತ್ವದ ಸರಕಾರದ ಏಕಪಕ್ಷೀಯ ಸರ್ವಾಧಿಕಾರಿ ನೀತಿಯ ವಿರುದ್ಧ, ರಕ್ಷಣಾ ಹಗರಣದ ವಿರುದ್ಧ, ಜನತೆಯ ಸಮರ ಮುಂದುವರಿಯಬೇಕು. ನಾಚಿಕೆಗೆಟ್ಟ ಎನ್‌ಡಿಎ ಸರಕಾರದ ರಾಜೀನಾಮೆಗೆ ಒತ್ತಾಯ ಇನ್ನಷ್ಟು ತೀವ್ರಗೊಳ್ಳಬೇಕು.

ಜಾಗತಿಕ ಮಿಲಿಟರಿ ಕೂಟದತ್ತ ಅಮೇರಿಕಾ ತಾಳಕ್ಕೆ ಮೇಳ ಊದುವ ಬಿಜೆಪಿ

ಅತ್ಯಂತ ತೀವ್ರತರ ಆರ್ಥಿಕ ಬಿಕ್ಕಟ್ಟನ್ನು ಅನುಭವಿಸುತ್ತಿರುವ ಅಮೇರಿಕಾ ಜಾಗತಿಕ ಅಧಿಪತ್ಯಕ್ಕಾಗಿ ಮಿಲಿಟರಿ ಕೂಟ ರಚಿಸಲು ಮುಂದಾಗಿದೆ. ಇದಕ್ಕೆ ಭಾರತ ಹೂಂಗುಟ್ಟಿದೆ. ಇದರ ಗಂಡಾಂತರ ವಿವರಿಸುವ ಲೇಖನ.

ಅಮೇರಿಕಾ ವಿಶ್ವದ ಮೇಲಿನ ತನ್ನ ಅಧಿಪತ್ಯವನ್ನು ಮತ್ತಷ್ಟು ಬಿಗಿಗೊಳಿಸಲು ಆ ಮೂಲಕ ಜಾಗತಿಕ ಲೂಟಿಗೆ ಅವಕಾಶ ನಿರ್ಮಿಸಿಕೊಳ್ಳುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಕ್ಷಿಪಣಿ ರಕ್ಷಣಾ (National Missile Defence NMD) ವ್ಯವಸ್ಥೆಯನ್ನು ರೂಪಿಸಿದೆ. ಕ್ಲಿಂಟನ್‌ರ ಅವಧಿಯಲ್ಲಿ ಇದು ರೂಪಗೊಂಡರೂ ಅಮೇರಿಕದ ನೂತನ ಅಧ್ಯಕ್ಷ ಜಾರ್ಜ್ ಬುಷ್‌ರವರು ಮೇ 1 ರಂದು ತಮ್ಮ ಭಾಷಣದಲ್ಲಿ ಎನ್.ಎಂ.ಡಿ. ವ್ಯವಸ್ಥೆಯನ್ನು ಮುಂದುವರಿಸುವ ದೃಢ ನಿರ್ಧಾರವನ್ನು ಪ್ರಕಟಿಸಿದರು. ಇದರೊಂದಿಗೆ ಶೀತಲ ಸಮರ ಸಂದರ್ಭದೊಳಗಿಂದ ಜಾಗತಿಕ ಶಸ್ತ್ರಾಸ್ತ್ರ ಸಮತೋಲನದ ಹಿನ್ನೆಲೆಯಲ್ಲಿ 1972ರಲ್ಲಿ ರೂಪುಗೊಂಡಿದ್ದ ಬ್ಯಾಲಿಸ್ಟಿಕ್ ಕ್ಷಿಪಣಿ ವಿರೋಧಿ (ABM Treaty) ಒಪ್ಪಂದದ ಸಾವನ್ನೂ ಘೋಷಿಸಿದರು. ಬುಷ್‌ರವರ ಹೊಸ ಕ್ಷಿಪಣಿ ವ್ಯವಸ್ಥೆ ಮತ್ತು ಅಣ್ವಸ್ತ್ರ ನೀತಿಯ ಬದಲಾವಣೆಗಳನ್ನು ವಾಜಪೇಯಿ ಸರ್ಕಾರ ಎಲ್ಲಾ ನಾಚಿಕೆಗಳನ್ನು ಸ್ವಾಭಿಮಾನವನ್ನು ಬಿಟ್ಟು ಸ್ವಾಗತಿಸಿದೆ. ಮಾತ್ರವಲ್ಲ ಬುಷ್‌ರ ರಾಷ್ಟ್ರೀಯ ರಕ್ಷಣಾ ಸಲಹೆಗಾರ ರೈಸ್‌ರವರ ಕೇವಲ ಒಂದು ದೂರವಾಣಿ ಕರೆಗೆ ಓಗೊಟ್ಟು, ಬುಷ್‌ರ ಭಾಷಣವನ್ನು ಹೊಗಳಿ ವಿದೇಶಾಂಗ ಸಚಿವ ಜಸ್ವಂತ್ ಸಿಂಗ್ ಪತ್ರಿಕಾ ಹೇಳಿಕೆಯನ್ನೇ ನೀಡಿದರು.

ಸಣ್ಣಪಾಲುದಾರ ಭಾರತ!

ವಿದೇಶಾಂಗ ಸಚಿವಾಲಯದ ಈ ಹೇಳಿಕೆಯು ಭಾರತದ ವಿದೇಶಾಂಗ ನೀತಿಯು ದಾರಿತಪ್ಪಿರುವುದನ್ನು ಸೂಚಿಸುತ್ತದೆ. ಇದರಲ್ಲಿ ಅಮೇರಿಕಾದ ಎನ್.ಎಂ.ಡಿ. ನಿಲುವನ್ನು ಪೂರ್ತಿಯಾಗಿ ಹೊಗಳುವ ಅತ್ಯಂತ ಅಸಹ್ಯಕರ ಅಂಶಗಳಿವೆ. 'ಶೀತಲ ಸಮರದ ರಕ್ಷಣಾ ವಿನ್ಯಾಸ ನಿರ್ಮಾಣಕ್ಕೆ ಆದಾರವಾಗಿದ್ದ ವ್ಯೂಹಾತ್ಮಕ ಚೌಕಟ್ಟನ್ನು ಪರಿವರ್ತಿಸುವ ಪ್ರಯತ್ನ', 'ಅಮೇರಿಕಾ ಅಣು ಶಕ್ತಿಗಳಿಂದ ಏಕಪಕ್ಷೀಯ ಕಡಿತ', 'ಹಳೆಯ ಜಾಡಿನಿಂದ ಸ್ಪಷ್ಟವಾಗಿ ಬೇರ್ಪಡುವ', ಹಾಗೆ..., ಹೀಗೆಂದು ಬುಷ್‌ರವರ ಭಾಷಣವನ್ನು ಅರ್ಥೈಸಿ ಹೊಗಳಲಾಗಿದೆ. ಆದರೆ ಇಡೀ ಹೇಳಿಕೆಯಲ್ಲಿ ಜಾಣತನದಿಂದ ಕೈಬಿಟ್ಟಿರುವ ಅಂಶವೆಂದರೆ ಇದೇ ವಿದೇಶಾಂಗ ಸಚಿವ ಜಸ್ವಂತ್ ಸಿಂಗರು ಕಳೆದ ವರ್ಷ ಟೀಕೆ ಮಾಡಿದ್ದ ಎನ್‌ಎಂಡಿ ಸೂಚನೆಯ ಬಗ್ಗೆ ಯಾವುದೇ ಪ್ರಸ್ತಾಪ ಮಾಡದಿರುವುದು. **ಅಮೇರಿಕಾದ ಜೊತೆ ಸಣ್ಣ ಪಾಲುದಾರನಾಗುವ ಪಾತ್ರಕ್ಕೆ ಭಾರತ ಎಷ್ಟೊಂದು ಆಳವಾಗಿ ಬದ್ಧವಾಗಿದೆ ಎಂಬುದರ ಬಹಿರಂಗ ನಿದರ್ಶನವಾಗಿ ಬಿಜೆಪಿ ನೇತೃತ್ವದ ಸರ್ಕಾರದಿಂದ ಈ ಹೇಳಿಕೆ ಬಂದಿದೆ.**

ಚೀನಾ ಗುರಿಯಾಗಿದೆ

ಬುಷ್‌ರವರ ಭಾಷಣ ಹೇಳುವುದೇನು? ನೀರು, ಭೂಮಿ, ಆಕಾಶಗಳಿಂದ ಹಾರಿಬರುವ ಕ್ಷಿಪಣಿಗಳ ವಿರುದ್ಧ ವಿಶಾಲ ಜಾಲವನ್ನು ನಿರ್ಮಿಸುವ ಯೋಜನೆ ಇದರಲ್ಲಿ ಪ್ರಕಟವಾಗಿದೆ. ಅಮೇರಿಕಾದ ಮೇಲೆ ಇದ್ದಕ್ಕಿದ್ದಂತೆ ಕ್ಷಿಪಣಿಗಳಿಂದ ಎರಗಿ ದಾಳಿಮಾಡುವ "ಕಳ್ಳ ರಾಷ್ಟ್ರ"ಗಳ ಬೆದರಿಕೆಯನ್ನು ಎದುರಿಸಲು ಈ ಆಕಾಶಯುದ್ಧ ವ್ಯವಸ್ಥೆಯ ಉದ್ದೇಶವಾಗಿದೆಯಂತೆ. ಅಮೇರಿಕಾದ ಪ್ರಕಾರ, ಉತ್ತರ ಕೊರಿಯಾ, ಇರಾಕ್, ಇರಾನ್ ನಂತಹವುಗಳು ಈ ಸಾಲಿಗೆ ಸೇರುತ್ತವೆ! ಇವುಗಳ ಬೆದರಿಕೆಯನ್ನು ಎದುರಿಸಲು ಕ್ಲಿಂಟನ್ ಅವಧಿಯಲ್ಲಿ ಈ ಕ್ಷಿಪಣಿ ವಿರೋಧಿ ವ್ಯವಸ್ಥೆಯನ್ನು ಸೂಚಿಸಲಾಗಿತ್ತು. ಅಮೇರಿಕಾದ ಅಂತರ್ಯದಲ್ಲಿ ಆಗ ನಿಜವಾದ ಗುರಿ ಚೀನಾ ಆಗಿತ್ತು. ಬುಷ್ ಅಧಿಕಾರಕ್ಕೆ ಬರುವುದರೊಂದಿಗೆ ಈಗ ಚೀನಾ ಬಹಿರಂಗವಾದ ಗುರಿಯಾಗಿದೆ. ಸೋವಿಯತ್ ಯೂನಿಯನ್ ಇದ್ದಾಗಿನ ನೀತಿಯ ಬದಲಿಗೆ ಚೀನಾವನ್ನು ಗುರಿಯಾಗಿಸಿಕೊಂಡು ಪೆಸಿಫಿಕ್ ಪ್ರದೇಶಕ್ಕೆ ಗಮನವನ್ನು ವರ್ಗಾಯಿಸಲಾಗಿದೆ.

ವಿಶ್ವದ ಮೇಲೆ ಯಜಮಾನ್ಯ ಹೇರಿಕೆ.

ಅಮೇರಿಕವು ತನ್ನಲ್ಲಿರುವ ತಂತ್ರಜ್ಞಾನದ ಶ್ರೇಷ್ಠತೆಯನ್ನು ಬಳಸಿಕೊಂಡು ವಿಶ್ವದ ವಿವಿಧ ಭಾಗಗಳಲ್ಲಿ ಕ್ಷಿಪಣಿ-ವಿರೋಧಿ ನೆಲೆಗಳ ವಿಶಾಲ ಜಾಲವನ್ನು ಕಟ್ಟುವುದರ ಮೂಲಕ ಅಮೇರಿಕವು ತನ್ನ ಮಿಲಿಟರಿ ಶಕ್ತಿ ಮತ್ತು ಯಜಮಾನ್ಯವನ್ನು ಹೇರಲು ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ 1972ರಿಂದ ಎಲ್ಲಾ ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಗಳಿಗೆ ಆಧಾರವಾಗಿದ್ದ ಎಬಿಎಂ ಒಪ್ಪಂದವನ್ನು ನಿರ್ವೀರ್ಯಗೊಳಿಸಲು ಅಮೇರಿಕಾದ ಆಸಕ್ತಿಯನ್ನು ಬುಷ್ ಘೋಷಿಸಿದ್ದಾರೆ. ಆದರೆ, ಈ ಒಪ್ಪಂದಕ್ಕೆ ಬದಲಾಗಿ ಶಸ್ತ್ರಾಸ್ತ್ರ ನಿಯಂತ್ರಣ ಮತ್ತು ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ನಿರ್ವಹಿಸಲು ಹೊಸದಾದ ಯಾವ ಚೌಕಟ್ಟು ಬರಲಿದೆಯೆಂಬ ಬಗ್ಗೆ ಬುಷ್‌ರವರ ಭಾಷಣ ಏನನ್ನೂ ಹೇಳುವುದಿಲ್ಲ.

ಎನ್‌ಎಂಡಿಯಿಂದ ವಿಶ್ವದ ಮೇಲೆ ಅಧಿಪತ್ಯ ಹೇರಿಕೆ

ಶೀತಲ ಸಮರದ ಅಣ್ವಸ್ತ್ರ ಸಮತೋಲನವನ್ನು ಕೈಬಿಡುವ ಹೆಸರಲ್ಲಿ ತರುತ್ತಿರುವುದು ಏನೆಂದರೆ ಅಮೇರಿಕದ ಯಜಮಾನ್ಯವನ್ನು ಹೇರುವ ಮತ್ತು ರಷ್ಯಾ ಹಾಗೂ ಚೀನಾಗಳನ್ನು ಬೆದರಿಸುವ ಅಣ್ವಸ್ತ್ರ ವ್ಯವಸ್ಥೆ.

ಈಗಿರುವ ಶಸ್ತ್ರಾಸ್ತ್ರ ನಿಯಂತ್ರಣ ವ್ಯವಸ್ಥೆಯನ್ನು ಕಳಚಿ ಹಾಕುವುದರಿಂದ ಹೊಸ ಶಸ್ತ್ರಾಸ್ತ್ರ ಪೈಪೋಟಿಗೆ ಕಾರಣವಾಗುತ್ತದೆ. ಬುಷ್‌ರವರ ಯೋಜನೆ. ಅಣ್ವಸ್ತ್ರ ಸಿಡಿತಲೆಗಳನ್ನು ಹೊಂದಿರುವ ಕ್ಷಿಪಣಿಗಳ ಸಂಖ್ಯೆಯನ್ನು ವಿಶ್ವಾದ್ಯಂತ ಹೆಚ್ಚಿಸುತ್ತದೆ ಅಷ್ಟೆ. ಸುಮಾರು 60 ಬಿಲಿಯನ್ ಡಾಲರ್‌ನಿಂದ 100

ಪ್ರಕಾಶ್ ಕಾರಟ್

ಬಿಲಿಯನ್ ಡಾಲರ್‌ವರೆಗೆ (ಈಗಿನ ದರದಲ್ಲಿ 2,82,000 ಕೋಟಿ ರೂಗಳಿಂದ 4,70,000 ಕೋಟಿ ರೂಗಳವರೆಗೆ) ಖರ್ಚಾಗುವ ಈ ಯೋಜನೆಯು ಶಸ್ತ್ರಾಸ್ತ್ರ ತಯಾರಿಕೆಯ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳಿಗೆ ಅತೀವ ಸಂತೋಷವನ್ನುಂಟುಮಾಡಿದೆ.

ಮಿತ್ರರಾಷ್ಟ್ರಗಳೇ, ಕಾದು ನೋಡುತ್ತಿರುವಾಗ ವಾಜಪೇಯಿ ಸರ್ಕಾರ ಅನುಮೋದಿಸಿದೆ.

ಅನುಮಾನ ಪಡುತ್ತಿರುವ ಮಿತ್ರರು.

ಯೂರೋಪ್ ಮತ್ತು ಪೂರ್ವ ಏಷ್ಯಾದ ಅಮೇರಿಕಾದ ಮಿತ್ರ ರಾಷ್ಟ್ರಗಳು ಬುಷ್ ಯೋಜನೆಗೆ ಅನುಮೋದನೆ ನೀಡಲು ಆತುರವನ್ನು ಪ್ರದರ್ಶಿಸುತ್ತಿಲ್ಲ. ಈ ಯೋಜನೆ ಮಿತ್ರರಾಷ್ಟ್ರಗಳನ್ನು ಯೋಚನೆಗೀಡುಮಾಡಿದೆ. ಒಂದು ಖಚಿತ ತೀರ್ಮಾನವನ್ನು ಹೇಳಲು ಖಚಿತವಾದ ಸೂಚನೆಗಳು ಬರಲಿ ಎಂದು ಬ್ರಿಟನ್ ಪ್ರಧಾನಿ ಹೇಳಬೇಕಾಗಿ ಬಂದಿದೆ. ಅಮೇರಿಕಾದ ಆಪ್ತ ಮಿತ್ರನಾದ ಬ್ರಿಟನ್‌ನೊಳಗೆ, ಬುಷ್ ಯೋಜನೆಯಿಂದ ತನ್ನ ನೆಲೆಗಳನ್ನು ಒದಗಿಸಬೇಕಾಗಿ ಬರುತ್ತದೆಂದು ವಿರೋಧ ಸೃಷ್ಟಿಯಾಗಿದೆ. ಫ್ರಾನ್ಸ್ ಮತ್ತು ಜರ್ಮನಿಯಂತಹ ನ್ಯಾಟೋದ ಸದಸ್ಯ ರಾಷ್ಟ್ರಗಳು ಬುಷ್ ಯೋಜನೆಗೆ ಬೆಂಬಲ ನೀಡಲು ಮುಂದೆ ಬಂದಿಲ್ಲ.

ಅಮೇರಿಕನ್ ಕೂಟದ ರಾಷ್ಟ್ರಗಳಾದ ಜಪಾನ್ ಮತ್ತು ದಕ್ಷಿಣ ಕೊರಿಯಾಗಳು ಇದುವರೆಗೂ ಅಧಿಕೃತವಾಗಿ ಈ ಯೋಜನೆಯನ್ನು ಸ್ವೀಕರಿಸಿಲ್ಲ. ಉತ್ತರ ಕೊರಿಯಾವನ್ನು ಗುರಿಮಾಡಿರುವ ಈ ಯೋಜನೆಯಿಂದ ದಕ್ಷಿಣ ಮತ್ತು ಉತ್ತರ ಕೊರಿಯಾಗಳ ನಡುವಿನ ಶಾಂತಿ ಪ್ರಕ್ರಿಯೆಗೆ ಭಂಗ ತರುತ್ತದೆಂಬ ಆತಂಕವನ್ನು ದಕ್ಷಿಣ ಕೊರಿಯಾದ ಅಧ್ಯಕ್ಷರು ಹೊಂದಿದ್ದಾರೆ. ಈ ಹಿಂದೆ ಎನ್.ಎಂ.ಡಿ. ಬಗ್ಗೆ ಇವರು ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಮತ್ತೊಂದು ಕಡೆ ಜಾಗತಿಕ ಮಿಲಿಟರಿ ಕೂಟಗಳಿಗೆ ಜಪಾನಿನ ಸಂವಿಧಾನವು ಅವಕಾಶವನ್ನು ಕೊಡುವುದಿಲ್ಲ.

ಇಲ್ಲೇ ಹೀಗಿರುವಾಗ ವಾಜಪೇಯಿ ಸರ್ಕಾರ ಬುಷ್ ಯೋಜನೆಯನ್ನು ಸಂಪೂರ್ಣವಾಗಿ ಅನುಮೋದಿಸಿದೆ. ಬಿಜೆಪಿ ಸರ್ಕಾರದ ಇಂತಹ ಕ್ರಮಕ್ಕೆ ಕಾರಣವಾಗಿ, ಅಮೇರಿಕವು ಏಕಪಕ್ಷೀಯವಾಗಿ ಅಣ್ವಸ್ತ್ರಗಳಲ್ಲಿ ಕಡಿತ ಮಾಡುವ ನಿರ್ಧಾರವನ್ನು ತೋರಿಸಲಾಗುತ್ತಿದೆ. ಆದರೆ ಬಹಳ ಮುಖ್ಯ ಸಂಗತಿಯಾದ ಎನ್.ಎಂ.ಡಿ ವ್ಯವಸ್ಥೆಯ ಬಗ್ಗೆ ಚಕಾರ ಎತ್ತುತ್ತಿಲ್ಲ.

ಆದರೆ ಚೀನಾ, "ಕ್ಷಿಪಣಿ ರಕ್ಷಣಾ ಯೋಜನೆಯು ಅಂತರರಾಷ್ಟ್ರೀಯ ಭದ್ರತಾ ಶಕ್ತಿಗಳ ಸಮತೋಲನ ಹಾಳುಗೆಡವಲಿದೆ ಹಾಗೂ ಹೊಸ ಶಸ್ತ್ರಾಸ್ತ್ರ ಪೈಪೋಟಿಗೆ ಕಾರಣವಾಗಲಿದೆ". ಎಂದು ಹೇಳಿದೆ. 1972 ಬ್ಯಾಲೆಸ್ಟಿಕ್ ಅಸ್ತ್ರಗಳ ವಿರೋಧಿ (ಎಬಿಎಂ) ಒಪ್ಪಂದ ರದ್ದತಿಯ ವಿರುದ್ಧ ರಷ್ಯಾ ಕಠಿಣವಾದ ನಿಲುವನ್ನು ತೆಗೆದುಕೊಂಡಿದೆ.

ಚೀನಾದ ಕ್ಷಿಪಣಿ ವ್ಯವಸ್ಥೆಯನ್ನು ಮೂಲೆಗುಂಪು ಮಾಡುವ ಅಮೇರಿಕಾದ ಉದ್ದೇಶದಿಂದ ಚೀನಾ

ಪುಟ 11ಕ್ಕೆ

ರಕ್ಷಣಾ ಸಾಮಗ್ರಿಗಳ ಉತ್ಪಾದನೆ ಖಾಸಗೀಕರಣ

ರಾಷ್ಟ್ರೀಯ ಭದ್ರತೆಯೊಂದಿಗೆ ರಾಜಿ

ರಕ್ಷಣಾ ಸಾಮಗ್ರಿಗಳ ಉತ್ಪಾದನೆಯನ್ನು ಖಾಸಗಿ ಕ್ಷೇತ್ರಕ್ಕೆ ಒಪ್ಪಿಸಲು ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ತೆಗೆದುಕೊಂಡಿರುವ ನಿರ್ಧಾರವು ಗಂಭೀರ ಪರಿಣಾಮಗಳನ್ನುಂಟು ಮಾಡಲಿದೆ.

ಸಚಿವ ಸಂಪುಟ ತೆಗೆದುಕೊಂಡಿರುವ ನಿರ್ಧಾರದ ಪ್ರಕಾರ ಇದೂವರೆಗೆ ಸರ್ಕಾರಿ ಸ್ವಾಮ್ಯದಲ್ಲಿದ್ದ ರಕ್ಷಣಾ ಸಾಮಗ್ರಿಗಳ ಉತ್ಪಾದನೆಯಲ್ಲಿ ಭಾರತೀಯ ವಸ್ತು ವಿದೇಶಿ ಕಂಪನಿಗಳ 26 ರಷ್ಟು ಶೇರುಗಳನ್ನು ಹೊಂದಿ ಯುದ್ಧ ಸಾಮಗ್ರಿಗಳ ತಯಾರಿಕೆಯಲ್ಲಿ ತೊಡಗಲು ಅವಕಾಶ ನೀಡಿದೆ.

ಕೇಂದ್ರ ಸರ್ಕಾರದ ಇಂತಹ ನಿರ್ಧಾರದಿಂದಾಗಿ ಯುದ್ಧ ಸಾಮಗ್ರಿಗಳ ಉತ್ಪಾದನೆಯಲ್ಲಿ ವಿದೇಶಿ ಕಂಪನಿಗಳು ಭಾಗವಹಿಸಲು ಅವಕಾಶ ನೀಡುವುದರ ಮೂಲಕ ಸರ್ಕಾರವು 'ರಾಷ್ಟ್ರೀಯ ಭದ್ರತೆ'ಯೊಂದಿಗೆ ರಾಜಿ ಮಾಡಿಕೊಂಡಿದೆ. ಇದು ಅಪಾಯಕಾರಿ.

ಈಗಾಗಲೇ ವಿದೇಶಿ ಮೂಲದ ದಾಬೋಲ್ ಯೋಜನೆಯ ಎನ್ರಾನ್ ಫಲವನ್ನು ಗಮನಿಸಿಯೂ, ವಾಜಪೇಯಿ ನೇತೃತ್ವದ ಸರ್ಕಾರವು ಔಷಧ, ವಿಮಾನ ನಿಲ್ದಾಣ ಮೊದಲಾದ ಕ್ಷೇತ್ರಗಳಲ್ಲಿ ಶೇ 100 ರಷ್ಟು ನೇರ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶವನ್ನು ಘೋಷಿಸಿದೆ.

ದೇಶದ ರಕ್ಷಣಾ ಸಾಮಗ್ರಿಗಳ ಉತ್ಪಾದನಾ ಕ್ಷೇತ್ರಕ್ಕೆ ಸಂಬಂಧಿಸಿ ಸರ್ಕಾರ ತನ್ನ ನಿರ್ಧಾರವನ್ನು ರದ್ದು ಮಾಡಿ, ಸಂಸತ್ತಿನಲ್ಲಿ ಈ ಬಗ್ಗೆ ಚರ್ಚಿಸಿದ ನಂತರವೇ ನಿರ್ಧಾರ ಕೈಗೊಳ್ಳಬೇಕು.

ವಾಜಪೇಯಿ ಸರ್ಕಾರದ ಕಪಟತನ ಕುಖ್ಯಾತ ಹಿಂದೂಜಾರೊಂದಿಗೆ ಅಕ್ರಮ ಸಂಪರ್ಕ

ಭಾರತೀಯ ಜನತಾಪಕ್ಷದ(ಬಿಜೆಪಿ) ವತಿಯಿಂದ ಪ್ರತಿ ಚುನಾವಣಾ ಘೋಷಣೆಯಲ್ಲೂ ಭೋಫೋರ್ಸ್ ಹಗರಣದ ಬಗ್ಗೆ ವಿಚಾರಣೆಯನ್ನು ತೀವ್ರಗೊಳಿಸುವುದಾಗಿ ಭರವಸೆ. ಆದರೆ ಭೋಫೋರ್ಸ್ ಫಿರಂಗಿ ಖರೀದಿಯಲ್ಲಿ ಕಮಿಷನ್ ಪಡೆದಿರುವವರೆನ್ನಲಾದ ಹಿಂದೂಜಾ ಸಹೋದರರೊಂದಿಗೆ ಬಿಜೆಪಿ ಅಕ್ರಮ ಸಂಬಂಧ ಹೊಂದಿದೆ. 'ಮುಖವಾಡ' ವಾಜಪೇಯಿಯವರ ದ್ವಂದ್ವ ನೀತಿಗಳಿಗೆ ಇದು ಇನ್ನೊಂದು ಉದಾಹರಣೆ.

1998 ರ ಪೋಕ್ರಾನ್ ಆಸ್ಫೋಟದ ನಂತರ ಜಗತ್ತಿನ ವಿವಿಧ ದೇಶಗಳು ತೀವ್ರ ಆತಂಕ ಮತ್ತು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಬ್ರಿಟಿಶ್ ಸರಕಾರದ 'ಮನ ಒಲಿಸಲು' ಪ್ರಧಾನ ಮಂತ್ರಿ ಅಟಲ ಬಿಹಾರಿ ವಾಜಪೇಯಿ ಅವರ ಪ್ರಧಾನ ಕಾರ್ಯದರ್ಶಿ ಟೋನಿ ಬ್ಲೇರ್ ಅವರನ್ನು ಭೇಟಿ ಮಾಡಿದ್ದರು. ಆ ಭೇಟಿಯನ್ನು ಏರ್ಪಾಡು ಮಾಡಿದ್ದು ಭೋಫೋರ್ಸ್ ಹಗರಣದ ಕುಖ್ಯಾತಿಯ ಹಿಂದೂಜಾ ಸಹೋದರರು. ಅಷ್ಟು ಮಾತ್ರವಲ್ಲ ಉನ್ನತ ಮಟ್ಟದ ಮಾತುಕತೆ ನಡೆಯುವ ಸಂದರ್ಭದಲ್ಲಿ ಹಿಂದುಜಾ ಸಹೋದರರೂ ಕೂಡಾ ಹಾಜರಿದ್ದರು ಎಂದು ವರದಿಗಳು ತಿಳಿಸಿವೆ. ಇದನ್ನು ಬ್ರಿಟಿಶ್ ಸರಕಾರ ಹಾಗೂ ಕೇಂದ್ರ ಸರ್ಕಾರ ಸಹ ಒಪ್ಪಿಕೊಂಡಿವೆ.

ತನ್ನ ಪ್ರಧಾನ ಕಾರ್ಯದರ್ಶಿ ನಡೆಸಿದ ಮಾತುಕತೆಯು ವಾಜಪೇಯಿಯವರ ಗಮನಕ್ಕೆ ಬರದೆ ನಡೆಯಿತು ಎಂದರೆ ನಂಬಲು ಸಾಧ್ಯವೇ? ಹಾಗಾದರೆ ಭೋಫೋರ್ಸ್ ಫಿರಂಗಿ ವ್ಯವಹಾರದಲ್ಲಿ ಲಂಚ ಪಡೆದವರನ್ನು ಶಿಕ್ಷಿಸುತ್ತೇವೆ ಎಂದು ಬಿಜೆಪಿ ನೇತೃತ್ವದ ಸರಕಾರ ಹೇಳಿದರೆ ಅದನ್ನು ನಂಬಲು ಸಾಧ್ಯವೇ?

ವಾಜಪೇಯಿ ಸರಕಾರ ದೇಶದ ಭದ್ರತೆ ಮತ್ತು ಅಂತರ್ರಾಷ್ಟ್ರೀಯ ಸಂಪ್ರದಾಯಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿದೆ. ಯಾವುದೇ ರಾಜಕೀಯ, ಕಾರ್ಯಾಂಗದ ಅಧಿಕಾರ ಹೊಂದದೆ ಇರುವ ಭಾರತದ ಪರ ಮಾತುಕತೆಯಲ್ಲಿ ಭಾಗವಹಿಸುವುದಾದರೂ ಹೇಗೆ? ಅದರಲ್ಲೂ ಭ್ರಷ್ಟಾಚಾರದ ಆರೋಪವನ್ನು ಎದುರಿಸುತ್ತಿರುವ ಹಿಂದೂಜಾಗಳು ಫಿರಂಗಿ ದಲ್ಲಾಳಿಗಳು!

ಹಿಂದೂಜಾ ಯಾರು? ಭಾರತೀಯ ಮೂಲದ ಹಿಂದೂಜಾ ಸಹೋದರರು ಲಂಡನ್‌ನಲ್ಲಿ ರಕ್ಷಣಾ ಉದ್ಯಮ ನಡೆಸುತ್ತಿದ್ದು ಅಂತರ್ರಾಷ್ಟ್ರೀಯ ಮಟ್ಟದ ಪ್ರಭಾವಿ ವ್ಯಕ್ತಿಗಳು. ಇತ್ತೀಚೆಗೆ ಇವರೊಂದಿಗೆ ಸಂಪರ್ಕ ಹೊಂದಿದ್ದ ಬ್ರಿಟಿಶ್ ಮಂತ್ರಿಯೊಬ್ಬ (ಪೀಟರ್ ಮ್ಯಾಂಡಲ್‌ಸನ್) ತನ್ನ ಸ್ಥಾನವನ್ನೇ ಕಳೆದುಕೊಳ್ಳಬೇಕಾಯಿತು ಎಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು.

ಹಿಂದೂಜಾ ಸಹೋದರರು ಬ್ರಿಟಿಶ್ ಪ್ರಧಾನ ಮಂತ್ರಿಯವರ ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಪತ್ರದಲ್ಲಿ, ಬ್ರಜೇಶ್ ಮಿಶ್ರಾರವರಿಗೆ ಮಾತುಕತೆ ನಡೆಸಲು ಕಾಲಾವಕಾಶ ಕೇಳಿದುದು ಮಾತ್ರವಲ್ಲ ವಾಜಪೇಯಿ ಸರ್ಕಾರದ ವಿದೇಶಿ ನೀತಿಯನ್ನು ಬಹಿರಂಗಗೊಳಿಸಿದ್ದಾರೆ. ಪೋಕ್ರಾನ್ ಅಣು ಸ್ಫೋಟದ ಬಗ್ಗೆ ಅಮೆರಿಕಾದ ಕಾರ್ಯದರ್ಶಿ ಮೆಡಲಿನ್ ಆಲ್‌ಬ್ರೈಟ್ ತಳೆದಿರುವ ನೀತಿಯನ್ನು 'ಶಾಂತ' ಗೊಳಿಸಲು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ರಾಬಿನ್ ಕುಕ್ ಅವರಿಗೆ ಸಲಹೆ ನೀಡಬೇಕೆಂದು ಪ್ರತಿಪಾದಿಸಿದ್ದಾನೆ ಹಿಂದೂಜಾ ಭೂಪ.

ರಕ್ಷಣಾ ವ್ಯವಹಾರವನ್ನು ಖಾಸಗೀಕರಣ ಗೊಳಿಸುತ್ತಿರುವ ಬಿಜೆಪಿ ಸರ್ಕಾರ, ವಿದೇಶಾಂಗ ನೀತಿಯನ್ನೇ ಖಾಸಗೀಕರಣ ಗೊಳಿಸಲು 1998 ರಲ್ಲೇ ಹೊಂಚು ಹಾಕಿದೆ!

ಇಂತಹ ಭ್ರಷ್ಟ, ಅಯೋಗ್ಯ ಸರ್ಕಾರ ಈ ದೇಶದ ಆಡಳಿತ ಚುಕ್ಕಾಣಿಯನ್ನು ಹಿಡಿದು ಮುಂದುವರಿಸಬೇಕೆ? ಈ ಸರಕಾರವನ್ನು ಎಷ್ಟು ಬೇಗ ಅಧಿಕಾರದಿಂದ, ಇಳಿಸಲು ಸಾಧ್ಯವಾಗುತ್ತದೋ ಅಷ್ಟು ಬೇಗ ದೇಶದ ಭದ್ರತೆಗೆ ಅನುಕೂಲವಾಗುತ್ತದೆ. ಇದನ್ನು ಸಾಧಿಸಲು ಜನಸಾಮಾನ್ಯರ ತೀವ್ರ ಹೋರಾಟ, ಪ್ರತಿಭಟನೆ ಅಗತ್ಯ.

ಕಳೆದ ವಾರದಲ್ಲಿ ನಡೆದ ಹಲವು ಘಟನೆಗಳಿಂದ ಅಮೆರಿಕಾದ, ಅದರ ಪರಿಣಾಮವಾಗಿ ಭಾರತದಲ್ಲೂ ಮಾಹಿತಿ ತಂತ್ರಜ್ಞಾನ ಕೈಗಾರಿಕೆ ಬೆಳವಣಿಗೆ ಮಂದವಾಗುತ್ತಿರುವ ಲಕ್ಷಣಗಳು ಕಾಣುತ್ತಿವೆ. ಮಾತ್ರವಲ್ಲ ಬಿಕ್ಕಟ್ಟಿನತ್ತ ಹೋಗುತ್ತಿರುವಂತೆ ಕಾಣುತ್ತಿದೆ. 40 ಸಾವಿರ ಮಾಹಿತಿ ತಂತ್ರಜ್ಞಾನ ಇಂಜಿನಿಯರುಗಳು ಅಮೆರಿಕದಲ್ಲಿ ಕೆಲಸ ಕಳೆದುಕೊಂಡು ಸ್ವದೇಶಕ್ಕೆ ವಾಪಸಾಗುತ್ತಿದ್ದಾರೆ. ಅಮೇರಿಕದ ದೊಡ್ಡ ಕೈಗಾರಿಕೆಗಳು ತಮ್ಮ ಲಾಭ, ಬೆಳವಣಿಗೆ ಕಡಿಮೆಯಾಗುವ 'ಎಚ್ಚರಿಕೆ' ನೀಡಿದ್ದಾರೆ. ಇನ್‌ಫೋಸಿಸ್ (ನಮ್ಮ ನಂ. 1 ಮಾಹಿತಿ ತಂತ್ರಜ್ಞಾನ ಕಂಪನಿ) ತನ್ನ ಬೆಳವಣಿಗೆ ದರ ಮೂರನೇ ಎರಡು ಭಾಗದಷ್ಟು ಕಡಿಮೆಯಾಗುತ್ತದೆ ಎನ್ನುತ್ತಿದ್ದಂತೆ ಎಲ್ಲಾ ಮಾಹಿತಿ-ತಂತ್ರಜ್ಞಾನ ಕಂಪನಿಗಳ ಶೇರುಗಳು ಕುಸಿದವು. ಕಳೆದ ಹಲವು ವಾರಗಳಿಂದ ಅವು ಕೆಳಗೆ ಬರುತ್ತಲೇ ಇವೆ.

ಕಳೆದ 6-7 ವರ್ಷಗಳಿಂದ 'ದೀರ್ಘಸುಗ್ಗಿ' ಅನುಭವಿಸಿದ ನಂತರ ಮಾಹಿತಿ ತಂತ್ರಜ್ಞಾನ ಕೈಗಾರಿಕೆಯ ಯುಗ ಮುಗಿಯಿತೇ? ಈಗ ಕಂಡು ಬರುತ್ತಿರುವ ಬಿಕ್ಕಟ್ಟಿನ ಲಕ್ಷಣವೂ ತಾತ್ಕಾಲಿಕವೇ? ಇದಕ್ಕೆ ಕಾರಣಗಳೇನು? ಇದರ ಪರಿಣಾಮವೇನು? ಇದರ ಅರ್ಥ ಏನು? ಈ ಪ್ರಶ್ನೆಗಳಿಗೆ ಉತ್ತರಕ್ಕೆ ಮುಂದೆ ಓದಿ

———— ಶರತ್‌ಚಂದ್ರ

ಪ್ರಮಾಣ ಭಾರಿ ವೇಗದಲ್ಲಿ ಹೆಚ್ಚಬಹುದು. ಈ ಸುಗ್ಗಿಯ ಅವಧಿಯಲ್ಲಿ ಇದ್ದ ಶೇಕಡಾ 3.9 ನಿರುದ್ಯೋಗ, ಮೂರು ದಶಕಗಳಲ್ಲೇ ಅತ್ಯಂತ ಕನಿಷ್ಠವಾದದ್ದಾಗಿತ್ತು. ಈಗಾಗಲೇ ಅದು ಶೇಕಡಾ 4.2 ಕ್ಕೇರಿದೆ. ಮೊದಲ ಮೂರು ತಿಂಗಳಲ್ಲೇ 4 ಲಕ್ಷ ಉದ್ಯೋಗಗಳು ಮಾಯವಾಗಿವೆ.

ಜಾಗತಿಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ(ಮುಖ್ಯವಾಗಿ ಅಮೆರಿಕದ ಆರ್ಥಿಕ) ಎದುರಿಸುತ್ತಿರುವ ಮಂದಗತಿ ಭಾರತಕ್ಕೆ ನೇರವಾಗಿ ತಟ್ಟಿದೆ. ಅದರಲ್ಲೂ ನಮ್ಮ ಐಟಿ ಉದ್ಯಮ. ಅಮೆರಿಕದ ಐಟಿ ಉದ್ಯಮದ ಬಾಲಂಗೋಚಿಯಾಗಿ ಬೆಳೆದದ್ದರಿಂದ ಇದು ಸ್ವಾಭಾವಿಕವೇ. ನಮ್ಮ ಐಟಿ ಉದ್ಯಮದ ಹಲವು ತೀವ್ರ ನ್ಯೂನ್ಯತೆಗಳು ಇದಕ್ಕೆ ಕಾರಣ. ನಮ್ಮ ಐಟಿ ಉದ್ಯಮದ 'ಸುಗ್ಗಿ' ಕೆಲವು

ಮಾಹಿತಿ ತಂತ್ರಜ್ಞಾನದ 'ಕನಸಿನ

ಮಾಹಿತಿ ತಂತ್ರಜ್ಞಾನದ 'ಕನಸಿನ ಯುಗ' ಮುಗಿಯಿತೆ? ಕಳೆದ ಕೆಲವು ವಾರಗಳ ಘಟನೆಗಳನ್ನು ನೋಡಿದರೆ ಹಲವರು ಕನಸಂತೂ ಒಡೆದಿದೆ ಎಂಬುದು ಸ್ಪಷ್ಟವಾಗುತ್ತಿದೆ. ಮಾಹಿತಿ ತಂತ್ರಜ್ಞಾನದ(ಐಟಿ) 'ದೀರ್ಘಸುಗ್ಗಿ' ಯ ಬೆಳೆ ಕೊಯ್ಯಲು ಹೋದ 40 ಸಾವಿರ ಇಂಜಿನಿಯರುಗಳು ಉದ್ಯೋಗ ಕಳೆದುಕೊಂಡು ಸ್ವದೇಶಕ್ಕೆ ವಾಪಾಸು ಬರುತ್ತಿದ್ದಾರೆ. ಜುಲೈಯೊಳಗೆ ಅಮೆರಿಕದಲ್ಲಿ 9 ಲಕ್ಷದಷ್ಟು ಹೊಸ ಉದ್ಯೋಗಿಗಳು ಈ ಕ್ಷೇತ್ರದಲ್ಲಿ ಬೇಕಾಗಿದ್ದರು. ಆದರೆ ಇದು ಕಳೆದ ವರ್ಷದ ಉದ್ಯೋಗಾವಕಾಶಕ್ಕಿಂತ ಶೇ 44 ರಷ್ಟು ಕಮ್ಮಿಯೆಂಬುದೇ ಸಮಸ್ಯೆಯ ತೀವ್ರತೆ ತೋರಿಸುತ್ತದೆ. ಇದರಲ್ಲಿ ಸುಮಾರು 1 ಲಕ್ಷದಷ್ಟು ವಲಸೆ ಹೋದ ವರಿಂದ ತುಂಬಲ್ಪಡುತ್ತಿತ್ತು. ಇದರಲ್ಲಿ ಶೇಕಡಾ 40 ಭಾರತೀಯರು. ಹಲವರು ಉದ್ಯೋಗ ಕಳೆದುಕೊಂಡಿದ್ದಲ್ಲದೆ, 65 ಸಾವಿರ ಇಂಜಿನಿಯರುಗಳು 'ಬೆಂಚಿ'ನಲ್ಲಿದ್ದಾರೆ. ಈ ಕೈಗಾರಿಕೆಯಲ್ಲಿ 'ಬೆಂಚಿ'ನಲ್ಲಿರುವುದು ಎಂದರೆ ಕೆಲಸ ಇಲ್ಲದೆ ಇರುವುದು.

ಉದ್ಯೋಗಗಳಲ್ಲಿ ಭಾರಿ ಕಡಿತ

ದಿನಭತ್ಯೆಗೆ ಕಾದವರು ಅಮೆರಿಕ್ಕೆ ಕೆಲಸ ಕೊಡಿಸುತ್ತೇವೆ ಎಂದು ಭರವಸೆ ಕೊಟ್ಟು ತಂದ ದಲ್ಲಾಳಿಗಳು ಅವರಿಗೆ 30 ಡಾಲರಿನ 'ದಿನಭತ್ಯೆ' ಕೊಟ್ಟು ಕೂರಿಸಿರುತ್ತಾರೆ. ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ಸುಮಾರು ಮೊದಲ ಡಾಟ್ ಕಾಮ್ ಕಂಪನಿಗಳು ಕಳೆದ ಆರು ತಿಂಗಳಲ್ಲೇ ಮುಚ್ಚಿವೆ. ಲೂಸೆಂಟ್, ಇಂಟೆಲ್, ಮೊಟರೊಲೊ, ಸಿಸ್ಕೋ, ಆರೇಕಲ್, ನಾಟೆಕಲ್ ನಂತರದ ದೈತ್ಯ ಐಟಿ ಕಂಪನಿಗಳು ಕಳೆದ ಕೆಲವು ವಾರಗಳಲ್ಲಿ ತಮ್ಮ ಲಾಭ, ಬೆಳವಣಿಗೆಯ ದರ ಎರಡೂ ಕಡಿಮೆಯಾಗಿರುವುದು ಎಂಬ 'ಎಚ್ಚರಿಕೆ' ನೀಡಿದ್ದಾರೆ. ಕಳೆದ ಒಂದು ವರ್ಷದಿಂದ ಹಲವಾರು ಐಟಿ ಕಂಪನಿಗಳ ಶೇರು ಬೆಲೆ ಕಡಿಮೆಯಾಗುತ್ತಲೇ ಇದೆ. ಈ ವರ್ಷದ ಮೊದಲ ಎರಡು ತಿಂಗಳಲ್ಲಿ ಒಂದು ಲಕ್ಷ ಐಟಿ ಉದ್ಯೋಗಗಳಲ್ಲಿ ಕಡಿತವಾಗಿದೆ.

ಅಮೆರಿಕಾದಲ್ಲಿ ನೆಗಡಿ ಭಾರತದಲ್ಲಿ ಸೀನು

ಎಲ್ಲರಿಗೂ ಗೊತ್ತಿರುವಂತೆ ಭಾರತದ ಐಟಿ ಕೈಗಾರಿಕೆ ಅಮೇರಿಕದ ಐಟಿ ಮೇಲೆ ಹೆಚ್ಚು ಕಡಿಮೆ ಪೂರ್ಣವಾಗಿ ಅವಲಂಬಿಸಿದೆ. ಮೊದಮೊದಲು ಅಮೆರಿಕದ ಬಿಕ್ಕಟ್ಟು ನಮ್ಮ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ನಮ್ಮ ಐಟಿ ಕೈಗಾರಿಕೆ ದಿಗ್ಗಜಗಳು ಹೇಳಿದರೂ, ಕಳೆದ ಒಂದು ವಾರ ಒಬ್ಬೊಬ್ಬರಾಗಿ ಲಾಭ, ಬೆಳವಣಿಗೆ ದರ ಕಡಿಮೆಯಾಗುತ್ತದೆ ಎಂದು 'ಎಚ್ಚರಿಕ' ನೀಡಿದ್ದಾರೆ - ಶೇರು ಹೊಂದಿರುವವರಿಗೆ. ಕಳೆದ ವರ್ಷ ಇನ್‌ಫೋಸಿಸ್ ಪ್ರತಿ ಮೂರು ತಿಂಗಳಿಗೆ ಶೇಕಡಾ 90 ರಷ್ಟು ಬೆಳವಣಿಗೆ ತೋರಿಸುತ್ತಿತ್ತು. ಮುಂದಿನ ವರ್ಷದ ಬೆಳವಣಿಗೆ ದರ ಶೇಕಡಾ 30 ರಷ್ಟು ಮಾತ್ರ ಇರುತ್ತದೆ ಎಂದು ನಾರಾಯಣ ಮೂರ್ತಿಗಳು ಹೇಳುತ್ತಿದ್ದಂತೆ ಇನ್‌ಫೋಸಿಸ್ ಮಾತ್ರವಲ್ಲ, ಇಡೀ ಐಟಿ ಕಂಪನಿಗಳ ಶೇರು ಬೆಲೆ ಕುಸಿದವು. ಮಾರ್ಚ್ ಒಂದೇ ತಿಂಗಳಲ್ಲಿ 'ಸೆನ್ಸೆಕ್' ಎಂದು ಕರೆಯಲಾಗುವ ಶೇರು ಸೂಚ್ಯಂಕ 3,900 ರಿಂದ 3100 ಕ್ಕೆ ಕುಸಿಯಿತು. ಕಳೆದ ಒಂದು ವರ್ಷದಲ್ಲಿ ಸೆನ್ಸೆಕ್ಸ್ ಅರ್ಧದಷ್ಟು ಕುಸಿದಿದೆ(ಫೆಬ್ರವರಿ 2000 ರಲ್ಲಿ ಅತ್ಯಂತ ಹೆಚ್ಚಿನ ರೂ. 6150 ಇದ್ದದ್ದು ಈಗ ರೂ. 3100 ಆಗಿದೆ). ಈ ಬಿಕ್ಕಟ್ಟಿನ ಫಲವಾಗಿ ರೂಪಾಯಿ ಬೆಲೆಯೂ ಕುಸಿದಿದೆ- ಒಂದು ಡಾಲರಿಗೆ 47 ರೂ. ಪಾತಾಳಕ್ಕೆ.

ಇವೆಲ್ಲದರ ಫಲವಾಗಿ **ಬೆಂಗಳೂರು, ಹೈದರಾಬಾದಿನಂತಹ ಐಟಿ ಕೇಂದ್ರಗಳಲ್ಲೂ ನಡುಕ ಆರಂಭವಾಗಿದೆ. ಇಲ್ಲೂ ಲೇ-ಆಫ್‌ನ ವದಂತಿಗಳು ಆರಂಭವಾಗಿವೆ. ಲೂಸೆಂಟ್, ಸಿಸ್ಕೋ ಮುಂತಾದ ದೊಡ್ಡ ಕಂಪನಿಗಳು ಉದ್ಯೋಗ ಕಡಿತ ಮಾಡುತ್ತವೆ ಎಂದು ವದಂತಿ ಹರಡಿದೆ. ವಿಪ್ರೊ, ಟಿಸಿಎಸ್ ಮುಂತಾದವು ಹಿಂಬಾಲಿಸಬಹುದು. ಇನ್‌ಫೋಸಿಸ್ ನಾರಾಯಣ ಮೂರ್ತಿ ಲೇ-ಆಫ್ ಇಲ್ಲ ಎಂದು ಘೋಷಿಸಿದ್ದರೂ, ಆ** ಕಂಪನಿಯ 7 ಸಾವಿರ ಉದ್ಯೋಗಿಗಳಲ್ಲಿ 1 ಸಾವಿರ ಉದ್ಯೋಗಿಗಳು 'ಬೆಂಚಿ' ನಲ್ಲಿದ್ದಾರೆ (ಅಂದರೆ ಕೆಲಸ ಇಲ್ಲ) ಎಂದು ಒಪ್ಪಿಕೊಂಡು ಎಲ್ಲರನ್ನು ಬೆಚ್ಚಿ ಬೀಳಿಸಿದ್ದಾರೆ. ಹಲವು ಸಣ್ಣ ಕಂಪನಿಗಳು ಈಗಾಗಲೇ ಮುಚ್ಚಿವೆ.



ಆಕಾಶಕ್ಕೆ ಏಣಿ ಹಾಕಿಸಿದ ಐ.ಟಿ. ಉದ್ಯಮ

'ದೀರ್ಘ ಸುಗ್ಗಿ'ಯ ಕೊನೆ?

ಇವೆಲ್ಲದರ ಅರ್ಥ ಏನು? ಮಾಹಿತಿ ತಂತ್ರಜ್ಞಾನ ಕೈಗಾರಿಕೆಯ 'ಕನಸಿನ ಯುಗ' ಮುಗಿಯಿತೆಂದೇ? ಇದರ ಪರಿಣಾಮವೇನು? ಐಟಿಯು 'ದೀರ್ಘ ಸುಗ್ಗಿ' ಮುಂದುವರೆಸಲು ಸಾಧ್ಯವಿಲ್ಲವೆ? ಇದರಿಂದ ನಾವು ಏನು ಪಾಠ ಕಲಿಯಬಹುದು? ಎಂಬ ಪ್ರಶ್ನೆಗಳ ಸುರಿಮಳೆ ಯಾಗುತ್ತಿದೆ ಎಲ್ಲೆಡೆ ಯಲ್ಲೂ.

ಇವೆಲ್ಲ ಬೆಳವಣಿಗೆಗಳ ಮುಖ್ಯ ಅರ್ಥ ಎಂದರೆ ಜಾಗತಿಕ ಬಂಡವಾಳ ಶಾಹಿ ವ್ಯವಸ್ಥೆಯು ತನ್ನ ಬಿಕ್ಕಟ್ಟಿನ ಇನ್ನೊಂದು ಅವಧಿ ಮುಟ್ಟಿದೆ ಅಂತ. ಸಾಮಾನ್ಯವಾಗಿ ಬಂಡ ವಾಳಶಾಹಿ ವ್ಯವಸ್ಥೆಯು ಆರ್ಥಿಕ ಸುಗ್ಗಿಯ ಒಂದು ಅವಧಿ ನಂತರ, ಬೆಳವಣಿಗೆ ಮಂದಗೊಳ್ಳುತ್ತಾ ಕುಂಠಿತವಾಗುತ್ತಾ ಪಾತಾಳಕ್ಕೆ ಹೋಗುತ್ತದೆ. ಈ ಅವಧಿಯ ನಂತರ ಇಂತಹ ಇನ್ನೊಂದು ಚಕ್ರ ಆರಂಭವಾಗುತ್ತದೆ. ಈಗ ಸುಗ್ಗಿಯ ಅವಧಿ ಮುಗಿದು ಬೆಳವಣಿಗೆ ಕುಂಠಿತಗೊಳ್ಳುವ ಅವಧಿ ಆರಂಭವಾಗಿದೆ. ಇದು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಹೊಸದೇನಲ್ಲ. 1-2 ವರ್ಷದ ಸುಗ್ಗಿ, 1-2 ವರ್ಷದ ಕುರಿತಂತೆ ಆರ್ಥಿಕ ಚಕ್ರ ಸಾಮಾನ್ಯ. ಆದರೆ ಸುಮಾರು 6-7 ವರ್ಷಗಳ(1993-94) ಅಮೆರಿಕದ ಆರ್ಥಿಕ 'ದೀರ್ಘ ಸುಗ್ಗಿ' ಅನುಭವಿಸಿತ್ತು. ಈಗ ಆರಂಭವಾಗಿರುವ ಕುಂಠಿತತೆಯೂ ಇದೇ ರೀತಿ ದೀರ್ಘವಾಗಿರುತ್ತದೆಯೇ? ಸುಗ್ಗಿ ಆರ್ಥಿಕವನ್ನು ಗಗನಕ್ಕೆ ತೆಗೆದುಕೊಂಡು ಹೋದಂತೆ, ಕುಂಠಿತತೆ ಪಾತಾಳಕ್ಕೆ ಇಳಿಸುತ್ತದೆಯೇ? ಎಂಬುದು ಎಲ್ಲರನ್ನು ಕಾಡುತ್ತಿರುವ ಪ್ರಶ್ನೆ.

ಇನ್ನೊಂದು ಈಗಿನ ಬಿಕ್ಕಟ್ಟಿನ ಅಂಶವೆಂದರೆ ಈವರೆಗೆ ಇದ್ದ 'ದೀರ್ಘ ಸುಗ್ಗಿ'ಯ ಇಂಜಿನ್ ಮುಖ್ಯವಾಗಿ ಐಟಿ ಉದ್ಯಮವಾಗಿತ್ತು. ಉಳಿದ ಆರ್ಥಿಕದಲ್ಲಿ ಬೆಳವಣಿಗೆ ಸಾಮಾನ್ಯ ದರದಲ್ಲಿತ್ತು. ಅಲ್ಲದೆ ಈ 'ಸುಗ್ಗಿ' ಸಹ ಒಟ್ಟಾರೆ 'ಉದ್ಯೋಗರಹಿತ ಬೆಳವಣಿಗೆ' ಯಾಗಿತ್ತು. ಈಗ ನಿರುದ್ಯೋಗದ

ದುರ್ಬಲ ಅಂಶಗಳ ಮೇಲೆ ಅವಲಂಬಿಸಿದ್ದು.

ನಮ್ಮ ಐಟಿ ಉದ್ಯಮದ ದುರ್ಬಲತೆಗೆ 88 ರ ಭೂತಗನ್ನಡಿ

ಮೊದಲನೆಯದಾಗಿ ನಮ್ಮ ಐಟಿ ಉದ್ಯಮದ ದೊಡ್ಡ ಭಾಗ, 'ಮಾನವ ರಫ್ತಿನ' ಮೇಲೆ ಆಧಾರಿತವಾಗಿತ್ತು. ಕಳೆದ 6-7 ವರ್ಷಗಳಲ್ಲಿ ಪ್ರತಿವರ್ಷ 40-60 ಸಾವಿರ ಐಟಿ ಇಂಜಿನಿಯರುಗಳು 'ರಫ್ತಾ'ಗುತ್ತಿದ್ದರು. ಈ ಚಟುವಟಿಕೆಯಿಂದ ಹಲವು ದಲ್ಲಾಳಿಗಳು, ಕಂಪನಿಗಳು 'ಸುಗ್ಗಿಯ ಬೆಳೆ' ಕೊಯ್ದರೂ ನಮ್ಮ ಐಟಿ ಉದ್ಯಮದ 'ಉತ್ಪನ್ನ'ದಲ್ಲಿ ಅದು ಕಾಣಿಸಿಕೊಂಡರೂ ನಿಜವಾಗಿ ಐಟಿ ಉದ್ಯಮಕ್ಕಾಗಲಿ, ಆರ್ಥಿಕಕ್ಕಾಗಲಿ ಯಾವುದೇ ದೂರಗಾಮಿ ಕಾಣಿಕೆ ನೀಡಲಿಲ್ಲ. ಬದಲಾಗಿ ಅಮೆರಿಕ ಐಟಿ ಉದ್ಯಮದ ಏರುಪೇರು ನೇರವಾಗಿ ನಮಗೆ ಪರಿಣಾಮ ಬೀರುವಂತೆ ಮಾಡಿದೆ. ಮಾತ್ರವಲ್ಲ ಅಮೆರಿಕದ ಐಟಿ ಉದ್ಯಮ ತನ್ನ ಬಿಕ್ಕಟ್ಟನ್ನು ನಮ್ಮ ಮೇಲೆ ವರ್ಗಾಯಿಸುವುದನ್ನು ಸಾಧ್ಯ ಮಾಡಿದೆ.

ಇಂಡಿಯಾದಲ್ಲೇ ಇದ್ದ ಐಟಿ ಕಂಪನಿಗಳು ಸಹ ಬಹುಭಾಗ ಅಮೆರಿಕದ ಕಂಪನಿಗಳಿಗೆ 'ಸೇವೆ' ಒದಗಿಸುವುದರಲ್ಲೇ ನಿರತವಾಗಿದ್ದವು. ಪುನಃ ನಮ್ಮ ಕಂಪನಿಗಳು 'ತಮ್ಮದೇ' ಆದ 'ಉತ್ಪನ್ನ'ಗಳನ್ನು ಹೊಂದಿದ್ದರೆ ಅವನ್ನು ಬೇರೆಡೆ ಮಾರುವ, ನಮ್ಮ ದೇಶದೊಳಗೇ ಬಳಸುವ ಬದಲಿ ಸಾಧ್ಯತೆ ಇತ್ತು. ಬದಲಾಗಿ ಅಮೆರಿಕದ ಕಂಪನಿಗಳಿಂದ ಬರುವ 'ಪ್ರಾಜೆಕ್ಟ್'ಗಳ ಮೇಲೆ ಅವಲಂಬಿತವಾಗಿ ಈ ಬಿಕ್ಕಟ್ಟು ನಮ್ಮ ಮೇಲೆ ತೀವ್ರ ಪರಿಣಾಮ ಬೀರುವಂತೆ ಮಾಡಿದೆ. ನಮ್ಮ ಐಟಿ ಉದ್ಯಮದ ರಫ್ತಿನಲ್ಲಿ ಮೂರನೇ ಎರಡು ಭಾಗ ಅಮೆರಿಕಕ್ಕೆ ಉಳಿದದ್ದರಲ್ಲಿ ಸಿಂಹಪಾಲು ಯುರೋಪಿಗೆ.

ಮೂರನೆಯದಾಗಿ **ಐಟಿ ಉದ್ಯಮ ಹೆಚ್ಚು** ಕಡಿಮೆ ಪೂರ್ಣವಾಗಿ 'ರಫ್ತು

ಐಟಿ ದೈತ್ಯದ ಉದ್ಯೋಗ ಕಡಿತ

ಐಟಿ ಬಿಕ್ಕಟ್ಟು ತೀವ್ರ ಎಂದು ಎಲ್ಲರಿಗೂ ಅರಿವಾಗಲು ಆರಂಭವಾದದ್ದು ಈ ಕ್ಷೇತ್ರದಲ್ಲಿ ಖ್ಯಾತ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಉದ್ಯೋಗ ಕಡಿತ ಆರಂಭಿಸಿದಾಗ. ಉದ್ಯೋಗ ಕಡಿತದ ಕೆಲವು ಅಂಕಿ-ಸಂಖ್ಯೆಗಳು

ಕಂಪನಿ	ಜಾಗತಿಕ ಉದ್ಯೋಗಕಡಿತ	ಕಂಪನಿ	ಕಡಿತ
ಸಿಸ್ಕೊ	8,500	ನಾರ್ಟೆಲ್	10,000
ಮೊಟರೋಲ	22,000	ಲೂಸೆಂಟ್	10,000
ಫಿಲಿಪ್ಸ್	7,000	ಎರಿಕಸನ್	6,000
ಇಂಟೆಲ್	8,000	ಸೀಮೆನ್ಸ್	6,000
ಟೆಕ್ಸಾಸ್ ಇನ್‌ಸ್ಟ್ರುಮೆಂಟ್ 2,500			

ಇವುಗಳಲ್ಲಿ ಕನಿಷ್ಟ 100-115 ರಷ್ಟು ಉದ್ಯೋಗಗಳು ಇಂಡಿಯಾದಲ್ಲೂ ಕಡಿತವಾಗಿವೆ. ಆದರೆ ಈ ಬಗ್ಗೆ ನಿಖರ ಮಾಹಿತಿ ಇಲ್ಲ.

...ಂತ'ವಾಗಿತ್ತು. ನಮ್ಮ ಐಟಿ ಉದ್ಯಮಕ್ಕೂ, ...ಪ್ರಾಥಮಿಕ ಆರ್ಥಿಕಕ್ಕೂ ಏನೇನು ...ಬಂಧವಿರಲಿಲ್ಲ. ಇದು ದೊಡ್ಡ ನ್ಯೂನತೆ. ...ಐಟಿ ಉದ್ಯಮದ 'ಸೇವೆ' ನಮ್ಮ ಆರ್ಥಿಕತೆಗೆ ...ವಿರಲಿಲ್ಲ. ನಮ್ಮ ಆರ್ಥಿಕದ ಉತ್ಪಾದಕತೆಗೆ, ...ಮಟ್ಟವನ್ನು ಹೆಚ್ಚಿಸುವುದರಲ್ಲಿ ಯಾವುದೇ ಪಾತ್ರ ...ಸಲಿಲ್ಲ. ಅಂದರೆ ಒಟ್ಟಾರೆ ಈ 'ದೀರ್ಘ ...ಗ್ಗಿ'ಯ ದೂರಗಾಮಿ ಫಲ ನಮ್ಮ ಐಟಿ ...ದ್ಯಮಕ್ಕೂ ಆಗಲಿಲ್ಲ. ನಮ್ಮ ಆರ್ಥಿಕಕ್ಕೂ ...ಗಲಿಲ್ಲ. ಈ 'ದೀರ್ಘ ಸುಗ್ಗಿ'ಯ ...ವಕಾಶವನ್ನುಪಯೋಗಿಸಿ ನಮ್ಮ ಐಟಿ ಉದ್ಯಮ ...ನ್ನ ಕಾಲ ಮೇಲೆ ನಿಂತುಕೊಳ್ಳುವ'. ಕೆಲಸ ...ಡಲಿಲ್ಲ.

ನಮ್ಮ ಐಟಿ ಉದ್ಯಮದ ದೌರ್ಬಲ್ಯಗಳು ...ಹೊಸದೇನಲ್ಲ. ಆದರೆ 'ದೀರ್ಘಸುಗ್ಗಿ'ಯ ಈ ...ಫಲತೆಯಿಂದ ಅದನ್ನು ನಿರಾಕರಿಸಲಾಗುತ್ತಿತ್ತು. ...ರ್ಲಕ್ಷಿಸಲಾಗುತ್ತಿತ್ತು. ಈ ಬಿಕ್ಕಟ್ಟು ಈ ದೌರ್ಬಲ್ಯಗಳನ್ನು ಸ್ಪಷ್ಟವಾಗಿ ಮುಂದಕ್ಕೆ ತಂದಿದೆ. **ಈ ದೌರ್ಬಲ್ಯಗಳನ್ನು ನಿವಾರಿಸಲು ಕ್ರಮ ...ಕೈಗೊಂಡು ಐಟಿ ಉದ್ಯಮವನ್ನು ಹೊಸ ...ನೆಲೆಯ ಮೇಲೆ ಕಟ್ಟುವ ತುರ್ತಿನತ್ತ ಗಮನ ...ಹರಿಸಿದೆ.**

...ಯುಗ ಮುಗಿಯಿತೆ?

ಹೊಸ ಆರ್ಥಿಕ'ದ ಜೊಳ್ಳು ಬಯಲಾದದ್ದು

ಐಟಿ ಉದ್ಯಮ ಮತ್ತು ಅಮೆರಿಕದ ಆರ್ಥಿಕದಲ್ಲಿ ಕಂಡು ಬಂದ 6-7 ವರ್ಷಗಳ ದೀರ್ಘ ಸುಗ್ಗಿ ಹಲವು ತಪ್ಪು ನೀತಿಗಳಿಗೆ, ಧೋರಣೆಗಳಿಗೆ ಕುಮ್ಮಕ್ಕು ಕೊಟ್ಟಿತ್ತು. ಆರ್ಥಿಕದ ಬಗ್ಗೆ ಇದ್ದ ಮೂಲಭೂತ ಗ್ರಹಿಕೆಗಳನ್ನು ವಿಕೃತಿಗೊಳಿಸಿತ್ತು.

ಮೊದಲನೆಯದಾಗಿ ಮಾಹಿತಿ ತಂತ್ರಜ್ಞಾನ ಇಡೀ ಆರ್ಥಿಕ ವ್ಯವಸ್ಥೆಯನ್ನು ಮೂಲಭೂತ ರೀತಿಯಲ್ಲಿ ಬದಲಾಯಿಸಿದೆ. ಆರ್ಥಿಕ ವ್ಯವಸ್ಥೆ ಎರಡು ವಿಭಾಗಗಳನ್ನು ಹೊಂದಿದೆ. ಒಂದು 'ಜ್ಞಾನ ಆಧಾರಿತ ಹೊಸ ಆರ್ಥಿಕತೆ'. ಇನ್ನೊಂದು ಸರಕು ಆಧಾರಿತ ಹಳೆಯ ಆರ್ಥಿಕತೆ! ಈವರೆಗೆ ಗೊತ್ತಿರುವ ನಿಯಮಗಳು ಜ್ಞಾನ ಆಧಾರಿತ ಹೊಸ ಆರ್ಥಿಕಕ್ಕೆ ಅನ್ವಯವಾಗುವುದಿಲ್ಲ. ಅವು ಹೊಸ ನಿಯಮಗಳನ್ನು ರೂಪಿಸಿಕೊಳ್ಳುತ್ತವೆ ಎನ್ನುವ ಧೋರಣೆ.

ಈ ಧೋರಣೆಗೆ 'ಸಮರ್ಥನೆ'ಯಾಗಿ ಹಲವು ವರ್ಷಗಳ ಕಾಲ 'ಹೊಸ ಆರ್ಥಿಕ' ದ ಕಂಪನಿಗಳ ಶೇರು ಬೆಲೆಯಲ್ಲಿ ಸುಗ್ಗಿಯ ಉದಾಹರಣೆ ಕೊಡಲಾಗಿತ್ತು. ಸಾಮಾನ್ಯವಾಗಿ ಕಂಪನಿಗಳ ವಹಿವಾಟಿನ ಮೊತ್ತ, ಲಾಭಾಂಶ, ಉತ್ಪಾದಕ ಆಸ್ತಿಯ ಮೌಲ್ಯ ಇದರ ಮೇಲೆ ಶೇರು ಬೆಲೆ (ಅಂದರೆ ಶೇರು ಬೆಲೆ ಆಧಾರಿತ ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ) ನಿರ್ಧಾರಿತವಾಗುತ್ತಿತ್ತು. ಆದರೆ 'ಹೊಸ ಆರ್ಥಿಕ'ದ ಕಂಪನಿಗಳ ಶೇರು ಬೆಲೆ ಇಂತಹ ಯಾವುದೇ ಸಾಮಾನ್ಯ ನಿಯಮಗಳು ಅನುಗುಣವಾಗಿರುವಂತೆ ಕಂಡು ಬರಲಿಲ್ಲ. ಮುಖ್ಯವಾಗಿ 'ಡಾಟ್ ಕಾಂ' ಕಂಪನಿಗಳು ಎಂದು ಹೆಸರಾದ ಕಂಪನಿಗಳು ಶೇರು ಬೆಲೆ ಹಲವು ವರ್ಷಗಳ ಕಾಲ ಮೇಲೆ ಹೋಗುತ್ತಲೇ ಇತ್ತು. ಇಂಟರ್‌ನೆಟ್ ಮೂಲಕ ಇಲೆಕ್ಟ್ರಾನಿಕ್ ವ್ಯಾಪಾರದಲ್ಲಿ ತೊಡಗಿದ್ದ ಈ ಡಾಟ್ ಕಾಮ್ ಕಂಪನಿಗಳು ಉತ್ಪಾದಕ ಆಸ್ತಿ, ಲಾಭಾಂಶವನ್ನು ಲೆಕ್ಕಿಸದೆ - ಅವುಗಳ ಶೇರು ಬೆಲೆ ಗಗನಕ್ಕೇರಿತ್ತು. ಹೆಚ್ಚಿನ ಡಾಟ್ ಕಾಮ್ ಕಂಪನಿಗಳು ತಮ್ಮ ಜೀವಾವಧಿಯಲ್ಲಿ ಯಾವಾಗಲೂ ಲಾಭವನ್ನೇ ಮಾಡಿರಲಿಲ್ಲ. 'ಅಮೆಜಾನ್' ಎಂಬ ಇಂಟರ್‌ನೆಟ್ ಮೂಲಕ ಪುಸ್ತಕ ಮಾರಾಟ ಮಾಡುವ ಕಂಪನಿ 'ಯಾಹೂ' ಎಂಬ ಇಂಟರ್‌ನೆಟ್‌ನಲ್ಲಿ ಮಾಹಿತಿ ಹುಡುಕುವ ಸವಲತ್ತು ಒದಗಿಸುವ ಕಂಪನಿ ಇದಕ್ಕೆ ಉತ್ತಮ ಉದಾಹರಣೆಗಳು. ಇವು 'ಜ್ಞಾನ ಆಧಾರಿತ ಹೊಸ ಆರ್ಥಿಕ' ಕಂಪನಿಗಳು. ಅವುಗಳ ಮೌಲ್ಯ ಅವುಗಳ 'ಜ್ಞಾನ ಆಸ್ತಿ' ಮತ್ತು 'ಹೊಸ ವ್ಯಾಪಾರಿ ಮಾಡೆಲ್' ಮೇಲೆ ಆಧಾರಿತವಾಗಿದೆ. ಇವನ್ನು 'ಪಾರಂಪರಿಕ' ಅಳತೆಯಲ್ಲಿ ಅಳೆಯಲಾಗುವುದಿಲ್ಲ. ಶೇರು ಬೆಲೆಯೇ ಆದರ ಅಳತೆ ಎಂದೆಲ್ಲಾ 'ಹೊಸ ಆರ್ಥಿಕ'ದ ಬೆಂಬಲಿಗರು ಹೇಳುತ್ತಿದ್ದರು. ಇಲೆಕ್ಟ್ರಾನಿಕ್ - ವ್ಯಾಪಾರ ಕ್ಷೇತ್ರದ ಬಗ್ಗೆ ಸಾಮಾನ್ಯವಾಗಿ, ಡಾಟ್ ಕಾಮ್ ಕಂಪನಿಗಳ ಬಗ್ಗೆ ನಿರ್ದಿಷ್ಟವಾಗಿ ಭಾರಿ 'ಭಕ್ತವೃಂದ' ಸೃಷ್ಟಿಯಾಯಿತು. **ಸುಮಾರು ಒಂದು ವರ್ಷದ ಹಿಂದಿನವರೆಗೆ ಡಾಟ್ ಕಾಮ್ ಕಂಪನಿಗಳ ಶೇರು ಬೆಲೆ ಕುಸಿದು ಅವು ಮುಚ್ಚಲು ಆರಂಭವಾಗುವವರೆಗೆ ಈ 'ಡಾಟ್ ಕಾಮ್ ಭಕ್ತಿ' ಜ್ವರದಂತೆ, ಡಿಸೆಂಬರ್-ಜನವರಿಯಲ್ಲಿ ನಮ್ಮಲ್ಲಿ ಕಾಣುವ 'ಅಯ್ಯಪ್ಪ**



ಭಕ್ತಿ'ಯಂತೆ ತಾರಕಕ್ಕೆ ಏರಿತ್ತು. 'ಡಾಟ್ ಕಾಮ್' ಭಕ್ತರ ಪ್ರಕಾರವೇ ಅದರ ಗಗನಕ್ಕೇರುತ್ತಿದ್ದ ಶೇರು ಬೆಲೆಯೇ ಅವುಗಳ ಮೌಲ್ಯದ ಸೂಚಕವಾದರೆ, ಈಗ ಅವು ಪಾತಾಳಕ್ಕೆ ಇಳಿದಿರುವುದು, ಮುಚ್ಚಿಹೋಗಿರುವುದು ಅವರ 'ಥಿಯರಿ' ತಪ್ಪು ಎಂದು ತೋರಿಸುವುದಿಲ್ಲವೇ? 'ಹೊಸ ಆರ್ಥಿಕದ' ಥಿಯರಿ ಜೊಳ್ಳು ಎಂಬುದು ಕಳೆದ ಒಂದು ವರ್ಷದಿಂದ ಸ್ಪಷ್ಟವಾಗುತ್ತಾ ಬಂದಿತ್ತು. ಈಗ ಯಾರೂ ಅದನ್ನು ಪ್ರಶ್ನಿಸದಷ್ಟು ಸ್ಪಷ್ಟವಾಗಿದೆ. ಆದರೆ ಈ ಸುಗ್ಗಿಯ ವರ್ಷಗಳಲ್ಲಿ ಈ ಡಾಟ್ ಕಾಮ್ ಕಂಪನಿಗಳಿಗೆ ಬಂಡವಾಳ, ತಾಂತ್ರಿಕ ಜಾಣ್ಮೆ ಎಲ್ಲಾ ಹರಿದು ಬಂತು. ಲಕ್ಷಾಂತರ ಸಾಮಾನ್ಯ ಹೂಡಿಕೆದಾರರು ತಮ್ಮ ಇದ್ದಬದ್ದ ಹಣವನ್ನೆಲ್ಲಾ (ಹಲವಾರು ಸಾಲಗಳನ್ನೂ ಮಾಡಿ) ಈ ಕಂಪನಿಗಳಲ್ಲಿ ತೊಡಗಿಸಿದರು. ಅವರೆಲ್ಲರು ಈಗ ದಿವಾಳಿಯಾಗಿದ್ದಾರೆ.

ಈ 'ದೀರ್ಘಸುಗ್ಗಿ'ಯ ದೊಡ್ಡ ಭಾಗ ಈ 'ಡಾಟ್ ಕಾಮ್ ಭ್ರಮೆ' ಯಿಂದ ಆದದ್ದು. ನಿಜವಾದ ಆರ್ಥಿಕ ಸುಗ್ಗಿಯಲ್ಲ. ಬರಿ ಶೇರು ಮಾರುಕಟ್ಟೆ ಬೆಲೆಯ ಮೇಲೆ ಆಧಾರಿತವಾದದ್ದು. ಆದರೆ ಈ ಸುಗ್ಗಿಯಲ್ಲಿ ಹಲವರು ಶ್ರೀಮಂತರಾದರು. ಹಲವರು ನಿರ್ಗತಿಕರಾದರು. ಇದರರ್ಥ ಇಲೆಕ್ಟ್ರಾನಿಕ್ ವ್ಯಾಪಾರಕ್ಕೆ ತಾಂತ್ರಿಕ-ಆರ್ಥಿಕ ಸಾಧ್ಯತೆಗಳಿಲ್ಲವೆಂದಲ್ಲ. ಇದು ಒಂದು ಹೊಸ ಆಗತ್ಯ ಮಾದರಿಯಲ್ಲ ಅಂತಲೂ ಅಲ್ಲ. 'ಸರಕು ಆರ್ಥಿಕ'ಕ್ಕೂ, 'ಜ್ಞಾನ ಆರ್ಥಿಕ'ಕ್ಕೂ ಏನೇನು ಸಂಬಂಧವಿಲ್ಲವೆಂಬ ಧೋರಣೆ ತಪ್ಪು ಎಂದು ಈ ಬಿಕ್ಕಟ್ಟು ರುಜುವಾತುಗೊಳಿಸಿದೆ. ಪ್ರಾಥಮಿಕ ಸರಕುಗಳ ಉತ್ಪಾದನೆ, ವಹಿವಾಟು ಮೇಲೆ ಆಧಾರಿತವಾಗಿಯೇ ಮಾಹಿತಿ ತಂತ್ರಜ್ಞಾನವಾಗಲೀ, ಇಲೆಕ್ಟ್ರಾನಿಕ್ ವ್ಯಾಪಾರವಾಗಲಿ ಬೆಳೆಯಲು ಸಾಧ್ಯ. ಪ್ರಾಥಮಿಕ ಸರಕು ಆರ್ಥಿಕತೆ ದುರ್ಬಲವಾದಾಗ ಮಂದ ಗತಿಯಲ್ಲಿ ಚಲಿಸಲು ಆರಂಭಿಸಿದಾಗ ಅದು ಖಂಡಿತ ಎಲ್ಲದರ ಮೇಲೂ ಪರಿಣಾಮ ಬೀರುತ್ತದೆ. ಎಂದು ಈಗಿನ ಬಿಕ್ಕಟ್ಟು ಸ್ಪಷ್ಟವಾಗಿ ತೋರಿಸಿದೆ. ಎರಡನೆಯದಾಗಿ 'ಹೊಸ ಆರ್ಥಿಕ' 'ಹಳೆಯ ಆರ್ಥಿಕ' 'ಥಿಯರಿ'ಯ ಮುಂದುವರಿಕೆಯಾಗಿ, ಬಂಡವಾಳಶಾಹಿಯ ಉತ್ಕರ್ಷ- ಕುಂಠಿತತೆ- ಬಿಕ್ಕಟ್ಟುಗಳ ಚಕ್ರದ ಸಮಸ್ಯೆಯನ್ನು ಬಗೆಹರಿಸಿಕೊಂಡಿದೆ ಎಂದು ಬಂಡವಾಳಶಾಹಿ-ಬೆಂಬಲಿಗರು ಹೇಳಲಾರಂಭಿಸಿದ್ದರು. ಹೊಸ ಜ್ಞಾನ(ಮಾಹಿತಿ ತಂತ್ರಜ್ಞಾನ) ಆಧಾರಿತ ಆರ್ಥಿಕ ಬೆಳೆಸುವ ಮೂಲಕ ಬಂಡವಾಳಶಾಹಿ ತನ್ನ ಪ್ರಾಬಲ್ಯ ಮೇಲೇರಿದೆ ಹಳೆಯ ಸಮಸ್ಯೆಗಳನ್ನು ಬಗೆಹರಿಸಿಕೊಂಡಿದೆ ಎಂದು ಅವರ ಅಂಬೋಣವಾಗಿತ್ತು. ಈಗಿನ ಬಿಕ್ಕಟ್ಟು ಅವರ 'ಥಿಯರಿ' ಎಲ್ಲಾ ಟೊಳ್ಳು ಎಂಬುದನ್ನು ಸ್ಪಷ್ಟಪಡಿಸಿದೆ.



ಭವಿಷ್ಯದ ಹುಡುಕಾಟದಲ್ಲಿ

ಮುಂದೇನು?

ಈ ಬಿಕ್ಕಟ್ಟಿನ ಅರ್ಥ ಮಾಹಿತಿ ತಂತ್ರಜ್ಞಾನ ಉದ್ಯಮವನ್ನು ನಿರ್ಲಕ್ಷಿಸಬೇಕು ಎಂದಲ್ಲ ಅಥವಾ ಇಲೆಕ್ಟ್ರಾನಿಕ್-ವ್ಯಾಪಾರ ನಿರರ್ಥಕ ಎಂದಲ್ಲ. ಈ ಬಿಕ್ಕಟ್ಟಿನಿಂದ ಸ್ಪಷ್ಟವಾಗಿರುವ ನಮ್ಮ ಐಟಿ ಉದ್ಯಮದ ದೌರ್ಬಲ್ಯಗಳನ್ನು ಪರಿಹರಿಸಲು ತುರ್ತು ಗಮನ ಕೊಡಬೇಕು. ಈ 'ದೀರ್ಘ ಸುಗ್ಗಿ'ಯ ಫಲವಾಗಿ ನಮ್ಮಲ್ಲಿ ನಿರ್ಮಾಣವಾಗಿರುವ ತಾಂತ್ರಿಕ ಪರಿಕರ ಬಳಸಿ ಬರಿಯ ರಫ್ತು, ಅದರಲ್ಲೂ ಒಂದು ದೇಶಕ್ಕೆ ರಫ್ತಿನ ಮೇಲೆ ಆಧಾರಿತವಾಗಿರದ, ಸ್ವಂತ 'ಉತ್ಪನ್ನ'ಗಳ ಮೇಲೆ ಆಧಾರಿತ ಐಟಿ ಉದ್ಯಮ ಕಟ್ಟಬೇಕು. ನಮ್ಮ ಪ್ರಾಥಮಿಕ ಸರಕು ಆರ್ಥಿಕದ ಉತ್ಪಾದಕತೆ, ಗುಣಮಟ್ಟ ಹೆಚ್ಚಿಸಲು ಬಳಸುವ ಮೂಲಕ ಐಟಿಗೆ ದೇಶಿ ಮಾರುಕಟ್ಟೆ ಸಿದ್ಧಪಡಿಸಬೇಕು. ಅದನ್ನು ನಮ್ಮ ಆರ್ಥಿಕತೆಯು ಎಲ್ಲಿ, ಎಷ್ಟು ಬಳಸಬಹುದು ಎಂಬ ಬಗ್ಗೆ ತಣ್ಣಗಿನ ವಿಮರ್ಶೆ ಮಾಡಬೇಕು. ಅದರ ಅಪಾರ ಸಾಧ್ಯತೆಗಳಿವೆ. ಐಟಿ ಉದ್ಯಮಕ್ಕೆ ಹಲವು ಕಡೆ ಅನಗತ್ಯವಾಗಿ ನೀಡಿದ್ದ 'ಸವಲತ್ತು'ಗಳ ಬದಲು, ಅದು ತನ್ನ ಕಾಲ ಮೇಲೆ ನಿಂತು ಪ್ರಾಥಮಿಕ ಆರ್ಥಿಕಕ್ಕೆ ಪೂರಕವಾಗುವಂತೆ ಕ್ರಮವಹಿಸಬೇಕು. ಈ ರೀತಿ ಮಾಡುವಾಗ ಐಟಿ ಉದ್ಯಮ ನಿರ್ಮಿಸಿರುವ ಮಾನವ ಸಂಪನ್ಮೂಲಗಳನ್ನು ಬಳಸುವ ಬಗ್ಗೆ ನಿಗಾ ವಹಿಸಬೇಕು. ○

B2B - ಬ್ಯಾಕ್ ಟು ಬ್ಯಾಂಗಲೋರ್!

ಐಟಿ ಕ್ಷೇತ್ರದಲ್ಲಿ ಬಿಕ್ಕಟ್ಟು, ಐಟಿಗೆ ವಿಶಿಷ್ಟವಾದ ಭಾಷೆಗೆ ಹೊಸ ಭಾಷ್ಯ ಬರೆದಿದೆ. ಐಟಿಯ ಪಾರಿಭಾಷಿಕ ಶಬ್ದಗಳಿಗೆ ಹೊಸ ವ್ಯಂಗ್ಯದ ಅರ್ಥ ಕೊಡಲಾಗುತ್ತಿದೆ. ಇವುಗಳಲ್ಲಿ ಕೆಲವು ಸ್ಯಾಂಪಲ್ಲುಗಳು.

B2B - ಇದರ ಅರ್ಥ ಬಿಸಿನೆಸ್-ಟು-ಬಿಸಿನೆಸ್. ಇದು ಇಲೆಕ್ಟ್ರಾನಿಕ್ ವ್ಯಾಪಾರದಲ್ಲಿ ಎರಡು ಕಂಪನಿಗಳ ನಡುವಿನ ವಹಿವಾಟಿಗೆ ಅನುಗುಣವಾದ ಸಾಫ್ಟ್‌ವೇರ್, ವೆಬ್ ಸೈಟ್ ವಿನ್ಯಾಸಕ್ಕೆ ಇಟ್ಟ ಹೆಸರು. ಇಲೆಕ್ಟ್ರಾನಿಕ್ ವ್ಯಾಪಾರದಲ್ಲಿ ತೊಡಗಿದ ಕಂಪನಿಗಳೇ ಹೆಚ್ಚಿನವು ಮುಚ್ಚಿರುವುದರಿಂದ ಇದರ ಹೊಸ ಭಾಷ್ಯ ಈಗ **ಬ್ಯಾಕ್ ಟು ಬೆಂಗಲೂರ್** ಅಂತ. B2B ನಂಬಿದವರು ಬೆಂಗಳೂರಿಗೆ ಮರಳಬೇಕಾಗಿದೆ ಅಂತ.

B2C - ಇಲೆಕ್ಟ್ರಾನಿಕ್ ವ್ಯಾಪಾರದ ಇನ್ನೊಂದು ವಿಷಯವಾದ ಇದರ ಅರ್ಥ ಬಿಸಿನೆಸ್ ಟು ಕನ್‌ಸ್ಯೂಮರ್ ಅಂತ. ಬಳಕೆದಾರ ಮತ್ತು ಮಾರುವ ಕಂಪನಿ ನಡುವಿನ ವಹಿವಾಟಿನ ಬಗ್ಗೆ ಇದು. ಇದರಹೊಸ ವ್ಯಂಗ್ಯಾರ್ಥ - **ಬ್ಯಾಕ್ ಟು ಚೆನ್ನೈ** ಅಂತ. B2C ನಂಬಿದವರು ಚೆನ್ನೈಗೆ ಮರಳಬೇಕಾಗಿದೆ.

DTH - ಇದು ನೇರ ಮನೆಗಳಿಗೆ ಉಪಗ್ರಹಗಳ ಮೂಲಕ ಬಿತ್ತರವಾಗುವ ಟಿವಿ/ಕೇಬಲ್ ಚಾನಲ್‌ಗಳಿಗೆ ಬಳಸುವ ಹೊಸ ತಂತ್ರಜ್ಞಾನ. ಈಗ ಇದರ ಹೊಸ ವ್ಯಂಗ್ಯಾರ್ಥ DTH ನಂಬಿದವರು ಸೀದಾ ಮನೆಗೆ ಹೋಗಬೇಕಾಗಿದೆ ಅಂತ.

ಕಂಪ್ಯೂಟರುಗಳೇ ತಿಳಿಸುತ್ತವೆ!

ಆಟ ಆಡುತ್ತವೆ, ಆಟ ಆಡಿಸುತ್ತವೆ
ಪಾಠ ಮಾಡುತ್ತವೆ, ಬಾಯಿ ಪಾಠ ಮಾಡಿಸುತ್ತವೆ!
ಕೂಡಿಸಿ, ಗುಣಿಸಿ, ಭಾಗಿಸಿ, ಕಳೆದು...
ಲೆಕ್ಕ ಮಾಡುತ್ತವೆ, ಲೆಕ್ಕ ಹಾಕುತ್ತವೆ!
ಮನೆಯದ್ದೇ ಆಗಲಿ, ಆಫೀಸಿನದೇ ಆಗಲಿ
ನಿಮ್ಮ ಹಲವು ಹದಿನೆಂಟು ವ್ಯವಹಾರಗಳ
ಅಂಕಿ ಸಂಖ್ಯೆ ಆಕೃತಿಗಳ ಸಹಿತ
ನಿಮ್ಮ ಕಣ್ಣಮುಂದೆ ಹಿಡಿಯುತ್ತವೆ
ಬೇಕೆಂದರೆ ಅಚ್ಚು ಹಾಕಿ ಕೊಡುತ್ತವೆ!
ಬಾಹ್ಯಾಕಾಶಕ್ಕೆ ನೆಗೆದ ರಾಕೆಟ್ಟುಗಳ
ವೇಗ ನಿಯಂತ್ರಿಸುತ್ತವೆ ಕಂಪ್ಯೂಟರಗಳು
ಇನ್ನು ಮುಂದೆ ನಿಮ್ಮ ಕಾರಲ್ಲೂ ಬರಲಿವೆ
ನಿಮ್ಮ ಕಾರನ್ನು ಅವೇ ನಡೆಸುತ್ತವೆ.
ಭಯಪಡಬೇಡಿ
ಎದುರುಗೊಂಡ ವಾಹನಗಳ ಚಲನವಲನ
ದೂರದಿಂದಲೇ ಗ್ರಹಿಸಿ ಲೆಕ್ಕ ಹಾಕಿ
ಕಾರಿನ ವೇಗ ಬದಲಿಸಿ, ದಿಕ್ಕು ಬದಲಿಸಿ
ಸುರಕ್ಷಿತವಾಗಿ ತಲುಪಿಸುತ್ತವೆ!
ಎಲ್ಲವನ್ನೂ ಕಂಪ್ಯೂಟರಗಳೇ ಮಾಡುವಾಗ
ನಾವೇನು ಮಾಡುವುದು ಎನ್ನುವಿರಾ?
ಸುಮ್ಮನಿರಿ, ಅದನ್ನೂ ಅವೇ ತಿಳಿಸುತ್ತವೆ!

- ಹ.ಶಿ.ಭೈರನಟ್ಟಿ

ಎಡರಂಗದ ಆಳ್ವಿಕೆಯಲ್ಲಿ ಪ.ಬಂಗಾಳ ಏನೊಂದೂ ಪ್ರಗತಿಕಾಣದೆ ಬೆಂಗಾಡಾಗಿ ಹೋಗಿದೆ ಎಂದು ದಿನಗಟ್ಟಲೇ ಬೊಬ್ಬಿಡುತ್ತಿದ್ದಾರೆ ಮಮತಾ, ಸೋನಿಯಾ, ವಾಜಪೇಯಿಗಳು.... ಅದನ್ನೇ ಪುಟಗಟ್ಟಲೆ ಬರೆಯುತ್ತಿವೆ ಪತ್ರಿಕೆಗಳು. ಈ ಬೊಬ್ಬಾಟ ಹೊಸದೇನಲ್ಲ. ಆದರೆ ಅಲ್ಲಿನ ನಿಜ ಪರಿಸ್ಥಿತಿಯೇನು? ಸಾಧನೆಗಳೇನು? ಎಂಬುದರ ಸಂಕ್ಷಿಪ್ತ ವರದಿ.


ಪ್ರಗತಿಯ ಬೆನ್ನೇರಿ ಪಶ್ಚಿಮ ಬಂಗಾಳ.....

ಜಿ.ಎಸ್. ಮಣಿ
ಕೊಲ್ಕತ್ತ

ಹಿನ್ನೆಲೆ

ಪ.ಬಂಗಾಳದಲ್ಲಿ ಎಡರಂಗ ಒಮ್ಮೆಲೇ ಎದ್ದು ಬಂದುದಲ್ಲ. ಅದು ದೀರ್ಘ ಹೋರಾಟದ ಫಲವಾಗಿ ಮೂಡಿಬಂದದ್ದು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಹಲವು ಜನಪರ ಹೋರಾಟಗಳು ಪ.ಬಂಗಾಳದಲ್ಲಿ ನಡೆದವು. ಈ ಹೋರಾಟಗಳ ಫಲವಾಗಿ ಹಂತ ಹಂತವಾಗಿ ಎಡರಂಗ ಬೆಳೆದುಬಂತು.

1952 ರಲ್ಲಿ ಇಂಗ್ಲೀಷ್ ಸ್ವಾಮ್ಯದ ಕಲ್ಕತ್ತಾ ಟ್ರಾಂವೇಸ್ ಕಂಪನಿ ಲಿಮಿಟೆಡ್ ಪ್ರಯಾಣ ದರ ಏರಿಸಿದ್ದರ ವಿರುದ್ಧ ಜನ ಪ್ರತಿಭಟಿಸಿದರು. 1954 ರಲ್ಲಿ ಉತ್ತಮ ಸೇವಾ ಪರಿಸ್ಥಿತಿ ಮತ್ತು ಸವಲತ್ತುಗಳನ್ನು ಆಗ್ರಹಿಸಿ ಶಿಕ್ಷಕರ ಐತಿಹಾಸಿಕ ಮುಷ್ಕರ ನಡೆಯಿತು. 1955 ರಲ್ಲಿ ಬಂಗಾಳ-ಬಿಹಾರ



ಸರಿ ದಿಕ್ಕು - ಸರಿ ದಾರಿ
ಎಡರಂಗದ ರುವಾರಿ
ಜ್ಯೋತಿ ಬಾಬುವಿಗೆ ಯಾರಿಹರು ಸರಿಸಾಟಿ?

ವಿಲೀನದ ಪ್ರಸ್ತಾಪದ ವಿರುದ್ಧ ಬಂಗಾಳದ ಜನ ಪ್ರತಿಭಟಿಸಿದರು.

ಶೈಕ್ಷಣಿಕ ಅವಕಾಶಗಳಲ್ಲಿ ಕಡಿತ ಮಾಡುವ ಫಿಲಿಪ್ಸ್ ಸಮಿತಿಯ ವರದಿಯ ವಿರುದ್ಧ ಬಂಗಾಳದ ವಿದ್ಯಾರ್ಥಿಗಳು ಬಂಡೆದ್ದರು. 1957-58 ರಲ್ಲಿ, 1959 ರಲ್ಲಿ ಆಹಾರ ಚಳುವಳಿ ನಡೆಯಿತು. 1960 ರಲ್ಲಿ ವಿದ್ಯಾರ್ಥಿಗಳು ಅಮೆರಿಕದ ನವ ವಸಾಹತುಶಾಹಿ ನೀತಿಗಳ ವಿರುದ್ಧ ಪ್ರತಿಭಟಿಸಿದರು. 1962 ರಲ್ಲಿ ಭಾರತ-ಚೀನಾ ಯುದ್ಧದ ಹಿನ್ನೆಲೆಯಲ್ಲಿ ಆದ ರಾಜಕೀಯ ಬಂಧನದ ವಿರುದ್ಧ ಹೋರಾಟವಾಯಿತು. 1964 ರಲ್ಲಿ ಹಳೇ ಪಠ್ಯ ಕ್ರಮದ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟಿಸಿದರು. 1964 ರಲ್ಲಿ ಸಿಪಿಐ(ಎಂ) ರೂಪುಗೊಂಡಿತು.

ಸಿಪಿಐ(ಎಂ) ರೂಪುಗೊಂಡ ನಂತರ ಅದು ಪ.ಬಂಗಾಳದಲ್ಲಿ ಜನಸಮೂಹವನ್ನು ಹೋರಾಟಕ್ಕೆ ಸಜ್ಜುಗೊಳಿಸಿತು. ಬೂರ್ಜ್ವಾ ಜಮೀನುದಾರಿ ಸರ್ಕಾರಗಳು ಕಲ್ಕತ್ತ ಮತ್ತು ದೆಹಲಿ ಎರಡೂ ಕಡೆ ಇದ್ದವು. ಬೆಲೆ ಏರಿಕೆ, ಔದ್ಯಮಿಕ ಹಿಂದೆಗೆತ, ನಿರುದ್ಯೋಗ, ಆಹಾರ ಬಿಕ್ಕಟ್ಟುಗಳನ್ನೇ ಆಧಾರವಾಗಿಟ್ಟುಕೊಂಡು ಪ್ರಜಾಪ್ರಭುತ್ವೀಯ ಹೋರಾಟಗಳನ್ನು ಅದು ಸಂಘಟಿಸಿತು. 1976 ರಲ್ಲಿ ಆಹಾರ, ಸೀಮೆ ಎಣ್ಣೆಗಳ ತೀವ್ರ ಕೊರತೆ ಕಂಡು ಬಂದು ಬಿಕ್ಕಟ್ಟು ಉಂಟಾಯಿತು. ಎಡ ಪಂಥೀಯರು 72 ಗಂಟೆಗಳ ಬಂಗಾಳ ಬಂದ್‌ಗೆ ಕರೆ ಕೊಟ್ಟರು. ಇದೇ ಸಂದರ್ಭದಲ್ಲಿ ಕಾಂಗ್ರೆಸ್‌ನಲ್ಲಿ ಒಡಕು ಉಂಟಾಗಿ ಅಜಯ್ ಮುಖರ್ಜಿ ನೇತೃತ್ವದ ಒಂದು ಗುಂಪು ಕಾಂಗ್ರೆಸ್‌ನಿಂದ ಹೊರಬಂದು ಬಂಗಾಳ ಕಾಂಗ್ರೆಸ್ ಎಂಬ ಸಂಘಟನೆಯನ್ನು ಹುಟ್ಟು ಹಾಕಿತು.

ಇಂತಹ ಸಂದರ್ಭದಲ್ಲಿ ನಾಲ್ಕನೇ ಸಾರ್ವತ್ರಿಕ ಚುನಾವಣೆ 1967 ರಲ್ಲಿ ನಡೆಯಿತು. ಬಂಗಾಳದಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡು ಕಾಂಗ್ರೆಸ್ಸೇತರ ಸಂಯುಕ್ತ ರಂಗವೊಂದು ರೂಪುಗೊಂಡಿತು. ಜ್ಯೋತಿಬಸು ಈ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಯಾದರು. ಈ ಮಂತ್ರಿಮಂಡಲ ಬರೀ 9 ತಿಂಗಳು ಅಧಿಕಾರದಲ್ಲಿದ್ದು ಉರುಳಿತು. 1969 ರಲ್ಲಿ ಮತ್ತೆ ಮಧ್ಯಂತರ ಚುನಾವಣೆ ನಡೆದು ಮತ್ತೆ ಸಂಯುಕ್ತ ರಂಗ ಅಧಿಕಾರಕ್ಕೆ ಬಂತು. ಮತ್ತೆ ಅದು ಅಧಿಕಾರ ಕಳೆದುಕೊಂಡು ರಾಷ್ಟ್ರಪತಿಗಳ ಆಡಳಿತ ಬಂತು.

ಈ ಸಂದರ್ಭದಲ್ಲಿ ನಡೆದ ಚುನಾವಣೆಯಲ್ಲಿ ಆಕ್ರಮಣಗಳನ್ನು ನಡೆಸಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ದಬ್ಬಾಳಿಕೆಯ ಆಡಳಿತವನ್ನು ನಡೆಸಿತು. ಪ.ಬಂಗಾಳದ ಜನತೆ ಸಿಪಿಐ(ಎಂ) ನೇತೃತ್ವದ ಎಡರಂಗಕ್ಕೆ 1977 ರಲ್ಲಿ ಸ್ಪಷ್ಟ ಬಹುಮತ ನೀಡಿ ಅಧಿಕಾರಕ್ಕೆ ತಂದರು. ಅಂದಿನಿಂದ ಎಡರಂಗ ಇಂದಿನವರೆಗೂ ಸ್ವಚ್ಛ ಮತ್ತು ಜನಪರವಾದ ಆಡಳಿತ ನಡೆಸಿಕೊಂಡು ಬಂದಿದೆ. ದುಡಿವ ಬಡಜನಗಳ ದನಿಗೆ ಜೀವ ನೀಡಿದೆ. ದೆಹಲಿಯ ಸರ್ಕಾರಗಳು ಕಾಲ ಕಾಲಕ್ಕೆ ನೀಡಿದ ಸವಾಲುಗಳನ್ನು ಎದುರಿಸಿ ಜನಪರ ಕೆಲಸಗಳನ್ನು ನಿರ್ವಹಿಸಿದೆ. ಆಡಳಿತದ ವಿಕೇಂದ್ರೀಕರಣ ಮಾಡಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ನೆಲೆಗೊಳಿಸಿದೆ. ಇಂದು ಇಲ್ಲಿನ ಹಿಂದುಳಿದ, ಬಡವರ್ಗದ ಜನ ನೆಮ್ಮದಿಯ ಉಸಿರು ಹೊತ್ತಿದ್ದರೆ ಅದಕ್ಕೆ ಎಡರಂಗ ಸರ್ಕಾರದ ಕ್ರಮವೇ ಕಾರಣ. ಇವಕ್ಕೆಲ್ಲಾ ತಳಹದಿಯಾಗಿ, ತಿರುವು ತಂದದ್ದು ಭೂ ಗ್ರಹಣ ಚಳುವಳಿ.

ಎಡರಂಗ ಸರ್ಕಾರದ ಸಾಧನೆಗಳು

ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಮೊದಲು ಮಾಡಿದ ಕೆಲಸವೆಂದರೆ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪುನಃ ಸ್ಥಾಪಿಸಿದ್ದು. ಇದೇ ಸಮಯದಲ್ಲಿ ಅತ್ಯಂತ ಮೂಲ ಭೂತ ವಿಷಯು ಗಳಾದ ಸಾಮಾಜಿಕ, ಆರ್ಥಿಕ ರೂಪಾಂತರವನ್ನು ಸಾಧಿಸಿ ಜನತೆಗೆ ಸಮಾನತೆ ಮತ್ತು ನ್ಯಾಯ ದೊರಕಿಸುವ ಪ್ರಯತ್ನವನ್ನು ಅದು ಮಾಡಿತು. ಪ.ಬಂಗಾಳದಲ್ಲಿ ಅಧಿಕಾರ ದಲ್ಲಿರುವುದು ಒಂದು ಕಮ್ಯುನಿಸ್ಟ್ ಸರ್ಕಾರವಲ್ಲ, ಇದು ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಶಕ್ತಿಗಳ ಒಕ್ಕೂಟ. ಒಕ್ಕೂಟದಲ್ಲಿರುವವರೆಲ್ಲ ಮಾರ್ಕ್ಸಿಸ್ಟರಲ್ಲ. ಭಾರತ ಸಂವಿಧಾನದಡಿಯಲ್ಲಿ ಕೆಲಸ ಮಾಡುವ ರಾಜ್ಯ ಸರ್ಕಾರಗಳ ಅಧಿಕಾರಕ್ಕೆ ಬಹಳ ಮಿತಿಯಿದೆ ಆದ್ದರಿಂದ ಎಡರಂಗ ಸರ್ಕಾರ ಮಾಡಬಹುದಾದ ಕೆಲಸಗಳಿಗೂ ಮಿತಿಯಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇಂತಹ ಮಿತಿಯ ಒಳಗೇ ಜನಪರವಾದ ಕೆಲಸಗಳನ್ನು ಎಡರಂಗ ಸರ್ಕಾರ ಮಾಡಿದೆ.

ಭೂ ಸುಧಾರಣೆ:

ಎಡರಂಗ ಸರ್ಕಾರವು ತೀವ್ರತರವಾಗಿ ಭೂಮಿಗಾಗಿ ಹೋರಾಟ ನಡೆಸುತ್ತಿದ್ದ ಕೃಷಿ ಕೂಲಿಕಾರರು, ಬರ್ಗಾದಾರರು(ಅಂದರೆ ಪಾಲು ಬೆಳೆಗಾರರು) ಮತ್ತು ಸಣ್ಣ ರೈತರಿಗೆ ಪರಿಹಾರ ನೀಡಬಯಸಿತು. ಗ್ರಾಮೀಣ ಪ್ರದೇಶದ ಶೇ 75 ರಷ್ಟು ಜನ ಈ ಗುಂಪಿಗೆ ಸೇರಿದವರು.

ರಾಜ್ಯ ಸರ್ಕಾರದ ಬಳಿ 20.02 ಲಕ್ಷ ಎಕರೆ ಮಿಗುತಾಯ ಭೂಮಿ ಇದ್ದು ಎಡರಂಗ ಸರ್ಕಾರ 10.5 ಎಕರೆ ಭೂಮಿಯನ್ನು 23.53 ಲಕ್ಷ ಭೂರಹಿತ ರೈತರಿಗೆ ವಿತರಿಸಿತು. ಭೂರಹಿತ ರೈತರಿಗಾಗಿ ಕೆಳಗಿನ ಮೂರು ಕ್ರಮಗಳನ್ನು ಕೈಗೊಳ್ಳಲಾಯಿತು. ಅ) ಕನಿಷ್ಟ ಕೂಲಿಯನ್ನು ಜಾರಿಗೆ ತಂದದ್ದು , ಬ) ಕೆಲಸವಿಲ್ಲದ ತಿಂಗಳುಗಳಲ್ಲಿ ಕೆಲಸ ನೀಡಿದ್ದು ಕ) ಮನೆ ನಿವೇಶನಗಳನ್ನು ನೀಡಿದ್ದು.

ದಾಖಲೆಯ ಕನಿಷ್ಟ ಕೂಲಿ ಮತ್ತು ನಿಜ ಕೂಲಿಯ ನಡುವೆ ಬಹಳ ವ್ಯತ್ಯಾಸವಿರುತ್ತಿತ್ತು. ಇದನ್ನು ತೊಡೆದು ಹಾಕಲಾಯಿತು. ಸುಮಾರು 275000 ಕೃಷಿ ಕೂಲಿಕಾರರಿಗೆ ಮನೆ ನಿವೇಶಗಳನ್ನು ಹಂಚಲಾಗಿದೆ.

ಎರಡನೆಯ ಗುರಿಯೆಂದರೆ ಬರ್ಗಾದಾರರು (ಪಾಲು ಬೆಳೆಗಾರರು) ಇವನರ್ನು ಯಾವಗೆಂದರೆ ಆಗ ಒಕ್ಕಲೆಬ್ಬಿಸಲಾಗುತ್ತಿತ್ತು. ಇದನ್ನು ತಡೆಯಲು ಪ.ಬಂಗಾಳ ಪ್ರಗತಿಪರ ಭೂ ಸುಧಾರಣಾ



ಕೇಶಪುರದಲ್ಲಿ 50 ಸಶಸ್ತ್ರ ತೃಣಮೂಲ ಗೂಂಡಾಗಳ ಬಂಧನ

ಪಶ್ಚಿಮ ಬಂಗಾಳದಲ್ಲಿ ಜನತಾ ತೀರ್ಪು ತಿರುಚಲು ತೃಣಮೂಲ ಶತಪ್ರಯತ್ನ

ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಸಿಪಿಐ(ಎಂ) ನಾಯಕತ್ವದಲ್ಲಿ ಎಡಪ್ರಾಬಲ್ಯ ರಂಗ ಸರ್ಕಾರ ಪುನಃ ರಚಿಸದಂತೆ ಎಲ್ಲಾ ಪ್ರಯತ್ನಗಳನ್ನು ನಡೆಸುತ್ತಿವೆ. ಆಳುವ ವರ್ಗಗಳು, ಅವುಗಳ ಪಕ್ಷಗಳು, ಇದಕ್ಕೆ ಸಾಧ್ಯವಿರುವ ಎಲ್ಲಾ ಅಪ್ರಜಾಸತ್ತಾತ್ಮಕ ವಿಧಾನಗಳನ್ನು ಬಳಸುತ್ತಿದೆ. ಏಪ್ರಿಲ್ 30 ರಂದು ಮಿಡ್ನಾಪುರ ಜಿಲ್ಲೆಯ ಕೇಶಪುರ ಹಳ್ಳಿ ಯಲ್ಲಿ 60 ತೃಣಮೂಲ ಕಾಂಗ್ರೆಸ್‌ನ ಗೂಂಡಾ ಗಳು ನುಗ್ಗಿದ್ದು ಈ ಥರದ ಒಂದು ಸಂದರ್ಭ. ಆದರೆ 80 ದಿನ ಪನ್ಸ್ಕುರಾ ಉಪ ಚುನಾವಣೆ ಯಲ್ಲಿ ತೃಣಮೂಲ ಕಾಂಗ್ರೆಸ್ ನಡೆಸಿದ ಆಕ್ರಮಣ, ಹತ್ಯೆಗಳು ಈ ಬಾರಿ ನಡೆಯಲಿಲ್ಲ. ಆಗ ಇಡೀ ಹಳ್ಳಿಯನ್ನು ಬೆದರಿಸಿ, ತೃಣಮೂಲ ಚುನಾವಣೆ ಗೆದ್ದಿತ್ತು. ಆದರೆ ಈಗ ಎಚ್ಚೆತ್ತ ನಾಗರಿಕರು ಈ ತೃಣ ಮೂಲ ಗೂಂಡಾ ಗ್ಯಾಂಗನ್ನು ಸುತ್ತುವರಿದು, ಪೊಲೀಸಿಗೆ ಒಪ್ಪಿಸಿದರು. ಅವರಿಂದ ದೊಡ್ಡ ಪ್ರಮಾಣ ದಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳನ್ನು ವಶಪಡಿಸಿಕೊಳ್ಳಲಾಯಿತು. ಈ ಗೂಂಡಾಗಳು ತಮ್ಮನ್ನು ತೃಣಮೂಲ ಸಾಕುತ್ತಿದೆ ಎಂದು ಪೊಲೀಸರಿಗೆ ತಿಳಿಸಿದ್ದಾರೆ.

ಇದನ್ನು ಖಂಡಿಸಿ, ಇದಕ್ಕೆ ಜವಾಬ್ದಾರಿಯಾದ ತೃಣಮೂಲ ಕಾಂಗ್ರೆಸ್‌ನ್ನು ತರಾಟೆಗೆ ತೆಗೆದುಕೊಳ್ಳುವ ಬದಲು ಮುಚ್ಚಿಹಾಕಲು ಈ ರಾಜಾರೋಷದ ಪ್ರಯತ್ನಗಳ ಬಗ್ಗೆ ಜಾಣತನ ತಾಳಿವೆ. ಅದು ಸಾಲದೆಂಬಂತೆ, ತೃಣಮೂಲದ ಮಾನಮುಚ್ಚಿಕೊಳ್ಳುವ' ಸುಳ್ಳುಗಳಿಗೆ ಅಬ್ಬರದ ಪ್ರಚಾರ ನೀಡುತ್ತಿವೆ. 60 ಜನ ತೃಣಮೂಲ ಗೂಂಡಾಗಳ 50 ಜನ ಮಾತ್ರ ಸಿಕ್ಕಿಬಿದ್ದಿದ್ದು, ಉಳಿದವರು ಓಡಿ ಹೋಗಿದ್ದಾರೆ. ಸಿಪಿಐ(ಎಂ) ಕಾರ್ಯಕರ್ತರು ಅವರನ್ನು 'ಅಪಹರಿಸಿದ್ದಾರೆ' ಅಂತ ತೃಣಮೂಲದ ಹಸಿಸುಳ್ಳು. ಎಡರಂಗದ ಜತೆ ಹೋರಾಡುವ ನೆಪದಲ್ಲಿ ಸಾಮಾನ್ಯ ಜನತೆ ಮೇಲೆ ಹಿಂಸಾಚಾರ ಎಸಗುತ್ತಿರುವ ತೃಣಮೂಲಕ್ಕೆ ಭಾರಿ ಗುತ್ತೇದಾರಿ ಪತ್ರಿಕೆಗಳು ನೇರ ವಾತಾವರಣ ಸೃಷ್ಟಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ಅಣಕ ಮಾಡುತ್ತಿದ್ದಾರೆ. ಇದು ಈ ಪತ್ರಿಕೆಗಳ ಕಾಳಜಿ ಅಲ್ಲ, 10 ಜನ ತೃಣಮೂಲ ಕಾಂಗ್ರೆಸ್ ಗೂಂಡಾಗಳು ಎಲ್ಲಿ ಹೋದರು? ಅಂತ ಅವರ ಕಾಳಜಿ!

ಕಾಂಗ್ರೆಸ್ ಮತ್ತು ಬಿಜೆಪಿ ಈ ಬಗ್ಗೆ ಮೌನವಾಗಿರುವುದು ಏನೂ ಆಶ್ಚರ್ಯವಲ್ಲ. 70-77ರಲ್ಲಿ ಎಡರಂಗ ಮತ್ತು ಸಿಪಿಐ(ಎಂ) ಮೇಲೆ ಅರೆಫ್ಯಾಸಿಸ್ಟ್ ದಬ್ಬಾಳಿಕೆ ಹರಿಯಬಿಟ್ಟು 75-77ರಲ್ಲಿ ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್‌ದಿಂದ ಇನ್ನೇನು ಅಪೇಕ್ಷಿಸಲು ಸಾಧ್ಯ? ಇನ್ನು ಫ್ಯಾಸಿಸ್ಟ್ ಮೂಸೆಯಲ್ಲಿ ... ಬಿಜೆಪಿಯಂತೂ ತನಗೆ ರಾಜಕೀಯ ಲಾಭಕ್ಕಾಗಿ ಪ್ರಜಾಪ್ರಭುತ್ವ ಯಾಕೆ ಯಾವುದಕ್ಕೂ ತಿಲಾಂಜಲಿ ಕೊಡಲು ತಯಾರು.

ಪತ್ರಿಕೆಗಳು ಬರಿಯ ಅಪಪ್ರಚಾರ ಮಾತ್ರವಲ್ಲ, ಕೃತಕ ಅಭಿಪ್ರಾಯ ತಂತ್ರಗಳ ಮೂಲಕ ನೇರವಾಗಿ ಫಲಿತಾಂಶಗಳ ಮೇಲೆ ಪರಿಣಾಮ ಬೀರಲು ಪ್ರಯತ್ನಿಸುತ್ತಿವೆ. ಆನಂದ ಬಜಾರ್ ಪತ್ರಿಕಾ ಮತ್ತು ಸ್ಟೇಟ್ಸ್‌ಮನ್ ಪತ್ರಿಕೆಗಳು ಇಂತಹ ಆಟದಲ್ಲಿ ತೊಡಗಿವೆ. ಪ್ರಜಾಪ್ರಭುತ್ವ ಕಾಪಾಡಲು ಇಂತಹ ಪತ್ರಿಕೆಗಳ ಮೇಲೆ ಕಾನೂನುಕ್ರಮ ತೆಗೆದುಕೊಳ್ಳಬೇಕಾದ ಸಮಯ ಹತ್ತಿರಬರುತ್ತಿದೆ.

ಇದು ಮಾತ್ರವಲ್ಲ ರಾಷ್ಟ್ರೀಯ ಮಟ್ಟದಲ್ಲಿ ಕಡುವೈರಿಗಳಾದ ಕಾಂಗ್ರೆಸ್- ಬಿಜೆಪಿಗಳು ಕೇರಳ-ಪಶ್ಚಿಮ ಬಂಗಾಳಗಳಲ್ಲಿ ಎಡಪಕ್ಷಗಳನ್ನು ಸೋಲಿಸಲು ಕೈಮಿಲಾಯಿಸಿವೆ. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್, ಕೇಂದ್ರದ ಕೋಮುವಾದಿ ಎನ್.ಡಿ.ಎ. ದಲ್ಲಿ ಒಂದು ಕಾಲು ಇನ್ನೂ ಇಟ್ಟಿರುವ ತೃಣಮೂಲ ಕಾಂಗ್ರೆಸ್‌ನ ಜೂನಿಯರ್ ಪಾರ್ಟನರ್ ಆಗಲು ಒಪ್ಪಿಕೊಂಡಿದೆ. ಕೇರಳದಲ್ಲಿ ಕಾಂಗ್ರೆಸ್ ತೆಹೆಲ್ಕಾ ಬಗೆಗಾಗಲಿ, ಬಿಜೆಪಿ ಕೋಮು ವಾದದ ಚಕಾರವೆತ್ತುವುದಿಲ್ಲ, 10 ಕ್ಷೇತ್ರಗಳಲ್ಲಂತೂ ಬಿಜೆಪಿ ಕಾಂಗ್ರೆಸ್ ರಂಗಕ್ಕೆ ನೇರ ಬೆಂಬಲವನ್ನೇ, ಘೋಷಿಸಿ ರಾಷ್ಟ್ರೀಯಮಟ್ಟದಲ್ಲಿ ಉದಾರೀಕರಣ/ ಜಾಗತೀಕರಣದ ಬಗ್ಗೆ ಭಾರಿ ಟೀಕೆ ಮಾಡುವ ಕಾಂಗ್ರೆಸ್ ಈ ಎರಡು ರಾಜ್ಯಗಳಲ್ಲಿ ಜಾಣತನವಹಿಸಿದೆ. ಅದರ ಬಗ್ಗೆ ಚಕಾರವೆತ್ತಿದರೆ, ಎಡರಂಗಕ್ಕೆ ಬೆಂಬಲ ಏಡಿದಂತೆ ಎನ್ನುವುದು ಅವರ ಲೆಕ್ಕ.

ಆದರೆ ಈ ಎಲ್ಲಾ ಆಟಗಳು ಜನರಿಗೆ ಹೊಸದಲ್ಲ. ಹಿಂದೆಯೂ ಇಂತಹ ಪಿತೂರಿಗಳನ್ನು ಸೋಲಿಸಿ ಜನಪರ ಎಡರಂಗ ಸರ್ಕಾರಕ್ಕೆ ಮತ ನೀಡಿದ್ದಾರೆ.



ಗ್ರಾಮೀಣಾಭಿವೃದ್ಧಿಗೆ ಆದ್ಯತೆ

ಕಾಯಿದೆಯನ್ನು ತರಲಾಯಿತು. ತಾನೇ ಬೆಳೆದ ಕಾರಣದ ಮೇಲೆ ಪಾಲು ಬೆಳೆಗಾರರನ್ನು ಒಕ್ಕಲೆಬ್ಬಿಸುವುದು ಈ ಕಾನೂನಿನ ಪ್ರಕಾರ ಕಷ್ಟಕರ. ಜಮೀನುದಾರ ಇದಕ್ಕೆ ಸಾಕಷ್ಟು ಪುರಾವೆ ನೀಡಬೇಕಾಗುತ್ತದೆ. ಆತ 8 ಕಿ.ಮಿ. ದೂರದ ಒಳಗೆ ವಾಸಿಸಬೇಕು. ಜಮೀನನ್ನು ವಾಪಸ್ಸು ಪಡೆದರೆ ಆತನೇ ಅದರ ಸಾಗುವಳಿ ಮಾಡಬೇಕು. ಆತನ ಕುಟುಂಬದ ಸದಸ್ಯರೂ ಇದನ್ನು ಮಾಡಬಹುದು.

ಇದಲ್ಲದೆ ಬರ್ಗಾದಾರರಿಗೆ ಪಿತ್ರಾರ್ಜಿತವಾಗಿ ಹಕ್ಕು ಬರುತ್ತದೆ. ಸಾಗುವಳಿಗಾರರನ್ನು ಬರ್ಗಾದಾರನೆಂದು ಗುರುತಿಸಿದ ಮೇಲೆ ಆತ ಬರ್ಗಾದಾರನಲ್ಲವೆಂದು ಪುರಾವೆ ಸಹಿತ ಸ್ಥಾಪಿಸುವ ಕೆಲಸ ಜಮೀನುದಾರನದು. 1995 ರ ವರೆಗೆ 14.74 ಪಾಲು ಬೆಳೆಗಾರರ ಹೆಸರು ನಮೂದಿಸಲಾಗಿದೆ. ರಾಜ್ಯದ 42067 ಮೌಝಾಗಳ ಪೈಕಿ 35567 ಮೌಝಾಗಳ ಹಕ್ಕುಗಳನ್ನು ಪ್ರಕಟಿಸಲಾಗಿದೆ.

ಇದರ ಜೊತೆಗೆ ಪಾಲು ಬೆಳೆಗಾರರು ಸ್ಥಳೀಯ ಲೇವಾದೇವಿಗಾರರ ಮೇಲೆ ಅವಲಂಬಿಸುವುದನ್ನು ತಪ್ಪಿಸಲಾಗಿದೆ. ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳ ಮೂಲಕ ಸಾಲ ದೊರೆವ ವ್ಯವಸ್ಥೆ ಮಾಡಲಾಗಿದೆ. ನಾಲ್ಕು ಎಕರೆವರೆಗೆ ನೀರಾವರಿ ಭೂಮಿ ಇರುವ ಹಾಗೂ 6 ಎಕರೆ ವರೆಗೆ ನೀರಾವರಿರಹಿತ ಭೂಮಿ ಇರುವವರು ಭೂತೆರಿಗೆ ನೀಡುವ ಅವಶ್ಯಕತೆ ಇಲ್ಲ. ಇದಲ್ಲದೆ ಕೃಷಿಲಾಗುವಾಡುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಿಸಲಾಗುತ್ತಿವೆ.

ಇದರಿಂದಾಗಿ ಒಂದೇ ಬೆಳೆ ಬೆಳೆವ ಬಹುತೇಕ ಪ್ರದೇಶಗಳು ಎರಡು ಬೆಳೆ ಬೆಳೆವ ಪ್ರದೇಶಗಳಾಗಿ ಪರಿವರ್ತಿತವಾಗಿವೆ.

ಪಂಚಾಯತಿ ರಾಜ್ ವ್ಯವಸ್ಥೆ

ಪಂಚಾಯತಿ ರಾಜ್ ವ್ಯವಸ್ಥೆಯ ಮೂಲಕ ಅಧಿಕಾರದ ವಿಕೇಂದ್ರೀಕರಣ ಸಾಧಿಸಲಾಗಿದೆ. ಹಿಂದಿನ ಸಂಯುಕ್ತ ರಂಗ ಸರ್ಕಾರ ಪಂಚಾಯತ್ ರಾಜ್ ವ್ಯವಸ್ಥೆಯ ಅನುಷ್ಠಾನಗೊಳಿಸಲು ವಿಚಾರ ಮಾಡಿತು. ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪೂರ್ಣ ಉತ್ಸಾಹದಿಂದ ಇದನ್ನು ಕಾರ್ಯಗತಗೊಳಿಸಲಾಯಿತು. 1978 ರಲ್ಲಿ ಮೊದಲ ಬಾರಿಗೆ ರಾಜಕೀಯ ಪಕ್ಷಗಳು ತಮ್ಮ ಬಾವುಟ ಬ್ಯಾನರುಗಳ ಜೊತೆಗೆ ಚುನಾವಣೆಯಲ್ಲಿ ಭಾಗವಹಿಸಿದವು. 1983 ರಲ್ಲಿ ಎಡರಂಗ ಸರ್ಕಾರ ಮತ್ತೆ ಬಹುತೇಕ ಪಂಚಾಯತಿಗಳಲ್ಲಿ ಅಧಿಕಾರಕ್ಕೆ ಬಂತು. ಅನಂತರ ಇದು ಮುಂದುವರೆಯುತ್ತಲೇ ಇದೆ. ದೇಶದಲ್ಲೇ ಒಂದು ವಿಶಿಷ್ಟ ಪ್ರಯೋಗವೆಂದು ಪ್ರಶಂಸೆಗೆ ಒಳಗಾಗಿದೆ.

ಗ್ರಾಮೀಣಾಭಿವೃದ್ಧಿ ನೀತಿಯಲ್ಲಿ ಪಂಚಾಯತಿ ರಾಜ್

ಸರ್ಕಾರದ ವಿವಿಧ ಯೋಜನೆಗಳನ್ನು ಕಾರ್ಯಾನುಗತಗೊಳಿಸುವಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಹುಮುಖ್ಯ ಪಾತ್ರ ವಹಿಸಿದೆ. ಪಂಚಾಯತ್ ಸಮಿತಿಯ ಮಟ್ಟದಲ್ಲಿ ಒಂದು ಸ್ಥಾಯೀ ಸಮಿತಿಯಿದ್ದು ಅದು ಗ್ರಾಮ ಪಂಚಾಯತದ ನೆರವಿನಿಂದ ಭೂಮಿ ವಿತರಿಸಬೇಕಾದವರನ್ನು ಗುರುತಿಸುತ್ತದೆ. ಈ ಮೂಲಕ ಮಾಡಿದ ಭೂ ವಿತರಣೆಯಿಂದ ಗ್ರಾಮೀಣ ಪ್ರದೇಶದ ಶೇ 21 ರಷ್ಟು ಕುಟುಂಬಗಳು ಲಾಭ ಪಡೆದಿವೆ. ಕೃಷಿ ಭೂಮಿಯ ಒಟ್ಟು ಶೇ 60 ರಷ್ಟು ಭೂಮಿಯನ್ನು ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ ಇದು ಬರೀ ಶೇ 29 ರಷ್ಟು ಎಂದರೆ ಪ.ಬಂಗಾಳದ ಸಾಧನೆಯ ಪ್ರಮಾಣ ಅರ್ಥವಾದೀತು.

ಪಂಚಾಯತದ ಮೂಲಕವೇ ರೈತರು ನೀರಾವರಿ, ಕೃಷಿ ಸಲಕರಣೆಗಳು, ಗೊಬ್ಬರ, ರಸಗೊಬ್ಬರ, ಸಾಲ, ತಂತ್ರಜ್ಞಾನಗಳನ್ನು ಪಡೆಯುತ್ತಾರೆ.

1978 ರ ಪ್ರವಾಹದ ನಂತರ ಪಂಚಾಯತದ ಮೂಲಕ ಕೆಲಸಕ್ಕಾಗಿ ಆಹಾರ ಕಾರ್ಯಕ್ರಮ ಬಹು ಯಶಸ್ವಿ ಕಾರ್ಯಕ್ರಮವೆಂದೆ ಎಲ್ಲ ಕಡೆಗಳಿಂದ ಹೊಗಳಿಕೆ ಪಡೆಯಿತು. ಕೇಂದ್ರ ಸರ್ಕಾರದ ಯೋಜನೆಗಳನ್ನು ಈಗ ಪಂಚಾಯತ್‌ಗಳೇ ಮೇಲ್ವಿಚಾರಣೆ ಮಾಡುತ್ತವೆ.

ಗ್ರಾಮೀಣ ಅಭಿವೃದ್ಧಿ ಯೋಜನೆ ಮತ್ತು ಪಂಚಾಯತು

ಪ.ಬಂಗಾಳದಲ್ಲಿ ವಿಕೇಂದ್ರೀಕೃತ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ರಾಜ್ಯದ ಯೋಜನಾ ವೆಚ್ಚದ ಶೇ 50 ರಷ್ಟನ್ನು ಜಿಲ್ಲಾ ಮತ್ತು ತಾಲೂಕು ಮಟ್ಟಗಳಲ್ಲೇ ನಿರ್ಧರಿಸಲಾಗುತ್ತದೆ. ಇದಲ್ಲದೇ 1992 ರಿಂದ ವಿಕೇಂದ್ರೀಕೃತ ಸಂಪನ್ಮೂಲ ಸಂಗ್ರಹಣೆಯೂ ನಡೆಯುತ್ತದೆ. ಈ ಕೆಳಗಿನ ತೆರಿಗೆಗಳ ಸಂಗ್ರಹಣೆ ಗುರಿಯ ಶೇ 50 ಅನ್ನು ಮೀರಿದರೆ ಹೆಚ್ಚಿನ ಸಂಗ್ರಹಣೆಯನ್ನು ಅದೇ ಜಿಲ್ಲೆಯಲ್ಲಿ ವಿನಿಯೋಗಿಸಲಾಗುತ್ತದೆ. ರಿಜಿಸ್ಟ್ರೇಷನ್ ಶುಲ್ಕ, ವಾಹನ ಶುಲ್ಕ ಇತ್ಯಾದಿ.

ಗ್ರಾಮೀಣ ಆರ್ಥಿಕದಲ್ಲಿನ ಬದಲಾವಣೆ

ಈ ಎಲ್ಲ ಕಾರ್ಯಕ್ರಮಗಳ ಪರಿಣಾಮವೇನು? ರಾಜ್ಯದ ಇಳುವರಿ ಶೇ 6.5 ರ ದರದಲ್ಲಿ ಬೆಳವಣಿಗೆಯಿರುವ ಆಹಾರ ಧಾನ್ಯದ ಬೆಳವಣಿಗೆ ಪ್ರಮಾಣ ದೇಶದಲ್ಲೇ ಅತಿ ಹೆಚ್ಚಿನದಾಯಿತು. 1992-93 ರಲ್ಲಿ ರಾಜ್ಯದ ಆಂತರಿಕ ಉತ್ಪಾದನೆ ಶೇ 4.3 ರಷ್ಟು ಹೆಚ್ಚಾಯಿತು. ರಾಷ್ಟ್ರೀಯ ಸರಾಸರಿ ಸೇ 4 ರಷ್ಟು. ದೇಶದ ಶೇ 2 ರಷ್ಟು ಭೂಮಿ ಹೊಂದಿರುವ ಪ.ಬಂಗಾಳ ದೇಶದ ಶೇ 8 ರಷ್ಟು ಜನಸಂಖ್ಯೆಯ ಪಾಲು ಹೊಂದಿದೆ. ಕೃಷಿ ಉತ್ಪಾದಕತೆ ಹೆಚ್ಚಿದ್ದರಿಂದಲೇ ಇಷ್ಟು ದೊಡ್ಡ ಜನಸಂಖ್ಯೆಯನ್ನು ಸಾಕುವುದು ಸಾಧ್ಯವಾಗಿದೆ. 1980 ರ ವೇಳೆಗೆ ರಾಜ್ಯದ ಕೃಷಿ ಬೆಳವಣಿಗೆ ದೇಶದ ಕೃಷಿ ಬೆಳವಣಿಗೆಗಿಂತ ಕಡಿಮೆಯಾಗಿತ್ತು. ಇದು ಇಂದು ಈ ರಾಜ್ಯ ಭಾರತದ ಕೆಳಗಿನ ಬೆಳೆಗಳ ಉತ್ಪಾದನೆಯ ಶೇ 8 ಉತ್ಪಾದನೆಯನ್ನು ಮಾಡುತ್ತದೆ.

ಬೆಳೆ ಭಾರತದ ಒಟ್ಟಾರೆ ಉತ್ಪಾದನೆಯ ಶೇ ಪ.ಬಂಗಾಳ ರಾಜ್ಯ ಉತ್ಪಾದಿಸುವುದು

ಭತ್ತ	15.8
ಆಲೂಗಡ್ಡೆ	30.4
ಎಳ್ಳು	10.7
ಸಾಸಿವೆ	6
ಸೆಣಬು	60.5
ಚಹ	21.3

ರಾಷ್ಟ್ರೀಯ ಉತ್ಪಾದಕತಾ ಮಂಡಳಿಯ ಪಾರಿತೋಷಕವನ್ನು ಪ.ಬಂಗಾಳ 9 ಬಾರಿ ಸತತವಾಗಿ ಪಡೆದಿರುವುದು ಈ ಸಾಧನೆಯಿಂದಾಗಿಯೇ.

ಆರೋಗ್ಯ ಮತ್ತು ವಸತಿ

ಎಲ್ಲರಿಗೂ ಆರೋಗ್ಯ ಕಾರ್ಯಕ್ರಮದ ಹಲವು ಜನಪರ ಕೆಲಸಗಳು ಆಗಿದೆ. ಆಯುರ್ವೇದ, ಹೊಮಿಯೋಪತಿ ಮತ್ತು ಗಿಡಮೂಲಿಕಾ ವೈದ್ಯ ಪದ್ಧತಿಗಳಿಗೆ ರಾಜ್ಯ ಸರ್ಕಾರ ಬೆಂಬಲ ನೀಡಿದೆ.



ಶಿಕ್ಷಣಕ್ಕೆ ವಿಶೇಷ ಗಮನ

ಕುಟುಂಬ ಯೋಜನಾ ಕಾರ್ಯಕ್ರಮಗಳಿಗೂ ಹೆಚ್ಚಿನ ಹಣಕಾಸು ನೆರವು ನೀಡಲಾಗುತ್ತಿದೆ.

ಸಂಪನ್ಮೂಲಗಳ ಕೊರತೆಯ ನಡುವೆಯೂ ವಸತಿ ಸೌಲಭ್ಯ ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಕಲ್ಕತ್ತಾದಲ್ಲಿ 3 ಲಕ್ಷ ಬಸ್ತಿವಾಸಿಗಳಿಗೆ ವಸತಿ ನೀಡಲಾಗಿದೆ. ರಾಜ್ಯದಾದ್ಯಂತ ವಸತಿಗಳನ್ನು ವಸತಿ ಹೀನರಿಗೆ ವಿತರಿಸುವ ಕೆಲಸ ನಡೆದಿದೆ.

ಇವಲ್ಲದೆ ಹಲವು ಸಾಮಾಜಿಕ ಸೇವೆಗಳನ್ನು ಸರ್ಕಾರ ಜನತೆಗೆ ಲಭ್ಯವಾಗುವಂತೆ ಮಾಡಿದೆ. ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರಿಗೆ ಸಹಾಯವಾಗುವ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿದೆ.

ಉದ್ದಿಮೆಗಳು

ಬ್ರಿಟಿಷರ ಆಡಳಿತ ಮತ್ತು ಸ್ವಾತಂತ್ರ್ಯಾನಂತರದ ಕೆಲದಿನ ಬಂಗಾಳ ಔದ್ಯಮಿಕವಾಗಿ ಪ್ರಮುಖ



ಔದ್ಯಮಿಕ ಬೆಳವಣಿಗೆಯೇನೂ ಹಿಂದೆ ಬಿದ್ದಿಲ್ಲ

ಸ್ಥಾನದಲ್ಲಿತ್ತು. ಆದರೆ ಬಂಗಾಳವನ್ನು ಧರ್ಮದ ಆಧಾರದ ಮೇಲೆ ವಿಭಜಿಸಿದ ಮೇಲೆ ಪೂರ್ವ ಪಾಕಿಸ್ತಾನದಿಂದ ನಿರಾಶ್ರಿತರು ಬಂದು ಬಂಗಾಳದ ಆರ್ಥಿಕದಲ್ಲಿ ಏರುಪೇರಾಯಿತು. ಭಾರತ ಸರ್ಕಾರ ಇಂತಹ ಪರಿಸ್ಥಿತಿಯನ್ನು ಸುಧಾರಿಸುವ ಯಾವುದೇ ಪ್ರಯತ್ನ ಮಾಡಲಿಲ್ಲ. ಉದ್ದಿಮೆಗಳು ಮತ್ತು ಹಣಕಾಸು ಸಂಸ್ಥೆಗಳು ಕೇಂದ್ರ ಸರ್ಕಾರದ ಪಟ್ಟಿಗೆ ಸೇರಿದ್ದರಿಂದ ರಾಜ್ಯ ಸರ್ಕಾರಗಳು ಹೆಚ್ಚಿನದೇನನ್ನು ಮಾಡುವಂತಿರಲಿಲ್ಲ. ಬಂಗಾಳಕ್ಕೆ ಔದ್ಯಮಿಕ ಲೈಸೆನ್ಸುಗಳನ್ನು ವಿಳಂಬಿಸಲಾಯಿತು. ಫ್ರೈಟ್ ಇಕ್ವಲೈಸೇಷನ್ (Freight eqialisation) ಸಹ ಬಂಗಾಳದ ಹಿತಾಸಕ್ತಿಗಳ ವಿರುದ್ಧವೇ ಆಗಿತ್ತು. ಬ್ಯಾಂಕುಗಳ ಸಾಲ-ಠೇವಣಿ ಅನುಪಾತ ಬಂಗಾಳಕ್ಕೆ ಶೇ 465 ಕ್ಕಿಂತ ಕಡಿಮೆ ಇತ್ತು.

ಎಡರಂಗ ಸರ್ಕಾರ 1977 ರಲ್ಲಿ ಅಧಿಕಾರಕ್ಕೆ ಬಂದನಂತರ ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಒತ್ತು ನೀಡಿತು. ಜಾಗತೀಕರಣ ಮತ್ತು ಹೊಸ ಆರ್ಥಿಕ ನೀತಿ ಸರ್ಕಾರ ತನ್ನ ನಿಲುವನ್ನು ಬದಲಿಸುವಂತೆ ಮಾಡಿತು. ಆದರೆ ಪ.ಬಂಗಾಳ ಸರ್ಕಾರ ಲಗಾಮುರಹಿತವಾಗಿ ಹೊರಗಿನ ಹೂಡಿಕೆಯನ್ನು ರಾಜ್ಯದೊಳಗೆ ಬಿಡಲು ಸಿದ್ಧವಿಲ್ಲ. ಜ್ಯೋತಿಬಸು ಅವರ ಮಾತಿನಲ್ಲಿ ಹೇಳುವುದಾದರೆ

"ಸರ್ಕಾರ ಹೊಸ ತಂತ್ರಜ್ಞಾನ ಮತ್ತು ಆಯ್ದ ಕ್ಷೇತ್ರಗಳಲ್ಲಿ ಹೊರಗಿನ ಹೂಡಿಕೆಗೆ ವಿರುದ್ಧವಾಗಿಲ್ಲ, ಅವು ನಮ್ಮ ಆರ್ಥಿಕಕ್ಕೆ ನೆರವಾಗುವಂತಿರಬೇಕು. ಸ್ವಾವಲಂಬನೆಯ ಗುರಿ ಬಹಳ ಮುಖ್ಯವಾದದ್ದು; ಸರ್ಕಾರಿ, ಖಾಸಗಿ ಮತ್ತು ಜಂಟಿ ಹೂಡಿಕೆಗಳೆಲ್ಲವೂ ಇವೆ. ಎಲ್ಲಕ್ಕೂ ಅವುಗಳದ್ದೇ ಆದ ಸ್ಥಾನವಿದೆ."

ರಾಜ್ಯ ಸರ್ಕಾರದ ಔದ್ಯಮಿಕ ನೀತಿಯ ಮುಖ್ಯಾಂಶಗಳು ಕೆಳಗಿನಂತಿವೆ.

ಅ) ರಾಜ್ಯ ಸರ್ಕಾರ ವಿದೇಶಿ ಹೂಡಿಕೆಯನ್ನು ಸ್ವಾಗತಿಸುತ್ತದೆ. ಆದರೆ ಅದು ಸರಿಯಾದದ್ದು ಮತ್ತು ಪರಸ್ಪರ ಲಾಭದಾಯಕವಾದದ್ದಾಗಿರಬೇಕು.

ಬ) ಸರ್ಕಾರ ಮತ್ತು ಸಾರ್ವಜನಿಕ ವಲಯಗಳೆರಡೂ ಸಾಮಾಜಿಕ ನ್ಯಾಯ ಮತ್ತು ಸಮತೋಲನ ಬೆಳವಣಿಗೆ ಅವಶ್ಯ ಎಂದು ರಾಜ್ಯ ಸರ್ಕಾರ ಪರಿಗಣಿಸಿದರೂ ಖಾಸಗೀ ವಲಯ ವೇಗದ ಬೆಳವಣಿಗೆಗೆ ಮುಖ್ಯವಾದದ್ದು ಎಂಬುದನ್ನು ಅದು ಕಂಡುಕೊಂಡಿದೆ. ವಿದ್ಯುತ್‌ನಂತಹ ಬಹುಮುಖ್ಯ ಉದ್ದಿಮೆಯಲ್ಲಿ ಸಾರ್ವಜನಿಕ ವಲಯದ ಪಾತ್ರವೇ ಬಹುಮುಖ್ಯವಾದದ್ದು. ಇದು ಶಕ್ತಿಯ ಬೆಲೆಯನ್ನು ನಿಯಂತ್ರಣದಲ್ಲಿಡಲು ಸಹಾಯ. ಆದರೆ ಭಾರತ ಸರ್ಕಾರದ ಬದಲಾದ ನೀತಿಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಸೀಮಿತ ಸಂಪನ್ಮೂಲಗಳ ಹಿನ್ನೆಲೆಯಲ್ಲಿ ಖಾಸಗಿ ಹೂಡಿಕೆಯನ್ನು ರಾಜ್ಯ ಸರ್ಕಾರ ಸ್ವಾಗತಿಸುತ್ತದೆ.

ಕ) ಖಾಸಗಿ ಮತ್ತು ಸಾರ್ವಜನಿಕ ವಲಯದ ಜೊತೆಗೆ ಜಂಟಿ ವಲಯವು ಸಂಪನ್ಮೂಲ ಸಂಗ್ರಹಣೆ, ಪರಿಣತಿಯ ಒಟ್ಟುಗೂಡಿಸುವಿಕೆಗೆ ಸಹಕಾರ.

ಡ) ಖಾಸಗಿ ರೋಗಗ್ರಸ್ತ/ಮುಚ್ಚಿದ ಘಟಕಗಳ ಬಗ್ಗೆ ಹೇಳುವುದಾದರೆ ರಾಜ್ಯ ಸರ್ಕಾರ ಇವುಗಳ ಪುನರುಜ್ಜೀವನ, ಆದಷ್ಟು ಬೇಗ ಆಗಬೇಕು ಮತ್ತು ಸಂಬಂಧಿಸಿದ ಎಲ್ಲರೂ ರಾಜ್ಯ ಸರ್ಕಾರವೂ ಸೇರಿದಂತೆ ತ್ಯಾಗದ ಅವಶ್ಯಕತೆ ಇದ್ದಲ್ಲಿ ಮಾಡಬೇಕು ಎಂದು ಭಾವಿಸುತ್ತದೆ.

ಲಭ್ಯವಿರುವ ಅವಕಾಶಗಳನ್ನು ಗಣನೆಗೆ ತೆಗೆದುಕೊಂಡು ರಾಜ್ಯ ಸರ್ಕಾರ ಕೆಲವು ಉದ್ದಿಮೆಗಳಿಗೆ ಒತ್ತು ನೀಡಿದೆ. ಅವುಗಳೆಂದರೆ

i. ಪೆಟ್ರೋಲಿಯಂ ರಸಾಯನಿಕಗಳು ಮತ್ತು ಅದಕ್ಕೆ ಸಂಬಂಧಿತ ಉದ್ದಿಮೆಗಳು
ii. ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ
iii. ಕಬ್ಬಿಣ ಮತ್ತು ಉಕ್ಕು, ಲೋಹ ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್
iv. ಜವಳಿ
v. ಚರ್ಮ ಮತ್ತು ಚರ್ಮದ ಉತ್ಪನ್ನಗಳು
vi. ಆಹಾರ ಸಂಸ್ಕರಣ, ಖಾದ್ಯ ತೈಲ, ತರಕಾರಿ ಸಂಸ್ಕರಣ ಮತ್ತು ಮೀನುಗಾರಿಕೆ
vii. ಔಷಧೀಯ ಸಸ್ಯಗಳು, ರಬ್ಬರ್, ತಾಳೆ ಎಣ್ಣೆ, ಚಹ
viii. ಮೂಲಭೂತ ಔಷಧಗಳ ಉತ್ಪಾದನೆ, ರಸಾಯನಿಕಗಳು
ix. ಆಭರಣ ಮತ್ತು ಆಭರಣ ಆಧಾರಿತ ಉದ್ದಿಮೆಗಳ ಅಭಿವೃದ್ಧಿ
x ಆಭರಣ ಉತ್ಪಾದನೆ
xi ಪ್ರವಾಸೋದ್ಯಮ ಮತ್ತು ಸಂಬಂಧಿತ

ಪುಟ 10 ಕ್ಕೆ

………. ಪುರಸಭಾ ಚುನಾವಣೆಗಳು

ಪುಟ 3 ರಿಂದ

ಬಿಜೆಪಿಯ ಕೋಮುವಾದಿ ಪ್ರಚಾರಕ್ಕೆ ಸ್ವಲ್ಪ ಕಾಲ ನಾವು ಕಿವಿಗೊಟ್ಟಾಗಲೂ ನಮ್ಮ ಆಶಯ ನಮ್ಮ ಜೀವನವನ್ನು ಉತ್ತಮಗೊಳಿಸಿಕೊಳ್ಳುವುದೇ ಆಗಿತ್ತು. ಈಗ ಕೋಮುವಾದಿ ಆಶಯವನ್ನು ನಾವು ತಿರಸ್ಕರಿಸಲು ಸಿದ್ಧರಿದ್ದೇವೆ ಎಂದು ಕರ್ನಾಟಕದ ಜಾತ್ಯಾತೀತ ಪಕ್ಷಗಳಿಗೆ ಹೇಳುತ್ತಿದ್ದಾರೆ.

ಕಾಂಗ್ರೆಸ್‌ನ ಗೆಲುವಿಗೆ ಕಾರಣವೇನು?

ಇನ್ನು ಕಾಂಗ್ರೆಸ್‌ನ ವಿಷಯ. ಸ್ಪರ್ಧೆಯಲ್ಲಿದ್ದ 3720 ಸ್ಥಾನಗಳಲ್ಲಿ ಕಾಂಗ್ರೆಸ 1710 ಸ್ಥಾನಗಳನ್ನು ಗಳಿಸಿಕೊಂಡಿದೆ. 4 ಮಹಾನಗರ ಪಾಲಿಕೆಗಳಲ್ಲಿ ಹಿಂದಿನ ಬಾರಿ ಕೇವಲ 22 ಸ್ಥಾನ ಪಡೆದಿದ್ದ ಕಾಂಗ್ರೆಸ್ ಇಂದು 69 ಕ್ಕಿಂತಲೂ ಹೆಚ್ಚು ಸ್ಥಾನ ಪಡೆದಿದೆ. ಈಗಾಗಲೇ ಹೇಳಿದಂತೆ ಕಾಂಗ್ರೆಸ್ ಹೆಮ್ಮೆಯಿಂದ ಬೀಗುತ್ತಿದ್ದಾರೆ, ವಿರೋಧ ಪಕ್ಷಗಳು ಇದು ಕೇವಲ ಸಹಜ, ರಾಜ್ಯದಲ್ಲಿ ಯಾವ ಪಕ್ಷ ಅಧಿಕಾರದಲ್ಲಿದೆಯೋ ಅದೇ ಪಕ್ಷ ನಗರಸಭಾ ಚುನಾವಣೆಗಳಲ್ಲಿಯೂ ಗೆಲ್ಲುತ್ತವೆ, ಹಿಂದೆಯೂ ಹಾಗೆಯೇ ಆಗಿದೆ. 1996 ರಲ್ಲಿ ಜ.ದಳ ಹೆಚ್ಚು ಸ್ಥಾನಗಳನ್ನು ಪಡೆದಿರಲಿಲ್ಲವೇ - ಎಂಬ ವಾದಗಳನ್ನು ಟಿ.ವಿ.-ಪತ್ರಿಕೆಗಳ ಚರ್ಚೆಗಳಲ್ಲಿ ಮುಂದಿಡುತ್ತಿದ್ದಾರೆ.

ಕಾಂಗ್ರೆಸ್ ಪಕ್ಷವನ್ನು ಹೆಚ್ಚು ಸ್ಥಾನಗಳಿಗೆ ಆಯ್ಕೆ ಮಾಡಿ ಕರ್ನಾಟಕದ ನಗರಗಳ ಜನತೆ ತಮ್ಮ ದೈನಂದಿನ ನಾಗರಿಕ ಸಮಸ್ಯೆಗಳನ್ನು ನಿರ್ವಹಿಸುವ ಜವಾಬುದಾರಿಯನ್ನು ಅವರಿಗೇ ವಹಿಸಿದ್ದಾರೆ. ಇದು ಇಂದಿನ ನಗರಸಭೆ, ಪುರಸಭೆಗಳ ಸ್ಥಿತಿಯ ಬಗೆಗಿನ ವ್ಯಾಖ್ಯಾನವೇ ಹೊರತು ಕಾಂಗ್ರೆಸ್‌ನ ಹೆಚ್ಚುಗಾರಿಕೆ ಏನೂ ಇಲ್ಲ. ನಗರಗಳಲ್ಲಿ ನೀರು, ಬೀದಿ ದೀಪಗಳಿರಲಿ ಕಸ ಗುಡಿಸುವುದಕ್ಕೆ ಹಣ ಬೇಕಾದರೂ ರಾಜ್ಯ ಸರ್ಕಾರಕ್ಕೆ ಮೊರೆ ಹೋಗಬೇಕಾಗಿರುವ ರಾಜ್ಯ ಸರ್ಕಾರಕ್ಕೂ ಇದು ಸಾಧ್ಯವಿಲ್ಲ. ಆದರೆ ರಾಜ್ಯ ಸರ್ಕಾರದ ಮೂಲಕ ವಿಶ್ವಬ್ಯಾಂಕ್ ಅಥವಾ ಯಾವುದೋ ಜಪಾನ್, ನೆದರ್ ಲ್ಯಾಂಡ್, ಸರ್ಕಾರಗಳ ಕೃಪೆಯಿಂದಲೇ ಆಗಬೇಕಾಗಿದೆ ಎನ್ನುವ ಪರಿಸ್ಥಿತಿಗೆ ಈ ನಗರಸಭೆಗಳನ್ನು ದೂಡಲಾಗಿದೆ. ಜನತೆಗೆ ಅತ್ಯಂತ ಹತ್ತಿರವಿರುವ ಅವರ ಅತಿಹೆಚ್ಚಿನ ಸಮಸ್ಯೆಗಳಿಗೆ ಹೊಣೆಗಾರರಾಗಿರುವ ಈ ಸಂಸ್ಥೆಗಳನ್ನು ಈ ದುಸ್ಥಿತಿಗೆ ದೂಡಿರುವ ಕಾಂಗ್ರೆಸ್ ಪಕ್ಷವೇ ಇಂದು ಅವರಿಗೆ ಅನಿವಾರ್ಯವಾಗಿದೆ - ಈ ಪರಾವಲಂಬಿ ಸ್ಥಿತಿಯಲ್ಲಿ.

ಇಂತಹ ಪರಾವಲಂಬಿ ಸ್ಥಿತಿಯಲ್ಲಿ ಕೂಡ ಕರ್ನಾಟಕದ ನಗರಗಳ ಮತದಾರ ಮುಖ್ಯವಾದ **ನಾಲ್ಕು ನಗರಪಾಲಿಕೆಗಳಲ್ಲಿಯೂ ಕಾಂಗ್ರೆಸ್‌ಗೆ ಅಧಿಕಾರ ನೀಡಲು ನಿರಾಕರಿಸಿದ್ದಾರೆ. ತಾವು ಇನ್ನೂ ಕಾಂಗ್ರೆಸ್‌ನ ದುರಾಡಳಿತದ ವಿರೋಧಿ ಎಂಬುದನ್ನು ಸಾರಿದ್ದಾರೆ.** ಇನ್ನೂ ಅನೇಕ ನಗರ, ಪುರಸಭೆಗಳಲ್ಲಿಯೂ ಕಾಂಗ್ರೆಸ್‌ಗೆ ಅಧಿಕಾರ ನೀಡಲು ನಿರಾಕರಿಸಿದ್ದಾರೆ.

ಹೀಗೆ **ಕರ್ನಾಟಕದ ಬಹುಪಾಲು ನಗರ ಪಟ್ಟಣಗಳ ಮತದಾರರು ಬಿಜೆಪಿಯನ್ನು ನಿರಾಕರಿಸಿದ್ದಾರೆ.** ಕೇವಲ ರಾಜ್ಯ ಸರ್ಕಾರದ ಕೃಪೆಗಾಗಿ ಕಾಂಗ್ರೆಸ್ಸನ್ನು ಪುರಸಭೆ ನಗರಸಭೆಗಳಿಗೆ ಆಯ್ಕೆ ಮಾಡಿದ್ದಾನೆ. ಇಂತಹ ಕೃಪೆಯ ಜರೂರಿಲ್ಲದ, ಆರ್ಥಿಕವಾಗಿ ಸ್ವಲ್ಪ ಶಕ್ತವಾದ ಮಹಾನಗರಗಳ ಮತದಾರ ಕಾಂಗ್ರೆಸ್ಸನ್ನೂ ನಿರಾಕರಿಸಿ ತಾನು ಬಿಜೆಪಿ ಹಾಗೂ ಕಾಂಗ್ರೆಸ್ ಎರಡಕ್ಕೂ ವಿರೋಧಿಯಾಗಿದ್ದೇನೆ ಎಂದು ಘೋಷಿಸಿದ್ದಾನೆ. **ಈ ಕಾಂಗ್ರೆಸ್ -ಬಿಜೆಪಿ ವಿರೋಧಿ ಭಾವನೆ ಕರ್ನಾಟಕದ ಪ್ರಜಾಸತ್ತಾತ್ಮಕ ಶಕ್ತಿಗಳಿಗೊಂದು ಸವಾಲು. ದುಡಿಯುವ ಜನರ ಪಕ್ಷಗಳಿಗೊಂದು ಆಹ್ವಾನ.** ಅದನ್ನು ಕೈಗೆತ್ತಿಕೊಳ್ಳಬೇಕಾಗಿದೆ. **ಈ ಮತದಾರರ ರಾಜಕೀಯ ಬೆಳವಣಿಗೆಯನ್ನು ಕಾಂಗ್ರೆಸ್ ಬಿಜೆಪಿ ವಿರೋಧಿ ಮಾತ್ರವಲ್ಲ - ಪರ್ಯಾಯ ಧೋರಣೆಗಳಿಗಾಗಿ ಎಂಬ ಪ್ರಗತಿಯನ್ನು ಸಾಧಿಸಬೇಕಾಗಿದೆ.**

ಜನತಾದಳ: ಇಂತಹ ಆಹ್ವಾನವನ್ನು ನಗರಗಳ ಮತದಾರ ನೀಡುತ್ತಿರುವಾಗ ಕರ್ನಾಟಕದ ಪ್ರಮುಖ ಕಾಂಗ್ರೆಸ್-ಬಿಜೆಪಿಯೇತರ ಪಕ್ಷವಾದ ಜನತಾದಳ ಇಬ್ಭಾಗವಾಗಿಯೇ ಇದೆ. ಬಿಜೆಪಿಯ ಕುತಂತ್ರದ ಭಾಗವಾಗಿ ಒಡೆದ ಜನತಾದಳದ ಒಂದು ತುಂಡು ರಾಜ್ಯದಲ್ಲಿ ಬಿಜೆಪಿಗೆ ವಿರೋಧ ಆದರೆ ದೇಶದ ಮಟ್ಟದಲ್ಲಿ ಬಿಜೆಪಿ ಕೂಟದ ಸರ್ಕಾರಕ್ಕೆ ಬೆಂಬಲ. ಇಂತಹ ಇಬ್ಬಂದಿ ನಿಲುವಿನಿಂದಾಗಿ ಎರಡೂ ಪಕ್ಷಗಳು ಒಂದಾಗುವ ಮಾತುಕತೆಗಳು ನಡೆಯುತ್ತಲೇ ಇವೆ. ಬಹಿರಂಗ ವಾಗ್ವಾದಗಳು ಜರುಗುತ್ತಲೇ ಇವೆ. ನಗರ ಸಭೆಗಳ ಚುನಾವಣೆಗಳಿಗೆ ಮೊದಲು ಒಂದಾಗಬೇಕು ಎಂಬ ತರಾತುರಿ ಫಲಕೊಡಲಿಲ್ಲ. ಒಂದಾಗದಿದ್ದರೂ ಸ್ಥಳೀಯ ಮಟ್ಟದಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತೇವೆ ಎಂಬ ಮಾತು ಕೂಡ ಬಹಳ ಕಡೆ ಸಾರ್ಥಕವಾಗಲಿಲ್ಲ.

ಜೊತೆಗೆ ಕಾಂಗ್ರೆಸ್ ಹಾಗೂ ಬಿಜೆಪಿಯ ಧೋರಣೆಗಳನ್ನು ರಾಜ್ಯ ಸರಕಾರ, ಕೇಂದ್ರ ಸರ್ಕಾರದ ದುರ್ನೀತಿಗಳ ಬಗ್ಗೆ ಅತೃಪ್ತರಾಗಿರುವ ಜನತೆಯನ್ನು ಒಲಿಸಿಕೊಳ್ಳಲು, ಅವರ ಮಧ್ಯೆ ತಾನು ಕಳೆದುಕೊಂಡಿರುವ ಪ್ರಭಾವವನ್ನು ಮರಳಿ ಗಳಿಸಲು ಇದೊಂದು ರಾಜಕೀಯ ಅವಕಾಶ ಎಂದು ಬಿಜೆಪಿ-ಕಾಂಗ್ರೆಸ್ ಎರಡಕ್ಕೂ ವಿರೋಧವಾದ ಜನತಾದಳ(ಎಸ್) ಕೂಡ ಪರಿಗಣಿಸಲಿಲ್ಲ.

ಕಾಂಗ್ರೆಸ್ ಮತ್ತು ಬಿಜೆಪಿ ವಿರೋಧಿಯಾದ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸಿ ಒಂದು ವೇದಿಕೆ ರಚಿಸಿ ಕರ್ನಾಟಕದ ನಗರಗಳ ಹಾಗೂ ನಾಗರಿಕರ ಸಮಸ್ಯೆಗಳಿಗೆ ಒಂದು ವಾಸ್ತವಿಕ ಪರ್ಯಾಯ ರೂಪಿಸಿ ಚುನಾವಣೆಗೆ ಧುಮುಕಿದ್ದರೆ ಕಾಂಗ್ರೆಸ್ ಅನ್ನು ಮತ್ತಷ್ಟು ಹಿಂದೂಡಬಹುದಿತ್ತು. ಅನೇಕ ಪಕ್ಷೇತರರು ಈ ಒಕ್ಕೂಟದ ಭಾಗವಾಗಿ ಕರ್ನಾಟಕದ ರಾಜಕೀಯದಲ್ಲಿ ಈ ರಂಗಕ್ಕೆ ಪ್ರಧಾನ ಸ್ಥಾನ ದೊರಕಿಸಿಕೊಡುತ್ತಿದ್ದರು.

ಇನ್ನು ದುಡಿಯುವ ಜನರ ಪಕ್ಷಗಳಾದ ಸಿಪಿಐ(ಎಂ) ಹಾಗೂ ಸಿಪಿಐನ ಫಲಿತಾಂಶವು ನಿರಾಸೆಯನ್ನುಂಟು ಮಾಡುವಂತಹದ್ದು. ಕರ್ನಾಟಕದ ದುಡಿಯುವ ಜನರ ಸಂಬಳ, ಸಾರಿಗೆ, ಜೀವನಮಟ್ಟದ ಏರಿಕೆಗಳಿಗೆ ಹಗಲಿರುಳು ಶ್ರಮಿಸಿದರೂ ಅವರ ಮನಸ್ಸಿನ, ವಿಚಾರಗಳ ಬೆಳವಣಿಗೆಯನ್ನು ಕಡೆಗಣಿಸಿರುವುದರ ಕಾರಣ ಕರ್ನಾಟಕದ ಯಾವ ನಗರದಲ್ಲಿಯೂ ಈ ಪಕ್ಷಗಳು ಗಣನೀಯ ಶಕ್ತಿಯಾಗಿಲ್ಲ. ಕರ್ನಾಟಕದ ನಗರಗಳ ಬಿಜೆಪಿ-ಕಾಂಗ್ರೆಸ್ ವಿರೋಧಿ ಭಾವನೆಗಳನ್ನು ಮುನ್ನಡೆಸುವ, ದುರ್ನೀತಿಗಳ ವಿರುದ್ಧದ ಪರ್ಯಾಯ ಧೋರಣೆಗಳ ಹರಿಕಾರರಾಗುವ ಅವಕಾಶವನ್ನು ಮುಂದಾದರೂ ಸಮರ್ಥವಾಗಿ ಬಳಸಿಕೊಳ್ಳಬೇಕಾಗಿದೆ. ○

ಸಶಕ್ತ ನಗರಸಭೆಗಳು Vs ಪರಾವಲಂಬಿ ನಗರಸಭೆಗಳು

ಇಂದು ನಮ್ಮ ಮನಸ್ಥಿತಿಯಲ್ಲಿ ಒಂದು ನಗರಸಭೆ ಹೀಗೆಯೇ ಇರುತ್ತದೆ, ಹೀಗಲ್ಲದೆ ಮತ್ತೆ ಹೇಗೆ ಎನ್ನುವ ಜಡತೆ ತುಂಬಿದೆ. ನಿಜವಾದ ಒಂದು ನಗರಸಭೆ ಹೇಗಿರುತ್ತದೆ, ಹೇಗಿರಬೇಕು ಎಂಬುದಕ್ಕೆ ಎರಡು ಮಾದರಿಗಳಿವೆ. ಒಂದು ಯುರೋಪಿನ ಬಂಡವಾಳಶಾಹಿ ಪ್ರಜಾಪ್ರಭುತ್ವದ ಮಾದರಿ ಮತ್ತೊಂದು ಸಮಾಜವಾದಿ ಪ್ರಜಾಪ್ರಭುತ್ವದ ಮಾದರಿ.

ಯುರೋಪಿನಲ್ಲಿ: ಯುರೋಪಿನ ಹಲವು ಪ್ರದೇಶಗಳಲ್ಲಿ ಒಂದು ನಗರಸಭೆಯೆಂದರೆ ಆ ನಗರದ ಒಳಗಿನ ಅನೇಕ ಚಟುವಟಿಕೆಗಳು - ಆ ನಗರಸಭೆಯ ಅಧೀನ. ಎಲ್ಲ ಶಾಲೆಗಳು, ಆಸ್ಪತ್ರೆಗಳು, ಕುಡಿಯುವ ನೀರು, ಬೀದಿ ದೀಪ, ರಸ್ತೆಗಳು, ಸೇತುವೆಗಳು, ಬಸ್ ನಿಲ್ದಾಣಗಳು ಇತ್ಯಾದಿ ಅಭಿವೃದ್ಧಿಯ ವಿಷಯಗಳು ಮಾತ್ರವೇ ಅಲ್ಲ, ಪೋಲೀಸು, ವಿದ್ಯುತ್ ಸರಬರಾಜು, ಕೈಗಾರಿಕೆಗಳು ಕೂಡ. ಆ ನಗರದ ಮೇಯರ್ ಎಂದರೆ ರಾಜ್ಯ ಸರ್ಕಾರದ ಮಂತ್ರಿಗಳಿಗಿಂತಲೂ ಹೆಚ್ಚಿನ ಅಧಿಕಾರ. ಆದ್ದರಿಂದಲೇ ಅವನು ಪ್ರಥಮ ಪ್ರಜೆ. ಇಂತಹ ಸಂದರ್ಭದಲ್ಲಿ ಆ ನಗರಸಭೆಗಳ ಆದಾಯವು ಹೆಚ್ಚು. ಇತ್ತೀಚಿಗಿನ ಕೆಲವು ದಶಕಗಳಲ್ಲಿ ಯುರೋಪಿನ ನಗರಸಭೆಗಳು ಹಲವು ಅಧಿಕಾರಗಳನ್ನು ಕಿತ್ತುಕೊಳ್ಳಲಾಗಿದ್ದರೂ ಕೂಡ ಇಂದಿಗೂ ಅವು ಸಬಲ.

ಹೀಗಾಗಿಯೇ ಅನೇಕ ಬಾರಿ ಯಾವ ಪಕ್ಷ ಆ ದೇಶದಲ್ಲಿ, ರಾಜ್ಯಗಳಲ್ಲಿ ಅಧಿಕಾರದಲ್ಲಿರುತ್ತವೆಯೋ ಅದಕ್ಕೆ ವಿರುದ್ಧವಾದ ಪಕ್ಷಗಳನ್ನು ಅನೇಕ ಬಾರಿ ಅಲ್ಲಿಯ ನಗರಸಭೆಗಳಿಗೆ ಆಯ್ಕೆ ಮಾಡುವ ಧೈರ್ಯವನ್ನು ಅಲ್ಲಿಯ ಜನತೆ ತೋರುತ್ತಾರೆ. ನಿರಂತರವಾಗಿ ಹಗಲವು ದಶಕಗಳ ಕಾಲ ಒಂದು ನಗರಸಭೆ ಒಂದು ವಿರೋಧ ಪಕ್ಷದ ಆಡಳಿತದಲ್ಲಿ ಬಹುದು. ಅಲ್ಲಿ ನಗರಸಭೆಗಳ ಚುನಾವಣೆಗಳ ದೇಶದ ರಾಜಕೀಯ ವಾತಾವರಣದ ಮುನ್ಸೂಚಿ. ಇಲ್ಲಿ ಅದಕ್ಕೆ ವಿರುದ್ಧವಾಗಿ ರಾಜ್ಯದ ಚುನಾವಣೆಗಳು ನಗರಗಳ ಚುನಾವಣೆಗಳ ಮುನ್ಸೂಚಿ. ರಾಜ್ಯದ, ದೇಶದ ಚುನಾವಣೆಗಳ ಮೇಲೆ ನಗರಸಭೆಗಳ ಚುನಾವಣೆಗಳೂ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಹೀಗಾಗಿ ರಾಜಕೀಯ ಪಕ್ಷಗಳು ಈ ಚುನಾವಣೆಗಳಿಗೆ ನೀಡಬೇಕಾದ ಪ್ರಾಮುಖ್ಯತೆಯನ್ನು ನೀಡುವುದಿಲ್ಲ.

ಸಮಾಜವಾದಿ ದೇಶಗಳಲ್ಲಿ

ಸಮಾಜವಾದಿ ದೇಶಗಳಲ್ಲಿ ಪ್ರಜಾಸತ್ತಾತ್ಮಕ ಆಡಳಿತ ವಿಕೇಂದ್ರೀಕರಣಕ್ಕೆ - ಅಂದರೆ ಅತ್ಯಂತ ಕೆಳಮಟ್ಟದ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ ನೀಡುವುದಕ್ಕೆ - ಹೆಚ್ಚು ಪ್ರಾಶಸ್ತ್ಯ ಇರುವುದರಿಂದ ಅಲ್ಲಿನ ನಗರ ಸಭೆಗಳ ಶಕ್ತಿಯನ್ನು ನಾವು ಊಹಿಸಲೂ ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯನ್ನು ನೀವು ಚೀನಾದ ಬೀಜಿಂಗ್ ಅಥವಾ ಶಾಂಗೈ ನಗರದ ಮೇಯರ್ ಆಗಿ ಆಯ್ಕೆಯಾಗಬಯಸುತ್ತೀರೋ ಅಥವಾ ಚೀನಾ ಎಂಬ ದೊಡ್ಡ ದೇಶದ ಮಂತ್ರಿಯಾಗಿರಬಯಸುತ್ತಿರೋ ಎಂದರೆ ನಾನು ಮೇಯರ್ ಪದವಿಯನ್ನೇ ಬಯಸುತ್ತೇನೆ ಎಂದು ಉತ್ತರ ಬರಬಹುದು. ಹೀಗಾಗಿ ರಾಜ್ಯವೊಂದರ ಮಂತ್ರಿ, ಮುಖ್ಯಮಂತ್ರಿ ಪದವಿಗಿಂತಲೂ ಹೆಚ್ಚು ಮಹತ್ವದ್ದು ಮೇಯರ್ ಅಧಿಕಾರ.

ಸಮಾಜವಾದಿ ವ್ಯವಸ್ಥೆಯು ಯಾವುದೇ ನಗರಗಳ ಒಳಗೆ ನಡೆಯುವ ಎಲ್ಲ ಆರ್ಥಿಕ - ಸಾಮಾಜಿಕ ಚಟುವಟಿಕೆಗಳೂ ಆ ನಗರಸಭೆಯ ಅಧೀನಕ್ಕೆ ಬರುತ್ತವೆ. ಈ ನಗರಸಭೆಗಳು ನಗರದೊಳಗಿನ ಅನೇಕ ಕಾರ್ಖಾನೆಗಳ ಒಡೆತನವನ್ನು ಹೊಂದಿವೆ. ಎಲ್ಲಾ ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಆಸ್ಪತ್ರೆಗಳು, ನೀರು, ವಿದ್ಯುತ್ ಸರಬರಾಜು, ಸಾರಿಗೆ, ರಸ್ತೆ-ಸೇತುವೆ ವ್ಯವಸ್ಥೆಗಳು ಈ ಎಲ್ಲ ಆರ್ಥಿಕ ಚಟುವಟಿಕೆಗಳಿಂದ ಹಣದ ಸಂಪನ್ಮೂಲವೂ ದೊರಕುತ್ತದೆ. ಒಂದು ನಗರದಲ್ಲಿ ನಗರಸಭೆ ತೆರಿಗೆಗಳನ್ನೂ ತಾನೆ ಸಂಗ್ರಹಿಸಿ ಅದರ ಒಂದು ಭಾಗವನ್ನು ರಾಜ್ಯಕ್ಕೆ, ದೇಶಕ್ಕೆ ನೀಡುತ್ತದೆ. ಹೀಗಾಗಿ ನಗರಸಭೆಗಳು ರಾಜ್ಯ ಸರ್ಕಾರ, ದೇಶದ ಸರ್ಕಾರಗಳಿಂದ ಹಣವನ್ನು ಸಹಾಯ ಧನವಾಗಿ, ಸಾಲವಾಗಿ ಪಡೆಯಲು ಕೈ ಚಾಚಿ ಕುಳಿತುಕೊಳ್ಳುವ ಮಂತ್ರಿಗಳ ಮನೆಗಳ ಮುಂದೆ ನಗರಸಭೆಗಳ ಅಧ್ಯಕ್ಷರು ಮೇಯರ್‌ಗಳು ಬಂದು ಕಾಯುವ ಪ್ರಶ್ನೆಯೇ ಇಲ್ಲ.

ನಮ್ಮ ದೇಶದಲ್ಲಿ ಹೇಗಿದೆ? ಉದಾಹರಣೆಗೆ ಬೆಂಗಳೂರು ಅಥವಾ ಹುಬ್ಬಳ್ಳಿ-ಧಾರವಾಡದಂತಹ ನಗರಗಳನ್ನು ತೆಗೆದುಕೊಳ್ಳೋಣ. ಈಗ ಬೆಂಗಳೂರು ನಗರದಲ್ಲಿ ಕುಡಿಯುವ ನೀರು ಸರಬರಾಜು, ವಿದ್ಯುತ್ ಸರಬರಾಜು, ಸಾರಿಗೆ ವ್ಯವಸ್ಥೆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಮಂಡಳಿ, ನಿಗಮಗಳದ್ದು. ಶಾಲೆ, ಕಾಲೇಜುಗಳು, ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು ನೇರವಾಗಿ ರಾಜ್ಯ ಸರ್ಕಾರದ ಅಧೀನ(ಕೆಲವೇ ಕಾರ್ಪೋರೇಷನ್ ಆಸ್ಪತ್ರೆಗಳು, ಪ್ರೌಢಶಾಲೆಗಳನ್ನು ಹೊರತುಪಡಿಸಿ) ಬೆಂಗಳೂರು ನಗರವನ್ನು ವಿಸ್ತರಿಸುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೂಡ ನೇರ ರಾಜ್ಯ ಸರ್ಕಾರದ ಅಧೀನ.

ಇನ್ನು ನಗರದೊಳಗಿನ ಕೈಗಾರಿಕೆಗಳು, ಪೋಲೀಸು ಇವುಗಳಿಗೂ ಮಹಾನಗರ ಪಾಲಿಕೆಗಳಿಗೂ ಸಂಬಂಧವೇ ಇಲ್ಲ.

ಇವೆಲ್ಲವೂ - ಬೆಂಗಳೂರು ನಗರದೊಳಗಿನ ಬಿಇಎಲ್, ಬಿಎಚ್‌ಇಎಲ್, ಐಟಿಐ ನಂತಹ ದೊಡ್ಡ ಕೈಗಾರಿಕೆಗಳು, ಇತರ ಕೈಗಾರಿಕೆಗಳ ಮೇಲೆ ತೆರಿಗೆ ಹಾಕುವ ಅಧಿಕಾರ, ವಿಕ್ಟೋರಿಯಾ, ಬೌರಿಂಗ್‌ನಂತಹ ಆಸ್ಪತ್ರೆಗಳು, ಕಾಲೇಜುಗಳ ಮೇಲಿನ ಅಧಿಕಾರ ಅಭಿವೃದ್ಧಿ ಪ್ರಾಧಿಕಾರ ಜಲಮಂಡಳಿ, ವಿದ್ಯುತ್ ಮಂಡಳಿಯ ಬೆಂಗಳೂರು ನಗರ ವಿಭಾಗ, ಬೆಂಗಳೂರು ನಗರ ಸಾರಿಗೆ ವ್ಯವಸ್ಥೆ ಇತ್ಯಾದಿಗಳೆಲ್ಲವೂ ನಗರಸಭೆಯ ಅಧಿಕಾರದಲ್ಲಿದ್ದು ದಿನವೂ ಮೇಯರ್‌ನ ನಗರಸಭೆಯ ಆದೇಶ ಕೇಳಿ ಪೋಲೀಸ್ ಕಮಿಷನರ್ ಕೆಲಸ ನಿರ್ವಹಿಸಬೇಕು ಎಂದಾಗಿದ್ದರೆ ಆಗ ಬೆಂಗಳೂರು ಪಾಲಿಕೆಗೆ ಮಹಾನಗರಪಾಲಿಕೆ ಎಂದು ಕರೆಯುವುದು ಸಾರ್ಥಕವಾಗಿರುತ್ತಿತ್ತು.

ಇಂತಹ ಸಶಕ್ತ ನಗರಸಭೆಗಳು ಜನರ ನಿಯಂತ್ರಣದಲ್ಲಿದ್ದರೆ ಪ್ರಜೆಗಳ ನಿಯಂತ್ರಣದಲ್ಲಿನ ಪ್ರಜಾಪ್ರಭುತ್ವವಾಗಿ ಪ್ರಜೆಗಳಿಗೆ ನಾವೇ ನಿಜವಾದ ಪ್ರಭುಗಳು - 5 ವರ್ಷಕ್ಕೊಮ್ಮೆ ಓಟು ಹಾಕುವ ಮತದಾರರು ಮಾತ್ರವೇ ಅಲ್ಲ ಎಂಬ ಪ್ರಭು ಭಾವನೆ ಮತ್ತು ಜವಾಬುದಾರಿ ತುಂಬಿಕೊಳ್ಳುತ್ತಿತ್ತು.

…..ತಾಳಕ್ಕೆ ಮೇಳ ಊದುವ ಬಿಜೆಪಿ

ಪುಟ 5 ರಿಂದ

ಹೊಸ ಪರ್ಯಾಯುಗಳಿಗೆ ಮುಂದಾಗಲಿದೆ. ತನ್ನ ಅಣ್ವಸ್ತ್ರ ಮತ್ತು ಕ್ಷಿಪಣಿ ವ್ಯವಸ್ಥೆಯನ್ನು ಹೆಚ್ಚಿಸಿಕೊಳ್ಳಲು ಇದು ಪ್ರೇರಕವಾಗಲಿದೆ. ಪರಿಣಾಮವಾಗಿ ಭಾರತ ತನ್ನ ಅಣ್ವಸ್ತ್ರ ಶಕ್ತಿಯನ್ನು ವೃದ್ಧಿಸಿಕೊಳ್ಳುವ ಒತ್ತಡ ತರುತ್ತದೆ. ಪಾಕಿಸ್ತಾನವೂ ಹಾಗೇ ಮಾಡುತ್ತದೆ. ಇದರಿಂದ ದಕ್ಷಿಣ ಏಷ್ಯಾದಲ್ಲಿ ಅಣ್ವಸ್ತ್ರ ಪೈಪೋಟಿಗೆ ಅವಕಾಶವಾಗಲಿದೆ.

ಅಮೇರಿಕಾದ ನೆರಳಲ್ಲೇ ಚಿಂತಿಸುತ್ತಿರುವ ವಾಜಪೇಯಿ ಸರ್ಕಾರ, ಬುಷ್ ಯೋಜನೆಯನ್ನು ಭಾರತದ ಸ್ವಂತ ಅಣ್ವಸ್ತ್ರ ಶಕ್ತಿಗಳ ಬೆಳವಣಿಗೆಗೆ ಉಂಟಾಗಿರುವ ಅವಕಾಶವೆಂದು ಭಾವಿಸುತ್ತಿದೆ. ವರ್ಷದ ಹಿಂದೆ ಇದೇ ಎನ್.ಎಂ.ಡಿ ಯೋಜನೆಯನ್ನು ತಿರಸ್ಕರಿಸಿದ್ದ ವಾಜಪೇಯಿ ಸರ್ಕಾರ ಈಗ ಸಂಪೂರ್ಣವಾಗಿ ಸಮ್ಮತಿಸಲು ಕಾರಣವೇನೆಂದರೆ ತಜ್ಞರೆಂದು ಕರೆಸಿಕೊಳ್ಳುವ ಅಣ್ವಸ್ತ್ರದ ಪರವಾದ ಲಾಬಿ. ಎನ್.ಎಂ.ಡಿಯಿಂದ ಭಾರತಕ್ಕೆ ಯಾವುದೇ ಹಾನಿಯಾಗದು ಎಂದು ಈ ತಜ್ಞರುಗಳು ವಾದಿಸುತ್ತಿದ್ದಾರೆ. ಇಂತಹ ವಾದದ ಮುಂಚೂಣಿಯಲ್ಲಿ ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ ಅಧ್ಯಕ್ಷರಾದ ಕೆ. ಸುಬ್ರಮಣಿಯಂರವರು ಇದ್ದಾರೆ. ಇದೇ ಸಂದರ್ಭದಲ್ಲಿ, 1995ರಲ್ಲಿ ಆಗಿದ್ದ ಭಾರತ-ಅಮೇರಿಕಾ ರಕ್ಷಣಾ ಪಡೆಗಳ ಜಂಟಿ ಒಪ್ಪಂದವನ್ನು ಪುನರಾರಂಭಿಸಲು ತೀರ್ಮಾನಿಸಲಾಗಿದೆ. ಅಮೇರಿಕಾ ದಿಗ್ಬಂಧನದ ಕಾರಣದಿಂದಾಗಿ ಭಾರತಕ್ಕೆ ಯಾವುದೇ ಶಸ್ತ್ರಾಸ್ತ್ರ ಸಿಗದಿದ್ದರೂ ಭಾರತದ ರಕ್ಷಣಾ ಪಡೆಗಳ ಒಳಗೆ ಅಮೇರಿಕಕ್ಕೆ ಪೂರ್ಣ ಪ್ರವೇಶವನ್ನು ನೀಡಲು ವಾಜಪೇಯಿ ಸರ್ಕಾರ ಯೋಜಿಸುತ್ತಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗೆ ಉಂಟಾಗಿರುವ ಆರ್ಥಿಕ ಹಿನ್ನಡೆಯಿಂದ ಹೊರಬರಲು ಅದು ಯುದ್ಧಕೋರ ಸಾಹಸವಾದಕ್ಕೆ ಮುಂದಾಗಿದೆ. ಇಂತಹ ಅಪಾಯಕಾರಿ ನಿಲುವಿಗೆ ಬೆಂಬಲಿಸುವ ಮೂಲಕ ಭಾರತದ ಪಾರಂಪರಿಕ ವಿದೇಶಾಂಗ ನೀತಿಗೆ ಬಿಜೆಪಿ ಕೂಟದ ಸರ್ಕಾರ ತಿಲಾಂಜಲಿಯನ್ನು ಕೊಟ್ಟಿದೆ. ○

ಮೇ-ದಿನ 2001

ಎಲ್ಲೆಲ್ಲೂ ಬಂಡವಾಳಶಾಹಿ ವಿರುದ್ಧ ಎದ್ದುನಿಂತ ಕಾರ್ಮಿಕರು

ಈ ವರ್ಷದ ಮೇ ದಿನಾಚರಣೆ ಇತ್ತೀಚಿನ ದಶಕದಲ್ಲೇ ಅತ್ಯಂತ ಸಮರಶೀಲ ಮೇ ದಿನವಾಗಿ ನೆನಪಿನಲ್ಲಿಟ್ಟುಕೊಳ್ಳುವಂತದ್ದು. ಜಾಗತೀಕರಣದ ಬಿಸಿ ತಟ್ಟಿದ ಕಾರ್ಮಿಕರು ಬಂಡವಾಳಶಾಹಿ ವ್ಯವಸ್ಥೆ ತಮ್ಮ ಪ್ರಥಮ ವೈರಿ ಎಂದು ಅರ್ಥಮಾಡಿಕೊಂಡು ಅದರ ವಿರುದ್ಧ ಎದ್ದು ನಿಂತ ದಿನವಾಯಿತು. ಲಂಡನ್‌ನಲ್ಲಿ,


ಆಸ್ಟ್ರೇಲಿಯಾದಲ್ಲಿ ಭಾರೀ ಮೆರವಣಿಗೆ

ಬರ್ಲಿನ್‌ನಲ್ಲಿ, ಆಸ್ಟ್ರೇಲಿಯಾದಲ್ಲಿ, ದಕ್ಷಿಣ ಕೋರಿಯಾದಲ್ಲಿ ಮೇದಿನದ ಪ್ರತಿಭಟನಾ ಮೆರವಣಿಗೆಗಳು ಸ್ಪಷ್ಟವಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರಶ್ನಿಸುವಂಥದ್ದಾಗಿದ್ದವು.

ಆಸ್ಟ್ರೇಲಿಯಾದಲ್ಲಿ ಅತ್ಯಂತ ವ್ಯಾಪಕ ಪ್ರತಿಭಟನಾ ಮೆರವಣಗಳು ನಡದವು. ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರತಿನಿಧಿಸುವ ಶೇರು ಮಾರುಕಟ್ಟೆ ಕಟ್ಟಡಗಳು ಮತ್ತು ಪ್ರಮುಖ ಕೊಳ್ಳುಬಾಕ ಬಳಕೆದಾರ ಸಂಘ ಪ್ರತಿನಿಧಿಸುವ ಪ್ರಮುಖ ವ್ಯಾಪಾರಿ ಮಳಿಗೆಗಳ ಬಳಿ ಅವು ಕೆಲಸ ಮಾಡುವಂತೆ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಎಲ್ಲಾ ಪ್ರಮುಖ ನಗರಗಳಲ್ಲಿ ಪಿಕೆಟಿಂಗ್ ನಡೆಸಿದರು. ಪೋಲೀಸರು ಕಾರ್ಮಿಕರನ್ನು ತಡೆದಾಗ ಎಲ್ಲಾ ಕಡೆ (ಅದರಲ್ಲೂ ಮುಖ್ಯವಾಗಿ ಸಿಡ್ನಿ ನಗರದಲ್ಲಿ) ಪೋಲೀಸರು - ಕಾರ್ಮಿಕರ ನಡುವೆ ಕಾಳಗವೇ ನಡೆಯಿತು. ಜಾಗತೀಕರಣದ ಪ್ರತೀಕವಾದ 'ಮ್ಯಾಕ್ ಡೋನಾಲ್ಡ್' ಮೇಲೆ ಹಳದಿ ಪೈಂಟು ಸುರಿದು ಪ್ರತಿಭಟಿಸಲಾಯಿತು.

ಲಂಡನ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಅತ್ಯಂತ ದೊಡ್ಡ ಮೇ ದಿನ ಪ್ರತಿಭಟನಾ ಮೆರವಣಿಗೆ ನಡೆಯಿತು. ಲಂಡನ್‌ನ ಪ್ರಮುಖ ವ್ಯಾಪಾರಿ ಮಾರ್ಗವಾದ ಆಕ್ಸ್‌ಫರ್ಡ್ ಬೀದಿಯಲ್ಲಿ ಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಪಿಕೆಟಿಂಗ್ ನಡೆಸಿದರು - ಬಳಕೆದಾರ ಸಂಸ್ಕೃತಿಯ ವಿರುದ್ಧ. ಬಂಡವಾಳಶಾಹಿ ವ್ಯವಸ್ಥೆ ವಿರುದ್ಧ. ಸೈಕಲ್ ರ್ಯಾಲಿ ನಡೆಸಲಾಯಿತು. ಕಾರ್ಮಿಕರ ಪ್ರತಿಭಟನೆ ಬಗ್ಗೆ ಮೊದಲೇ ತಿಳಿದಿದ್ದ ಪೋಲೀಸರು ಆರಂಭದಲ್ಲಿ ಕಾರ್ಮಿಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆದರೆ ದಿನ ಏರಿದಂತೆ (ಸುಮಾರು 10 ಸಾವಿರ) ಇಡೀ ಆಕ್ಸ್‌ಫರ್ಡ್ ಬೀದಿ ತುಂಬಾ ಕಾರ್ಮಿಕರು ತುಂಬಿ ಹೋಗಿದ್ದರು. ಶಾಂತಿಯುತ ಕಾರ್ಮಿಕರ ಮೇಲೆ ಪೋಲೀಸರು ಬಲಪ್ರಯೋಗ ಮಾಡಿರುವ ಇಲ್ಲೂ ಕಾದಾಟಗಳು ನಡೆದವು. ಆಕ್ಸ್‌ಫರ್ಡ್ ಬೀದಿ ಮತ್ತು ಲಂಡನ್‌ನ ಪ್ರಮುಖ ವ್ಯಾಪಾರ ಮೇ ದಿನದಂದು ಸ್ಥಗಿತವಾಗಿತ್ತು.


ಮಾಸ್ಕೋದಲ್ಲಿ ಕಾರ್ಮಿಕರ ಭಾರೀ ಮೆರವಣಿಗೆ

ಮಾಸ್ಕೋದಲ್ಲಿ ಎರಡು ಪ್ರತ್ಯೇಕ - ಒಂದು ಕಮ್ಯುನಿಸ್ಟ್ ಪಕ್ಷದ ರ್ಯಾಲಿ



ಪ್ರತಿಭಟನಾಕಾರರನ್ನು ಬಂಧಿಸುತ್ತಿರುವ ಪೋಲೀಸರು

ಇನ್ನೊಂದು ಕೇಂದ್ರೀಯ ಟ್ರೇಡ್ ಯೂನಿಯನ್ ರ್ಯಾಲಿಯಲ್ಲಿ - ರ್ಯಾಲಿಗಳಲ್ಲಿ 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದರು. ರಶ್ಯಾದ್ಯಂತ ಮೂರು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ರ್ಯಾಲಿಗಳಲ್ಲಿ ಭಾಗ ವಹಿಸಿದರು. ಉಕ್ರೇನಿನಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದರು.


ಜರ್ಮನಿಯಲ್ಲಿ ಪ್ರತಿಭಟನೆಯನ್ನು ಹತ್ತಿಕ್ಕುತ್ತಿರುವ ಪೋಲೀಸರು

ಬರ್ಲಿನ್ ಯುರೋಪಿನ ನೂರಾರು ಮೇ ದಿನದ ಕಾರ್ಮಿಕರ ಪ್ರತಿಭಟನೆಗಳು ಗಮನಾರ್ಹವಾಗಿತ್ತು, ಸುಮಾರು 5 ಸಾವಿರ ಪೋಲೀಸರನ್ನು ಕಾರ್ಮಿಕರ ಮೇಲೆ ಹಲ್ಲೆ ನಡೆಸಲು ಸಜ್ಜುಗೊಳಿಸಿದ್ದ ಸರ್ಕಾರ ಕಾರ್ಮಿಕರ ಪ್ರತಿರೋಧ ಎದುರಿಸಿ ಹಿಂಸಾಚಾರಕ್ಕೆ ಕಾರಣವಾಯಿತು. ಮಾಜಿ ಬರ್ಲಿನ್ ಗೋಡೆಯ ಬಳಿ ಕಾರ್ಮಿಕರಿಗೂ ಪೋಲೀಸರಿಗೂ ಭಾರಿ ಕಾಳಗ ನಡೆಯಿತು. ಬಂಡವಾಳಶಾಹಿ-ವಿರುದ್ಧ ರ್ಯಾಲಿಯನ್ನು ಪೋಲೀಸರು ನಿಷೇಧ ಹೂಡಿದ್ದು ಹಿಂಸಾಚಾರಕ್ಕೆ ಕಾರಣವಾಯಿತು. ಆಸ್ಟ್ರಿಯಾದ ವಿಯೆನ್ನಾದಲ್ಲಿ ನೌಕರಿ ಭದ್ರತೆ ಒತ್ತಾಯಿಸಿ ಒಂದು ಲಕ್ಷ ಕಾರ್ಮಿಕರು ರ್ಯಾಲಿ ನಡೆಸಿದರು.

ದಕ್ಷಿಣ ಕೊರಿಯಾದಲ್ಲಿ ಭಾರಿ ಕಾರ್ಮಿಕರ ಮೇ ದಿನದ ರ್ಯಾಲಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಮತ್ತು ಉತ್ತರ ಕೋರಿಯಾದ ಜತೆ ಶಾಂತಿಯುತ ಸಂಬಂಧಗಳಿಗೆ ಒತ್ತಾಯಿಸಿತು. ಭಾರತದಲ್ಲಿಯೂ ಮೇ ದಿನಾಚರಣೆ ವ್ಯಾಪಕವಾಗಿ ಆಚರಿಸಲಾಗಿದೆ. ○


ಕೊರಿಯಾದಲ್ಲಿ ಸರ್ಕಾರದ ಆರ್ಥಿಕ ನೀತಿಗಳನ್ನು ವಿರೋಧಿಸಿ ಪ್ರತಿಭಟನೆ

ಪ್ರಗತಿಯ ಬೆನ್ನೇರಿ ಪಶ್ಚಿಮ ಬಂಗಾಳ....

ಪುಟ 9 ರಿಂದ

ಚಟುವಟಿಕೆಗಳು

ಔದ್ಯಮೀಕರಣದ ರಸ್ತೆಗಳು ಈಗ ಪ.ಬಂಗಾಳದ ಕಡೆಗೆ ಹೋಗುತ್ತವೆ

ಪ್ರತಿವರ್ಷ ಸರಾಸರಿ 100 ಕ್ಕೂ ಹೆಚ್ಚು ಹೊಸ ಉದ್ದಿಮೆಗಳು ಜನವರಿ 1991 ರಿಂದ ಡಿಸೆಂಬರ್ 2000 ರವರೆಗೆ 54857 ಕೋಟಿ ರೂಪಾಯಿಗಳ ಹೂಡಿಕೆ

ವರ್ಷ	ಅನುಮೋದಿತ ಯೋಜನೆಗಳು	ಹೂಡಿಕೆ (ಕೋಟಿ ರೂ.ಗಳಲ್ಲಿ)
1991	138	2478.97
1992	231	4467.40
1993	167	793.56
1994	208	2017.74
1995	390	10249.03
1996	305	6860.83
1997	264	12079.59
1998	153	6111.83
1999	277	7587.15
2000	341	2220.19
ಈ ಅವಧಿಯಲ್ಲಿ ಉದ್ಯೋಗ ಸೃಷ್ಟಿ :		456904
ಅನುಷ್ಠಾನಗೊಳಿಸಿದಯೋಜನೆಗಳು:		459
ಈ ಯೋಜನೆಗಳಲ್ಲಿನ ಹೂಡಿಕೆ:		17580.66 ಕೋಟಿ ರೂಪಾಯಿಗಳು

ಪ.ಬಂಗಾಳದ ಔದ್ಯಮೀಕರಣದ ಬಗ್ಗೆ ನಕಾರಾತ್ಮಕ ಮಾತುಗಳೇ ಸಮೂಹ ಮಾಧ್ಯಮಗಳಲ್ಲಿ ಬರುತ್ತವೆ. ಬೂರ್ಜ್ವಾ ಮಾಧ್ಯಮಗಳು ಅಷ್ಟೊಂದು ಅಪಪ್ರಚಾರದಲ್ಲಿ ತೊಡಗಿವೆ. ಆದರೆ ನಿಜವೇನು?

ಇಂದಿನ ಪ.ಬಂಗಾಳದಲ್ಲಿ ಹೊಸ ಉದ್ದಿಮೆಗಳೇ ಬಂದಿಲ್ಲ ಎಂಬುದು ಒಂದು ಅಪಪ್ರಚಾರ.

ಹಾಲ್ದಿಯಾ ಪೆಟ್ರೋಕೆಮಿಕಲ್ಸ್, ಮಿತ್ಸುಬಿಷಿ, ಪಿಟಿಐ, ಭೂಷಣ್ ಕೋಲ್ಡ್ ರೋಲಿಂಗ್, ಅಂಬುಜಾ ಸಿಮೆಂಟ್ ಹಾಗೂ ಹಾಲ್ದಿಯಾ ಪೆಟ್ರೋಕೆಮಿಕಲ್ಸ್ ಸಂಬಂಧಿತ 399 ಯೋಜನೆಗಳು, 200 ಯೋಜನೆಗಳು ಸಾಫ್ಟ್‌ವೇರ್ ಸಂಕೀರ್ಣದಲ್ಲಿ ಮೂಡಿಬಂದಿವೆ ಎಂದಾದರೆ ಮೇಲಿನ ಅಪಪ್ರಚಾರ ನಿಜವೆ?

ಅಂತರ್ರಚನಾ ಸೌಲಭ್ಯಗಳನ್ನು ರಾಜ್ಯದಲ್ಲಿ ಕಟ್ಟಿಲ್ಲ ಎಂಬುದು ಇನ್ನೊಂದು ಅಪಪ್ರಚಾರ. ಬಂಗಾಲ ಇಂಟಲಿಜೆಂಟ್ ಪಾರ್ಕ್, ಕೋಲ್ಕತಾ ಚರ್ಮ ಸಂಕೀರ್ಣ, ದುರ್ಗಾಪುರ ಹೆದ್ದಾರಿ ಇವೆಲ್ಲವೂ ಅಂತರ್ರಚನಾ ಸೌಲಭ್ಯಗಳಲ್ಲವೇ?

ರೋಗಗ್ರಸ್ತ ಉದ್ದಿಮೆಗಳ ಪುನರುಜ್ಜೀವನಗೊಳಿಸುವ ಪ್ರಯತ್ನಗಳೇ ಇಲ್ಲ ಎಂಬುದು ಇನ್ನೊಂದು ಆರೋಪ. ನ್ಯಾಷನಲ್ ಐರನ್ ಮತ್ತು ಸ್ಟೀಲ್ ಕಂಪನಿ(1984) ಲಿಮಿಟೆಡ್, ಕೃಷ್ಣ ಸಿಲಿಕೇಟ್ ಮತ್ತು ಗ್ಲಾಸ್‌ನ ಬಲಾಯಿಪುರ ಕಾರ್ಖಾನೆ, ಮೆಕ್‌ಇಂತೋಷ್ ಬರ್ನ್, ಇಸ್ಟರ್ನ್ ಡಿಸ್ಟಲ್ಲರೀಸ್ ಮತ್ತು ಬ್ರಿಟಾನಿಯಾ ಇಂಜನಿಯರಿಂಗ್‌ಗಳ ಪುನರುಜ್ಜೀವನ ಈ ಆರೋಪದ ಪೊಳ್ಳುತನವನ್ನು ತೋರಿಸುತ್ತದೆ.

ಹೀಗೆ ಇಂತಹ ಹಲವು ಉದಾಹರಣೆಗಳಿವೆ. ಕೆಲವು ಸಂಗತಿಗಳು

- ಪ.ಬಂಗಾಳದ ಔದ್ಯಮಿಕ ಬೆಳವಣಿಗೆಯ ದರ (ಈ ಸಾಲಿನಲ್ಲಿ) ಶೇ 7.3 ರಾಷ್ಟ್ರೀಯ ಸರಾಸರಿ ಶೇ 5.8
- ಕಳೆದ 10 ವರ್ಷಗಳಲ್ಲಿ 2465 ಉದ್ದಿಮೆಗಳಲ್ಲಿ 54857 ಕೋಟಿ ರೂಪಾಯಿಗಳು ಹೂಡಿಕೆಯಾಗಿವೆ.
- 1758.66 ಕೋಟಿ ರೂಪಾಯಿಗಳು ಹೂಡಿಕೆಯಿರುವ 459 ಉದ್ದಿಮೆಗಳು ಉತ್ಪಾದನೆಯನ್ನು ಆಗಲೇ ಪ್ರಾರಂಭಿಸಿವೆ.
- ಕಳೆದ ಒಂದು ವರ್ಷದಲ್ಲಿ ಆಗಿರುವ ಹೂಡಿಕೆ 1991-1999 ರ ಅವಧಿಯಲ್ಲಿ ಆದ ಹೂಡಿಕೆಯ ಶೇ 77 ರಷ್ಟು
- ರಾಜ್ಯ ಸರ್ಕಾರಿ ಸ್ವಾಮ್ಯದ 67 ಉದ್ದಿಮೆಗಳಲ್ಲಿ 16 ಉದ್ದಿಮೆಗಳು ಲಾಭದಾಯಕವಾಗಿ ನಡೆಯುತ್ತಿವೆ.
- ಮುಚ್ಚಿದ ಉದ್ದಿಮೆಗಳನ್ನು ಪುನಃ ತೆರೆಯಲು 100 ಕೋಟಿ ರೂಪಾಯಿಗಳ ನಿಧಿಯೊಂದನ್ನು ಸ್ಥಾಪಿಸಲಾಗಿದೆ.

ಸಂಪೂರ್ಣ ಶಿಕ್ಷಣದಲ್ಲಿ ಪ್ರಗತಿ

ಎಡರಂಗ ಆಡಳಿತದಲ್ಲಿ (ಕಳೆದ) 24 ವರ್ಷಗಳಲ್ಲಿ

- ಶಿಕ್ಷಣಕ್ಕೆ ಬಜೆಟ್ ನೆರವು 43 ಪಟ್ಟು ಹೆಚ್ಚಿದೆ
- 12 ನೇ ತರಗತಿಯವರೆಗೆ ಟ್ಯೂಷನ್ ಫೀಜ್ ಇಲ್ಲ
- ಹೈಯರ್ ಸೆಕಂಡರಿ ಸಿಲಬಸ್‌ನಲ್ಲಿ ಕಂಪ್ಯೂಟರ್ ವಿಜ್ಞಾನದ ಅಳವಡಿಕೆ
- 270 ಮದ್ರಸಗಳ ಸ್ಥಾಪನೆ(ಅಲ್ಪಸಂಖ್ಯಾತ ಮುಸ್ಲಿಮರಿಗಾಗಿ)
- 30 ಹೊಸ ಎಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ
- 15 ಹೊಸ ಪಾಲಿಟೆಕ್ನಿಕ್ ಕಾಲೇಜುಗಳು
- ಕಾನೂನು ವಿಶ್ವವಿದ್ಯಾಲಯ
- ಗ್ರಾಮೀಣ ಪ್ರದೇಶಗಳಲ್ಲಿ 118 ಡಿಗ್ರಿ ಕಾಲೇಜುಗಳು
- ಸಾಕ್ಷರತೆ ಶೇ 72. ಸಂಪೂರ್ಣ ಯಶಸ್ವಿಗೊಳ್ಳುತ್ತಿರುವ ಸಾಕ್ಷರತಾ ಆಂದೋಲನ.
- 11727 ಪ್ರಾಥಮಿಕ ಶಾಲೆಗಳ ಸ್ಥಾಪನೆ. ಬಹುತೇಕ ಎಲ್ಲಾ ಗ್ರಾಮಗಳಲ್ಲಿಯೂ ಶಾಲೆ
- ಶಿಕ್ಷಣದಲ್ಲಿ ವೈಜ್ಞಾನಿಕ ಸುಧಾರಣೆ
- ಶಿಕ್ಷಣ ವ್ಯವಸ್ಥೆಯನ್ನು ಧಾರ್ಮಿಕ ಮೂಲಭೂತವಾದದಿಂದ ರಕ್ಷಿಸಲಾಗಿದೆ.
- ವಿಭಿನ್ನ ವಿಶಿಷ್ಟ ವಿಜ್ಞಾನ ನಗರ ನಿರ್ಮಾಣ
- ಸರ್ಕಾರಿ ನೆರವಿನ 1650 ಹೊಸ ವಾಚನಾಲಯಗಳು
- ಪ್ರಸಕ್ತ ಸಾಲಿನಲ್ಲಿ 3900 ಕೋಟಿ ರೂ.ಗಳ ನೆರವು ಶಿಕ್ಷಣಕ್ಕೆ
- ಮೀನುಗಾರಿಕೆ-ಜಾನುವಾರು ವಿ.ವಿ. ಸೇರಿ ಆರು ವಿಶ್ವವಿದ್ಯಾಲಯಗಳು
- ಕಾಲೇಜು ಸರ್ವಿಸ್ ಕಮಿಷನ್ ಮತ್ತು ಸ್ಕೂಲ್ ಸರ್ವಿಸ್ ಕಮಿಷನ್‌ಗಳು ಶಿಕ್ಷಕರ ಹುದ್ದೆಗಳಿಗೆ ನಿಷ್ಪಕ್ಷಪಾತದ ಆಯ್ಕೆ ಮಾಡಲು
- ನೇತಾಜಿ ಸುಭಾಷ್‌ಚಂದ್ರಬೋಸ್ ಮುಕ್ತ ವಿಶ್ವವಿದ್ಯಾಲಯ
- ಕಳೆದ 5 ವರ್ಷಗಳಲ್ಲಿ 30031 ಪ್ರಾಥಮಿಕ ಶಾಲೆಗಳ ಶಿಕ್ಷಕರ ನೇಮಕಾತಿ
- ಸ್ಕೂಲ್ ಸರ್ವಿಸ್ ಕಮಿಷನ್ ಮೂಲಕ 15723 ಶಿಕ್ಷಕರ ನೇಮಕ ಕಳೆದ 3 ವರ್ಷಗಳಲ್ಲಿ.

ಸಿನಿಮಾ

ಮನೋ ವೈಜ್ಞಾನಿಕತೆ ಹೇಳುವ ಯತ್ನ

ತಂದೆ ತಾಯಂದಿರು ತಮ್ಮ ಮಕ್ಕಳ ಬಾಲ್ಯದಲ್ಲಿ ಅವರ ಮನಸ್ಸಿನ ಮೇಲೆ ಬೀರಿದ ಪ್ರಭಾವ ಮುಂದೆ ಅವರ ಜೀವನ ರೂಪಿಸುವಲ್ಲಿ ಯಾವ ಪರಿಣಾಮ ಬೀರಬಹುದು ಎಂಬುದನ್ನು 'ಶಾಪ' ಚಿತ್ರ ಹೇಳಬಯಸಿದೆ.

ಬಡ ರೈತನೊಬ್ಬ ತನ್ನ ಆರ್ಥಿಕ ದುಸ್ಥಿತಿಯಿಂದಾಗಿ ಸದಾ ಹೆಂಡತಿ ಮಕ್ಕಳ ಮೇಲೆ ಹರಿಹಾಯ್ದು, ತನ್ನ ಮಗ ತನಗೆ ಸಹಾಯಕನಾಗಲಾರದ ನಿಷ್ಪ್ರಯೋಜಕ ಎಂಬ ಕಲ್ಪನೆಯಿಂದ 'ನಿನ್ನ ಕೈಯಲ್ಲಿ ಏನೂ ಮಾಡಲಾಗದು' ಎಂಬ 'ಶಾಪ'ವನ್ನು ಮಗನಿಗೆ ಬಳುವಳಿಯಾಗಿ ಕೊಡುತ್ತಾನೆ. ಪದೇ ಪದೇ ಅದೇ ಮಾತು ಹೇಗೆಲ್ಲಾ ಕಾಡಿ ಮುಂದೆ ಅವರ ಕೊರಳಿಗೆ ಉರುಳಾಗುತ್ತದೆ ಎಂಬುದನ್ನು ನಿರ್ದೇಶಕ ಅಶೋಕ ಪಾಟೀಲ ತಮ್ಮ ಕನ್ನಡದ ಮೊದಲ ಯತ್ನದಲ್ಲಿ ನಿರೂಪಿಸುವಲ್ಲಿ ಭಾಗಶಃ ಯಶಸ್ವಿಯಾಗಿದ್ದಾರೆ.

ಪ್ರತಿ ಹಂತದಲ್ಲಿಯೂ ನಾಯಕ ತಾನು ಮಾಡುವ ಪ್ರಯತ್ನ ಎಲ್ಲಿ ತಿರಸ್ಕೃತವಾಗುವುದೋ ಎಂಬ ಭಯದಲ್ಲಿ ಅದನ್ನು ಮಾಡುವ ಉಸಾಬಾರಿಗೇ ಹೋಗುವುದಿಲ್ಲ. ತನ್ನ ಭಾವನೆಗಳನ್ನು ಹಂಚಿಕೊಳ್ಳಲಾರದೆ ಮನಸ್ಸಿನಲ್ಲಿಯೇ ಆಶಾಗೋಪುರ ಕಟ್ಟುತ್ತಾ ತನಗೆ ಮತ್ತು ತನ್ನನ್ನು ಪ್ರೀತಿಸುವವರಿಗೆ ಕಂಟಕಪ್ರಾಯವಾಗುತ್ತಾನೆ.

ಹೊರಗೆ ಕಾವೇರಿ ನೀರಿನ ಹಕ್ಕಿಗಾಗಿ ಪ್ರತಿಭಟನೆ ನಡೆದರೆ, ನಾಯಕನ ಮನಸ್ಸಿನಲ್ಲಿ ಕಳೆದು ಹೋದ ನಾಯಕಿ ಕಾವೇರಿಯನ್ನು ಹೇಗಾದರೂ ಪಡೆಯಬೇಕೆಂಬ ತರ್ಕದಲ್ಲಿ ಗೊತ್ತುಗುರಿ ಇಲ್ಲದ ಯೋಚನೆಗಳು ಹರಿದಾಡುತ್ತವೆ.

ನಾಯಕಿ ಕಾವೇರಿ ವೈದ್ಯಳಾದರೂ ವಿಧವಾ ವಿವಾಹದ ಬಗ್ಗೆ ಅರಿವು ಮೂಡಿಸಿ ಅವರ ಬದುಕಿಗೊಂದು ಆಶಾಕಿರಣವಾಗಬಯಸುತ್ತಾಳೆ. ಲಂಡನ್‌ಗೆ ಹೋಗಬೇಕಾದ ಸಂದರ್ಭವನ್ನು ತಿರಸ್ಕರಿಸಿ ಬಡ ಮಹಿಳೆ-ಮಕ್ಕಳ ಸೇವೆ ಮಾಡಬೇಕೆಂಬ ಹಂಬಲ ಅವಳದು. ಇದು ಚಿತ್ರದ ಇನ್ನೊಂದು ಮಗ್ಗುಲನ್ನು ಹೇಳುತ್ತದೆ.

ಒಮ್ಮೆ ಕಾವೇರಿ ನದಿ ದಿಢೀರನೆ ಉಕ್ಕಿ ನಾಯಕನ ಕಾಫಿ ಗೋದಾಮನ್ನು ಮುಳುಗಿಸುತ್ತದೆ. ಇದು ನಾಯಕನ ಬದುಕಿಗೂ ಅನ್ವಯವಾಗುತ್ತದೆ.

ಚಿತ್ರದ ಮೊದಲಾರ್ಧ ಕಥೆಯನ್ನು ಸೊಗಸಾಗಿ ಪ್ರತಿಬಿಂಬಿಸಿದರೆ ನಂತರ ಕಥೆಯ ನಿರೂಪಣೆ ಬೇರೆಯೇ ದಾರಿ ಹಿಡಿಯುತ್ತದೆ. ಮಸಾಲೆ ಅಂಶಗಳು, ಸಿನಿಮೀಯ ತಿರುವುಗಳು ಕಾಣಿಸಿಕೊಳ್ಳುತ್ತವೆ. ನಾಯಕನ ಪ್ರವೃತ್ತಿಯಲ್ಲಿ ಆಗುವ ತೀವ್ರತರವಾದ ಬದಲಾವಣೆಗಳಿಗೆ ಸಮರ್ಥನೆ ಸಿಗುವುದಿಲ್ಲ. ಮೊದಲಾರ್ಧದಲ್ಲಿ ಸಹಜತೆ ಮೂಡಿಸಿದ ನಿರ್ದೇಶಕರು ನಂತರ ಅದನ್ನು ಮರೆತಂತಿದೆ. ಇದು ಮಾಮೂಲಿ ಚಿತ್ರದತ್ತ ವಾಲಿಸುತ್ತದೆ.

ಕೊಡಗಿನ ಸಂಸ್ಕೃತಿಯನ್ನು ಬಿಂಬಿಸುವ ಹಾಡು ಗಮನ ಸೆಳೆಯುತ್ತದೆ. ಅಶೋಕ ಕಶ್ಯಪರ ಛಾಯಾಗ್ರಹಣ ಕಥೆಗೆ ಪೂರಕವಾಗಿದೆ. ಸಂಭಾಷಣೆ ಅರ್ಥಪೂರ್ಣವಾಗಿದೆ.

ರಮೇಶರ ಅಭಿನಯ ಸಹಜವಾಗಿದ್ದರೆ, ಅನು ಪ್ರಭಾಕರ್ ಪಾತ್ರಕ್ಕೆ ಜೀವ ತುಂಬಿದ್ದಾರೆ. ಚಿತ್ರದಲ್ಲಿ ಅಶ್ವತ್ಥ್, ಜೈಜಗದೀಶ್ ಇದ್ದಾರೆ. ಬಿ.ಸಿ.ಪಾಟೀಲ್ ವಿಭಿನ್ನ ಪಾತ್ರವಹಿಸಿದ್ದಾರೆ.



ಒಟ್ಟಾರೆ ಕನ್ನಡ ಚಿತ್ರರಂಗ ರಿಮೇಕ್‌ನತ್ತ ವಾಲಿದ್ದರೂ 'ಶಾಪ' ಚಿತ್ರತಂಡ ಒಂದು ವಿಭಿನ್ನ ಶೈಲಿಯ ಕಥೆಯನ್ನಾಧರಿಸಿ ಭರವಸೆಯನ್ನಂತೂ ಮೂಡಿಸಿದೆ.

ಎಂ. ಜಯರಾಮು

ಕಾನ್ಪುರಕ್ಕೆ ಕಿಚ್ಚು ಹಚ್ಚಿದವರು

ಇತ್ತೀಚೆಗಿನ ಕಾನ್ಪುರದಲ್ಲಿ ಹತ್ತಿ ಉರಿದ ಕೋಮು ದಳ್ಳುರಿ ಆಕಸ್ಮಿಕ ಘಟನೆಯೇ? ತಾಲಿಬಾನ್‌ಗಳು ಬುದ್ಧನ ವಿಗ್ರಹಗಳನ್ನು ಧ್ವಂಸಗೊಳಿಸುತ್ತಿರುವಾಗಲೇ ಭಾರತದಲ್ಲಿ ವ್ಯಾಪಕ ಕೋಮುಗಲಭೆ ಹಬ್ಬಿಸುವ ಹುನ್ನಾರವನ್ನು ಹೆಣೆಯಲಾಗಿತ್ತೇ? ಈ ಪಿತೂರಿ ರೂಪಿಸಿದವರಾರು? ಪಾತ್ರಧಾರಿಗಳಾರು? ನಿಜ ಏನು ಎಂಬುದರ ಬಗ್ಗೆ ಅಲ್ಲಿಗೆ ಭೇಟಿ ನೀಡಿದ ಸತ್ಯಶೋಧಕ ಸಮಿತಿ ಹಾಗೂ ಕೆಲವು ಪತ್ರಿಕೆಗಳ ಪ್ರತಿನಿಧಿಗಳು ಬೆಚ್ಚಿ ಬೀಳುವ ಸಂಗತಿಗಳನ್ನು ಗುರುತಿಸಿದ್ದಾರೆ. ಅದರತ್ತ ಎಚ್ಚರದ ಒಂದು ಲೇಖನ

ಮತಾಂಧತೆಯು ದ್ವೇಷವನ್ನೇ ಕಕ್ಕುತ್ತದೆ. ತಾಲಿಬಾನರು ಮುಗ್ಧ ಬುದ್ಧನ ವಿಗ್ರಹಗಳನ್ನು ಧ್ವಂಸಗೊಳಿಸುತ್ತಾರೆ. ಭಜರಂಗ ದಳದವರು ಕುರಾನ್ ಗ್ರಂಥಗಳನ್ನು ಸುಟ್ಟು ಹಾಕುತ್ತಾರೆ. ಮತಾಂಧತೆಯ ಕಿಚ್ಚು ಕಾಡ್ಗಿಚ್ಚಿನಂತೆ. ಕ್ಷಣಾರ್ಧದಲ್ಲಿ ಆವರಿಸಿ ಕೊಳ್ಳುತ್ತದೆ. ಎಲ್ಲವನ್ನು, ಮಾನವೀಯತೆಯನ್ನು ಸಹ ಸುಟ್ಟು ಭಸ್ಮ ಮಾಡಲು ಹವಣಿಸುತ್ತದೆ.

ಅವ್ಯಾಹತ ಹಿಂಸಾಚಾರ

ಇತ್ತೀಚೆಗೆ ಉತ್ತರ ಪ್ರದೇಶದ ಕಾನ್ಪುರ ನಗರದಲ್ಲಿ ಹತ್ತಿಕೊಂಡ ಕೋಮು ಅಗ್ನಿಯು ನಗರವನ್ನು ಮಾರ್ಚ್ 16 ರಿಂದ 19 ರ ವರೆಗೆ ದಹಿಸಿತ್ತು. ಸತತ 4 ದಿನ ಕಾನ್ಪುರದ ವಿವಿಧ ಪ್ರದೇಶಗಳಲ್ಲಿ ನಡೆದ ಹಿಂಸಾಚಾರಗಳಲ್ಲಿ ಸಹಾಯಕ ಜಿಲ್ಲಾಧಿಕಾರಿಯೊಬ್ಬರೂ ಸೇರಿದಂತೆ ಒಟ್ಟು 14 ಜನ ಸತ್ತಿದ್ದಾರೆ. ಸತ್ತವರ ಪೈಕಿ 13 ಜನ ಪೋಲೀಸ್ ಗುಂಡೇಟುಗಳಿಂದ ಪ್ರಾಣಕಳೆದುಕೊಂಡಿದ್ದು ಅವರಲ್ಲಿ ಒಟ್ಟು 12 ಜನ ಅಲ್ಪಸಂಖ್ಯಾತ ಮುಸ್ಲಿಂ ಸಮಾಜಕ್ಕೆ ಸೇರಿದವರು. ಗಾಯಗೊಂಡ ನೂರಾರು ಜನರಲ್ಲಿಯೂ ಹೆಚ್ಚಿನವರು ಅಲ್ಪಸಂಖ್ಯಾತರು. ಬಂಧಿಸಲ್ಪಟ್ಟು ಜೈಲಿನಲ್ಲಿ ಇರುವ 273 ಜನರ ಪೈಕಿ ಹೆಚ್ಚಿನವರು ಅಲ್ಪಸಂಖ್ಯಾತರು. ಅವ್ಯಾಹತವಾಗಿ ನಡೆದ ಹಿಂಸಾಚಾರದಲ್ಲಿ ನೂರಾರು ಅಂಗಡಿ ಮುಗ್ಗಟ್ಟುಗಳನ್ನು ಲೂಟಿ ಮಾಡಲಾಯಿತು ಹಾಗೂ ಬೆಂಕಿ ಹಚ್ಚಿ ಸುಡಲಾಯಿತು.

ಪ್ರಚೋದನಾತ್ಮಕ ಕೃತ್ಯಗಳು

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಸ್ತಿ ಹಾನಿ, ಪ್ರಾಣಹಾನಿಗೆ ಕಾರಣವಾದ ಈ ಗಲಭೆಯನ್ನು ಕುರಿತು ಎಲ್ಲ ವಿವರಗಳ ಸಂಗ್ರಹಕ್ಕೆ ಹೊರಟಾಗ ಅಫಘಾನಿಸ್ತಾನದ ತಾಲಿಬಾನ್ ಆಡಳಿತವು ಬಾಮಿಯಾನದ ಜಗತ್ಪ್ರಸಿದ್ಧ ಬುದ್ಧ ವಿಗ್ರಹಗಳನ್ನು ನಾಶ ಮಾಡಿದ್ದು ಮೂಲ ಪ್ರಚೋದನೆಯಾಗಿತ್ತು ಎಂದು ಕಂಡುಬರುತ್ತದೆ. ಇಸ್ಲಾಂಮಿನ ಹೆಸರಿನಲ್ಲಿ ತಾಲಿಬಾನ್ ಆಡಳಿತವು ಬುದ್ಧನ ವಿಗ್ರಹಗಳನ್ನು ನಾಶ ಮಾಡಿದ ಘಟನೆಯನ್ನು ವೈಭವೀಕರಿಸುವ ಭಿತ್ತಿಪತ್ರಗಳು ಕಾನ್ಪುರದಲ್ಲಿ ಮುಸ್ಲಿಂ ಸಮುದಾಯದವರೇ ಅಧಿಕ ಸಂಖ್ಯೆಯಲ್ಲಿ ವಾಸ

ಕೋಮುವಾದಿಗಳ ಮನಸೊಂದೇ ಕನಸೊಂದೇ

ಮಾಡುತ್ತಿರುವ ಪ್ರದೇಶಗಳಲ್ಲಿ ಕಾಣಿಸಿಕೊಂಡವು. ಇದರ ಬೆನ್ನ ಹಿಂದೆಯೇ ದೆಹಲಿಯಲ್ಲಿ ಪವಿತ್ರ ಕುರಾನ್ ಪ್ರತಿಗಳನ್ನು ಭಜರಂಗದಳದವರು ಬೆಂಕಿ ಹಚ್ಚಿ ಸುಟ್ಟು ಹಾಕಿದ್ದಾರೆ ಎಂಬ ವದಂತಿಗಳು ಹಬ್ಬಿದ್ದರಿಂದ ಪರಿಸ್ಥಿತಿ ಪ್ರಕ್ಷುಬ್ಧಗೊಳ್ಳುವಂತಾಯಿತು. ಇಂಟರ್‌ನೆಟ್ ತಂತ್ರಜ್ಞಾನವನ್ನು ಬಳಸಿ ಬಜರಂಗದಳದ ಕಾರ್ಯಕರ್ತರು ಕುರಾನ್ ಪ್ರತಿಯನ್ನು ಸುಡುವ ಪ್ರಚೋದನಾತ್ಮಕ ಫೋಟೋಗಳನ್ನು ಪ್ರಸಾರ ಮಾಡಲಾಯಿತು. ಸಂಯುಕ್ತ ರಾಷ್ಟ್ರಗಳ ಕಛೇರಿ ಎದುರು ಭಜರಂಗದಳದವರು ಏರ್ಪಡಿಸಿದ ತಾಲಿಬಾನ್ ವಿರೋಧಿ ಮತ ಪ್ರದರ್ಶನದಲ್ಲಿ ಕುರಾನ್ ಗ್ರಂಥವನ್ನು ಸುಟ್ಟು ಹಾಕಿದ ಆರೋಪದ ಮೇಲೆ ರಬೀನ್ ಶರ್ಮಾ ಮತ್ತು ಜಗದೀಪ್ ಎಂಬುವರನ್ನು ಬಂಧಿಸಿದ ಸುದ್ದಿಯೂ ಶರವೇಗದಲ್ಲಿ ಹರಡಿತು.

ಪ್ರಚೋದನಾತ್ಮಕ ಸುದ್ದಿ ಹರಡುತ್ತಿದ್ದಂತೆ ಸ್ಟುಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ ಎಂಬ ಮೂಲ ಭೂತವಾದಿ ವಿದ್ಯಾರ್ಥಿ ಸಂಘಟನೆಯು ಕಾರ್ಯೋನ್ಮುಖವಾಯಿತು. ಬೆಳಗಾಗುತ್ತಿದ್ದಂತೆ ಪವಿತ್ರ ಕುರಾನ್ ಪ್ರತಿಗಳನ್ನು ಸುಡುವ ಚಿತ್ರಗಳುಳ್ಳ ಭಿತ್ತಿಪತ್ರಗಳು ಕಾನ್ಪುರದ ಮಸೀದಿ ಗೋಡೆಗಳ ಮೇಲೆ ಕಾಣಿಸಿಕೊಂಡವು. ಈ ತರಹದ ಭಿತ್ತಿಪತ್ರಗಳು ಮುಂಬಯಿ, ಪುಣೆ, ಹೈದರಾಬಾದ್ ಮುಂತಾದ ನಗರ ಗಳಲ್ಲಿಯೂ ಕಾಣಿಸಿಕೊಂಡವು. ಪ್ರಚೋದನಾತ್ಮಕ ಕರಪತ್ರಗಳನ್ನು ಹಂಚಲಾಯಿತು. ಮಾರ್ಚ್ 15 ರಂದು ಕಾನ್ಪುರದ ವಿವಿಧ ಮುಸ್ಲಿಂ ಸಂಘಟನೆಗಳು ಮರುದಿನ ಶುಕ್ರವಾರದ ನಮಾಜ್ ಪ್ರಾರ್ಥನೆಗಳ ನಂತರ ಕಪ್ಪು ಪಟ್ಟಿಗಳನ್ನು ಧರಿಸುವ ಮೂಲಕ ಪ್ರತಿಭಟಿಸಲು ನಿರ್ಧರಿಸಿದವು. ಸ್ಥಳೀಯ ಆಡಳಿತವು ಸೂಕ್ತ ಎಚ್ಚರಿಕೆಯ ಕ್ರಮಗಳನ್ನು ಕೈಗೊಂಡಿದ್ದರೆ ಎಷ್ಟೊಂದು ಅನಾಹುತವನ್ನು ತಪ್ಪಿಸ ಬಹುದಾಗಿತ್ತು.

ಯುವಕರ ಗುಂಪೊಂದು ಪ್ರಧಾನಿ ವಾಜಪೇಯಿಯವರ ಪ್ರತಿಕೃತಿಯನ್ನು ಸುಡಲು ಯತ್ನಿಸಿದಾಗ ಆರಂಭವಾದ ಗಲಭೆಯನ್ನು ನಿಯಂತ್ರಿಸು ವುದು ಅಸಾಧ್ಯವಾಯಿತು. ಪೋಲೀಸರು ನೇರವಾಗಿ ಗುಂಡು ಹಾರಿಸಿದಾಗ 3 ಜನ ಯುವಕರು ಹೆಣವಾದರು. ಗಲಭೆ ಮತ್ತಷ್ಟು ಉಗ್ರವಾಗಿ ಸಹಾಯಕ ಜಿಲ್ಲಾಧಿಕಾರಿ ಸಿ.ಪಿ.ಪಾಠಕ್ ಅವರನ್ನು ಬಲಿತೆಗೆದು ಕೊಂಡಿತು. ದಂಗೆ ಅನಿಯಂತ್ರಿತವಾಗಿ ಮುಂದುವರೆದಂತೆ ನಗರದ ಅನೇಕ ಕಡೆಗಳಲ್ಲಿ ಪೋಲೀಸರು ಜನಜಂಗುಳಿ ಯನ್ನು ಚದುರಿಸಲು ಗುಂಡು ಹಾರಿಸಿದರು. ಗಲಭೆಗ್ರಸ್ತ ಪ್ರದೇಶಗಳಲ್ಲಿ ಭಜರಂಗದಳ ಮತ್ತು ಇತರ ಸಂಘಪರಿವಾರದ ಕಾರ್ಯಕರ್ತರು ಅನೇಕ ಮಸೀದಿಗಳ ಮೇಲೆ ಧಾಳಿ ಮಾಡಿ ಹಾನಿ ಮಾಡಿದರು ಮಾತ್ರವಲ್ಲದೆ ಮುಸಲ್ಮಾನರ ವ್ಯಾಪಾರ ಮಳಿಗೆಗಳಿಗೆ ಬೆಂಕಿ ಹಚ್ಚಿದರು. ಪ್ರಾದೇಶಿಕ ಸಶಸ್ತ್ರ ಪಡೆಯ ಜವಾನರು ಬಟ್ಟೆ ಹಾಗೂ ಹಣ್ಣಿನ ಅಂಗಡಿಗಳನ್ನು, ಪೌಲ್ಟ್ರಿಗಳನ್ನು ಲೂಟಿ ಮಾಡಿದರು. ಪೋಲೀಸ್ ಅತಿರೇಕಗಳಿಂದ ನೊಂದವರು ಅನಿವಾರ್ಯವಾಗಿ ಘರ್ಷಣೆಗೆ ಇಳಿದಾಗ ಪೋಲೀಸರು ನಿರ್ದಾಕ್ಷಿಣ್ಯವಾಗಿ ಗುಂಡು ಹಾರಿಸಿ ಜನತೆಯ ಪ್ರತಿರೋಧವನ್ನು ಹತ್ತಿಕ್ಕಿದರು.

ಕಾನ್ಪುರದ ಘಟನೆಗಳು ಹಿಂದು ಮೂಲಭೂತವಾದಗಳು ಮತ್ತು ಮುಸ್ಲಿಂ ಮೂಲಭೂತವಾದಗಳು ಹೇಗೆ ಪರಸ್ಪರ ಒಂದನ್ನೊಂದು ಬಲಪಡಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಕಳೆದ ಕೆಲವು ವರ್ಷಗಳಿಂದ ಯುವಕರನ್ನು ಬಜರಂಗದಳದ ಮಾದರಿಯಲ್ಲಿಯೇ ಸಂಘಟಿಸುತ್ತಿವೆ. ಎರಡೂ ರೀತಿಯ ಈ ಮೂಲಭೂತವಾದದ ಬೆಳವಣಿಗೆಯು ಆತಂಕದ ವಿಷಯವಾಗಿದ್ದು ಮೂಲಭೂತ ವಾದದ ವಿರುದ್ಧ ಯಾವುದೇ ಹೋರಾಟವು ಈ ಎರಡೂ ಗುಂಪುಗಳ ವಿರುದ್ಧ ನಡೆಸಬೇಕು ಎಂಬುದನ್ನು ಮರೆಯಬಾರದು.

ಇಲ್ಲಿ ತಾಲಿಬಾನ್‌ರ ಬಗ್ಗೆ ಒಂದು ಮಾತು ಹೇಳದೇ ಇರಲಾಗದು. ಅದು ಸಿಐಎ ಬೆಳೆಸಿದ ರಾಕ್ಷಸ. ಜಗತ್ತಿನ ಅತ್ಯಂತ ಹೆಚ್ಚು ಮತಾಂಧ ಮುಸ್ಲಿಂ ಶಕ್ತಿಗಳನ್ನು ಒಟ್ಟಿಗೆ ತಂದು ಅದನ್ನು ಸೃಷ್ಟಿಸಲಾಗಿದೆ. ಅಮೇರಿಕ ಇದಕ್ಕಾಗಿ 3 ಬಿಲಿಯನ್ ಡಾಲರುಗಳ ನೆರವು ನೀಡಿದೆ. ಸೋವಿಯತ್‌ನ್ನು ಎದುರಿಸಲು ಸೃಷ್ಟಿಸಲಾದ ಈ ಪೆಡಂಭೂತವು ಇಂದು ಅಪಾಯಕಾರಿಯಾಗಿ ಬೆಳೆದಿದೆ.

- ನಿತ್ಯಾನಂದ ಸ್ವಾಮಿ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್ ವೈ ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : S.Y.GURUSHANTH